ಕರ್ಮವೀರ

ಜನಪ್ರಿಯ ಸಚಿತ್ರ ವಾರಪತ್ರಿಕೆ

ಸಂಪಾದಕರು :
ಹ. ರಾ. ಪುರೋಹಿತ]

- ಬಲ್ಲವರ ನುಡಿಗಳು -

ಜನಾಭಿಪ್ರಾಯದ ತೀರ್ಪು ನೀತಿಗೇಡಿಯಾಗಲಿ ವಿವೇಕಗೇಡಿಯಾಗಲಿ ಆಗಿರುವದು ಅಪೂರ್ವ. ಆದರಿಂದ ಲೋಕದ ಅಭಿಪ್ರಾಯ ಸರಿಹೋಗದವನು ತನ್ನದೇ ಏನೋ ತಪ್ಪಿರಬೇಕೆಂದು ಹೃದಯ ಪರೀಕ್ಷೆ ಮಾಡಿಕೊಳ್ಳುವದೊಳಿತು.

—ಥಾಮಸ್ ಜೆಫರ್ಸನ್

★

ದೇವರು ಹೆಂಗಸನ್ನು ನಿರ್ಮಿಸಿದಾಗ ಗಂಡಸಿನ ಮೆದುಳಿಂದಾಗಲಿ ಪಾದದಿಂದಾಗಲಿ ಏನನ್ನೂ ತೆಗೆದುಕೊಳ್ಳಲಿಲ್ಲ. ಗಂಡಸಿನ ಪಕ್ಕೆಲುಬಿನ ಒಂದು ತುಣುಕನ್ನು ಕತ್ತರಿಸಿಕೊಂಡು ಹೆಂಗಸನ್ನು ನಿರ್ಮಿಸಿದನೆಂದು ಬೈಬಲ್ಲಿನಲ್ಲಿ ಹೇಳಿದೆ. ಆದುದರಿಂದ ಹೆಂಗಸು ಗಂಡಸನ್ನು ಆಳುವವಳಾಗಲಿ ಆಳಾಗಲಿ ಆಗಿರದೆ ಅವನ ಹೃದಯಕ್ಕೆ ಅತಿ ಸಮೀಪದವಳಾಗುವದೇ ದೇವರ ಇಚ್ಛೆ.

—ಜಾನ್ ಬೇಕರ್



ವಜ್ರೇಶ್ವರಿಯ ದೇವಾಲಯ

ವಜ್ರೇಶ್ವರಿಯಲ್ಲಿಯ ವಜ್ರಾದೇವಿಯ ದೇವಾಲಯದ ಗೋಪುರವಿದು. ಇದರ ಬಗ್ಗೆ ವಿವರಗಳನ್ನು ೫ನೆ ಪುಟದಲ್ಲಿ ಓದುವಿರಿ.

ವಜ್ರೇಶ್ವರಿಯ ಬಿಸಿನೀರ ಕೆರೆ --ಪುಟ ೫

ಚಿಕ್ಕ ಕಥೆ

ಹೃದಯ ಪರೀಕ್ಷೆ

ಬರೆದವರು:
ಶ್ರೀಮತಿ ಜಯಾ. ವಿ ಶೆಟ್ಟಿ ಉಡುಪಿ

ಮದುವೆಯಾದ ಸ್ವಲ್ಪ ದಿನಗಳೊಳಗೆ ಮನೋಹರನು ತನ್ನ ಹೆಂಡತಿ ವಿಮಲೆಯನ್ನು ಕರೆದುಕೊಂಡು ಮುಂಬಯಿಗೆ ಬಂದಿದ್ದ. ಅಂದಿನಿಂದ ಅವರ ಜೀವನವು ಸುಖಮಯವಾಗಿ ಸಾಗಿತ್ತು. ಗಂಡ ಹೆಂಡಿರ ಪ್ರೇಮವಂತೂ ವರ್ಣಿಸಿ ತೀರದು. ಮನೋಹರನು ನಿತ್ಯವೂ ತನ್ನ ಕೆಲಸ ಮುಗಿದೊಡನೆ ವಿಮಲೆಯನ್ನು ಕರಕೊಂಡು ತಿರುಗಾಡಲಿಕ್ಕೆ ಹೋಗುತ್ತಿದ್ದ. ಮನೆಯಲ್ಲಿ ವಿಮಲೆಯಿರದಿದ್ದರಂತೂ ಅವನಿಗೆ ಒಂದು ಗಳಿಗೆಯೂ ಆಗುತ್ತಿರಲಿಲ್ಲ.

ಅಂದು ಸಂಜೆ ಅವರಿಬ್ಬರೂ ಗಾಳಿ ಸೇವನೆಗಾಗಿ ಶಿವಾಜಿ ಪಾರ್ಕಿಗೆ ಹೋಗಿದ್ದರು. ಅಲ್ಲಿ ಮಾತಿಗೆ ಮಾತು ಬಂದು ಮನೋಹರನು ವಿಮಲೆಯೊಡನೆ "ವಿಮಲಾ' ನಾವು ಇಲ್ಲಿಗೆ ಬಂದು ಸಾಧಾರಣ ಎಷ್ಟು ಸಮಯವಾಯಿತು ಗೊತ್ತೇ?" ಎಂದ.

"ಕಳೆದ ಡಿಸೆಂಬರಿನಲ್ಲಲ್ಲವೇ ನಮಗೆ ಮದುವೆಯಾದುದು? ಬಂದು ಎಂಟು ತಿಂಗಳಾದುವು ಎಂದು ತೋರುತ್ತೆ.?" ಎಂದಳು ವಿಮಲೆ.

"ಅಹಾ! ಎಂಟು ತಿಂಗಳು ಎಷ್ಟೊಂದು ಬೇಗ ಸಂದುವು, ಅಲ್ಲವೇ? ಮದುವೆಯಾದುದು ಮೊನ್ನೆ ಮೊನ್ನೆಯೆಂಬಂತೆ ತೋರುತ್ತದೆ ನನಗೆ. ಆದರೆ – – – –"

"ಆದರೆ ಏನು?"

"ನಿನಗೆ ಈ ಸಲ ತವರು ಮನೆಗೆ ಹೋಗಲೇ ಬೇಕೆಂಬ ಮನಸ್ಸಿದ್ದರೆ ಇನ್ನು ಸದ್ಯದಲ್ಲಿಯೇ ಇಲ್ಲಿಂದ ಹೊರಡಬೇಕಾಗುವುದಷ್ಟೆ! ಅಲ್ಲಿಗೆ ಹೋದರೆ, ಮಗುವಿಗೆ ನಾಲ್ಕು ತಿಂಗಳಾಗುವ ತನಕ ನೀನು ಖಂಡಿತವಾಗಿಯೂ ಬರಲಿಕ್ಕಿಲ್ಲವೆಂದು ನನಗೆ ಗೊತ್ತುಂಟು. ಅಷ್ಟು ಸಮಯ ನಾನೊಬ್ಬನೇ ಇಲ್ಲಿ ಹೇಗೆ ಕಳೆಯಲಿ? ನೀನಿಲ್ಲದಿದ್ದರೆ ಮನೆಗೆ ಹೋಗುವುದೇ ಬೇಡವೆಂದು ತೋರುತ್ತದೆ ನನಗೆ."

"ಅಯ್ಯೋ, ಹಾಗೆಂದ ಮಾತ್ರಕ್ಕೆ ತವರಿಗೆ ಹೋಗದೆ ಉಪಾಯವಿದೆಯೇ? ಪ್ರಥಮ ಬಾರಿ ಅಲ್ಲಿಗೆ ಹೋಗುವುದು ವಾಡಿಕೆಯಲ್ಲವೆ?"

"ಏಕೆ ವಿಮಲಾ, ಇಲ್ಲಿಯೇ ನಮ್ಮ ಆಸ್ಪತ್ರೆಯಲ್ಲೇ ಹೆರಿಗೆ ಮಾಡಿಸಬಹುದಲ್ಲ? ಒಳ್ಳೆಯ ಸೂಲಗಿತ್ತಿಯರು, ನರ್ಸ್‌ಗಳು ಇಲ್ಲಿದ್ದಾರೆ. ಅದರಲ್ಲೂ ರೂಪಳು ಒಬ್ಬಳೇ ಸಾಕು. ನೀನು ನನ್ನ ಹೆಂಡತಿಯೆಂದು ತಿಳಿದರೆ ಖಂಡಿತವಾಗಿಯೂ ಅವಳು ನಿನ್ನನ್ನು ತಾಯಿಗಿಂತ ಹೆಚ್ಚಾಗಿ ನೋಡುವಳು."

"ಏನೇ ಆಗಲಿ. ಈ ಸಲ ನನಗೆ ಅಲ್ಲಿಗೆ ಹೋಗಲೇಬೇಕೆಂದನ್ನಿಸುತ್ತಿದೆ," ಎಂದು ಹಟ ಹಿಡಿದಳು ವಿಮಲಾ.

"ಅದಿರಲಿ ವಿಮಲಾ, ನೀನು ಇಲ್ಲಿಗೆ ಬಂದು ಎಂಟು ತಿಂಗಳಾದರೂ ಅಷ್ಟು ಹತ್ತಿರವಿರುವ ನಮ್ಮ ಆಸ್ಪತ್ರೆಯನ್ನು ಒಮ್ಮೆಯಾದರೂ ಸಂದರ್ಶಿಸಲಿಲ್ಲ. ಇಡೀ ನಗರವನ್ನು ತಿರುಗಿರುವೆ. ನಿನಗೆ ನಮ್ಮ ನರ್ಸ್‌ಗಳ ಪರಿಚಯವನ್ನು ಮಾಡಿಕೊಡುವೆ. ನಾಳೆ ಬರುವೆಯಾ?"

"ಏಕಾಗದು? ಅವಶ್ಯವಾಗಿಯೂ ಬರುವೆನು. ಒಂದೆರಡು ಹೆಜ್ಜೆ ನಡೆದರಾಯಿತು— ಅಷ್ಟೇ ಅಲ್ಲವೆ? ನನಗೂ ನಿಮ್ಮ ಆಸ್ಪತ್ರೆಯನ್ನು ನೋಡಬೇಕೆಂದು ತುಂಬಾ ಆಸೆ ಇದೆ."

ವಿಮಲೆಯು ಒಮ್ಮೆ ಆಸ್ಪತ್ರೆಯಲ್ಲಿ ಹೆರಿಗೆಗೆ ಇರುವ ಸುಖ ಸೌಕರ್ಯಗಳನ್ನು ಕಂಡರೆ ಊರಿಗೆ ಹೋಗುವ ಹಟಹಿಡಿಯಲಾರಳೆಂದು ಮನೋಹರನ ಭಾವನೆಯಾಗಿತ್ತು. ಅವಳ ಒಪ್ಪಿಗೆ ದೊರೆತುದರಿಂದ ಅವನಿಗೆ ಬಹಳ ಸಂತೋಷವಾಯಿತು.

× × ×

ಮರುದಿನ ಸಂಜೆ, ವಿಮಲೆಯು ಅಚ್ಚುಕಟ್ಟಾಗಿ ಡ್ರೆಸ್ ಮಾಡಿಕೊಂಡು ಆಸ್ಪತ್ರೆಗೆ ಹೊರಟಳು. ಅತ್ತ ನರ್ಸ್‌ಗಳೆಲ್ಲರೂ ತಮ್ಮ ಡಾಕ್ಟರ್ ಸಾಹೇಬರ ಪತ್ನಿಯು ಬರುವಳೆಂದು ತಿಳಿದು ಬಹಳ ಕುತೂಹಲದಿಂದ ಅವಳ ಹಾದಿಯನ್ನೇ ಇದಿರುನೋಡುತ್ತಾ ಕುಳಿತಿದ್ದರು. ಬಂದ ಕೂಡಲೇ ಅವರು ಆಕೆಯನ್ನು ಬಹಳ ಆದರದಿಂದ ಸ್ವಾಗತಿಸಿದರು.

ಮನೋಹರನು ತನ್ನ ಪತ್ನಿಗೆ ಅವರೆಲ್ಲರ ಪರಿಚಯವನ್ನು ಮಾಡಿಕೊಟ್ಟ. ಮೊತ್ತ ಮೊದಲು ಅವಳಿಗೆ ರೂಪಳ ಪರಿಚಯವಾಯಿತು. ಎಲ್ಲರಿಗಿಂತಲೂ ರೂಪಳೇ ಮನೋಹರನೊಡನೆ ಹೆಚ್ಚಿನ ಸಲಿಗೆಯಿಂದ ಮಾತನಾಡುತ್ತಿದ್ದಳು. ಮನೋಹರನು ಕೂಡಾ ಅವಳೊಡನೆ ಹಾಗೆಯೇ ವರ್ತಿಸುತ್ತಿದ್ದ. ಅವಳು ವಿಮಲೆಗೆ ಆಸ್ಪತ್ರೆಯ ಪ್ರತಿಯೊಂದು ಭಾಗವನ್ನೂ ತೋರಿಸಿದ ನಂತರ ಕೊನೆಗೆ ಅವಳನ್ನು ಕರಕೊಂಡು ತೋಟಕ್ಕೆ ಬಂದಳು. ಅದರೇನಾಶ್ಚರ್ಯ! ರೂಪಳಿಗೆ ವಿಮಲೆಯ ಮುಖವು ಬಹಳ ಬಾಡಿದಂತೆ ಕಂಡಿತು. ಅವಳಿಗೆ ಆಶ್ಚರ್ಯವಾಯಿತು. ತಾವು ಮಾಡಿದ ಆದರಸತ್ಕಾರಗಳಲ್ಲಿ ಏನಾದರೂ ಕುಂದುಕೊರತೆಗಳುಂಟಾಗಿವೆಯೋ ಏನೋ ಎಂದು ಅವಳು ಭಾವಿಸಿದಳು. ಅವಳು ಬಾಯಿಂದ ಒಂದಿಷ್ಟೂ ಮಾತನಾಡಲಿಲ್ಲ. ಸುಮಾರು ಏಳು ಗಂಟೆ ಹೊತ್ತಿಗೆ ವಿಮಲೆಯು ಆಸ್ಪತ್ರೆಯಿಂದ ಹೊರಟಳು. ರೂಪಳು ಅವಳನ್ನು ಮನೆಯ ವರೆಗೆ ಬಿಟ್ಟು ಬಂದಳು. ಆದರೆ ಅವಳ ಆ ಕಣ್ಣುಗಳ ವರ್ತನೆ ರೂಪಳಿಗೆ ಏನೂ ಸರಿಕಾಣಲಿಲ್ಲ.

ಆ ದಿನ ಮನೋಹರನು ಮನೆಗೆ ಬಂದಾಗ, ಎಂದಿನಂತೆ ವಿಮಲೆಯ ವಿನೋದದ ಮಾತುಕತೆಗಳಿಲ್ಲ. ಅವಳು ಮನೋಹರನನ್ನು ತಲೆಯೆತ್ತಿ ಕೂಡಾ ನೋಡಳು. ಆದರೆ ಸರಳ ಸ್ವಭಾವದ ಮನೋಹರನಿಗೆ ಏನೊಂದೂ ಅರಿಯದು. ಅವನು ತಾನಾಗಿಯೇ ಮಾತಿಗಾರಂಭಿಸಿದ.

'ಏನು ವಿಮಲೆ, ಹೇಗಿದೆ ನಮ್ಮ ಆಸ್ಪತ್ರೆ?'

'ಬಹಳ ಚೆನ್ನಾಗಿದೆ.'

'ರೂಪಳು ನಿನಗೆ ಎಲ್ಲವನ್ನೂ ತೋರಿಸಲಿಲ್ಲವೇ?'

'ತೋರಿಸಿದ್ದಾಳೆ. ಬಹಳ ಚತುರೆ ನಿಮ್ಮ ರೂಪಾ.'

'ಅಹುದು. ಬಹಳ ಚತುರೆ. ಮಾತಿನಂತೆ ಕೆಲಸದಲ್ಲಿಯೂ ಬಲು ಚುರುಕು ನೋಡು.'

'ಮತ್ತು ರೂಪದಲ್ಲೇನು ಕಡಿಮೆಯೆ?'

'ಅದಿರಲಿ ವಿಮಲಾ. ನೀನು ಮಂಗಳೂರಿಗೆ ಯಾವಾಗ ಹೊರಡುವೆ?'

'ಇಲ್ಲ ನಾನು ಹೋಗುವುದೇ ಇಲ್ಲ.'

'ಯಾಕೆ? ಇವತ್ತು ನಮ್ಮ ಆಸ್ಪತ್ರೆಯಲ್ಲೇ ಹೆರುವುದು ಉತ್ತಮವೆಂದು ತೋರಿತೇನು ನಿನಗೆ?'

'ಅಲ್ಲ. ನಿಮ್ಮನ್ನು ಒಬ್ಬರನ್ನೇ ಬಿಟ್ಟು ಹೋಗಲು ಮನಸ್ಸು ಒಪ್ಪುವದಿಲ್ಲ.'

'ವಿಮಲಾ, ನಿನಗೆ ಎಷ್ಟು ಪ್ರೀತಿ ನನ್ನ ಮೇಲೆ! ನೀನು ಏನೊಂದೂ ಯೋಚಿಸುವುದು ಬೇಡ. ನಿನ್ನ ಮತ್ತು ಮಗುವಿನ ಶುಶ್ರೂಷೆಯನ್ನು ರೂಪಳು ಚೆನ್ನಾಗಿಯೇ ಮಾಡುವಳು.'

ವಿಮಲೆಯ ಕಣ್ಣುಗಳಿಂದ ನೀರು ಹರಿಯತೊಡಗಿತು. ಆದರೆ ಗಂಡನಿಗೆ ತಿಳಿಯದಂತೆ ಅವಳು ಹೇಗೋ ಅದನ್ನು ಮರೆಮಾಚಿದಳು.

ಅಂದು ಇಡೀ ರಾತ್ರಿ ವಿಮಲೆಗೆ ನಿದ್ರೆ ಹತ್ತಲಿಲ್ಲ. ತಾನು ಮನೆ ಬಿಟ್ಟು ಹೋದರೆ ಏನೆಲ್ಲ ಸಂಭವಿಸಬಹುದೆಂದೇ ಅವಳ ಯೋಚನೆಯಾಗಿತ್ತು. ತಾನು ತವರು ಮನೆಗೆ ಹೋಗಿ ಐದಾರು ತಿಂಗಳುಗಳ ವರೆಗೆ ಬಾರದಿದ್ದರೆ ಗಂಡನು ಖಂಡಿತವಾಗಿಯೂ ರೂಪಳ ಮೋಹಜಾಲದಲ್ಲಿ ಬೀಳದಿರಲಿಕ್ಕಿಲ್ಲವೆಂದು ಅವಳು ಎಣಿಸಿದ್ದಳು. ಆ ದಿನ ಸಂಜೆ ತಾನು ನೋಡಿದ ಆಸ್ಪತ್ರೆಯ ದೃಶ್ಯಗಳೆಲ್ಲ ಅವಳ ಕಣ್ಣಿಗೆ ಕಟ್ಟಿದಂತಾದವು. ಅಲ್ಲಿ ಆ ಬಿಳಿ ಉಡುಪು ಉಡಿಗೆ ತೊಡಿಗೆಯ ನರ್ಸ್ ಯುವತಿಯರೆಲ್ಲರೂ ಅವಳಿಗೆ ರೂಪದಲ್ಲಿ ತನಗಿಂತ ಮಿಗಿಲೆಂಬಂತೆ ತೋರಿದರು. ಅಂತಹ ನೂರಾರು ಯುವತಿಯರ ನಡುವೆಯೇ ಇದ್ದು ಕೆಲಸ ಮಾಡುತ್ತಿರುವ ಗಂಡನು ತನ್ನನ್ನು ಕಂಡಾಗ ಏನೆಣಿಸುತ್ತಾನೋ? ತನ್ನ ಮೇಲಿನ ಪ್ರೀತಿಯು ಹೀಗೆಯೇ ಉಳಿದೀತೇ? ಎಂದು ಮೊದಲಾಗಿ ಅವಳು ಚಿಂತಿಸತೊಡಗಿದಳು. ಏನೇ ಇರಲಿ, ತಾನು ಈ ಸಲ ಹೆರುವುದಕ್ಕೆ ಮುಂಬಯಿಯಲ್ಲೇ ಇರುವುದು ಉತ್ತಮವೆಂದು ಅವಳು ನಿರ್ಣಯಿಸಿದಳು. ಮುಂಜಾನೆ ತನ್ನ ನಿರ್ಧಾರವನ್ನು ಅವಳು ಗಂಡನಿಗೆ ಹೇಳಿದಳು.

× × ×

ಬೆಳಿಗ್ಗೆ ಸುಮಾರು ಏಳು ಗಂಟೆಗೆ ಯಾರೋ ಬಾಗಿಲು ತಟ್ಟಿದ ಶಬ್ದವಾಯಿತು. ವಿಮಲೆಯು ಕೂಡಲೇ ಬಾಗಿಲು ತೆರೆದಳು.

"ಯಾರು ರೂಪಾದೇವಿಯರೇ? ಮುಂಜಾನೆ ಇಷ್ಟು ಬೇಗ ಬಂದಿರೇಕೆ?"

"ಏನಿಲ್ಲಮ್ಮಾ! ನಮ್ಮ ಡಾಕ್ಟರ್ ಸಾಹೇಬರು ಎಲ್ಲಿದ್ದಾರೆ?"

"ಅವರು ಎಲ್ಲಿಯೋ ಹೊರಗೆ ಹೋಗಿದ್ದಾರೆ. ಇವತ್ತು ಬೆಳಿಗ್ಗೆ ಐದು ಗಂಟೆಗೇನೇ ಯಾರೋ ಕರೆಯಲಿಕ್ಕೆ ಬಂದಿದ್ದರು."

"ನನಗೆ ಅವರೊಡನೆ ಸ್ವಲ್ಪ ಅಗತ್ಯದ ಕೆಲಸವಿತ್ತು........ಚಿಂತೆಯಿಲ್ಲ. ಸಂಜೆಗೆ ಬಂದರಿತ್ತು," ಎಂದು ಹೇಳಿ ರೂಪಳು ಅಲ್ಲಿಂದ ಹೊರಟುಹೋದಳು.

"ಬರಲಿ, ಬಾರದಿದ್ದರೆ ಸಾಯಲಿ. ಕೆಲಸವಿದ್ದರೆ ಆಸ್ಪತ್ರೆಯಲ್ಲಾಯಿತು. ಮನೆಯಲ್ಲಿ ನನ್ನ ಗಂಡನೊಡನೆ ಇವಳಿಗೇನು ಕೆಲಸವಪ್ಪಾ!" ಎಂದು ಎಣಿಸಿ, ವಿಮಲೆಯು ತನ್ನ ಕೆಲಸಕ್ಕೆ ಹೋದಳು. ಆ ದಿನ ವಿಮಲೆಯ ಅಡುಗೆಗೆ ಉಪ್ಪೂ ಇಲ್ಲ; ಖಾರವೂ ಇಲ್ಲ. ಅವಳ ತಲೆಯಲ್ಲಿ ಏನೇನೋ ಯೋಚನೆಗಳು ಸುಳಿಯುತ್ತಿದ್ದುವು. ಅವಳ ಗಂಡನು ಹೊರಗಿನಿಂದ ಬಂದವನೇ ಏನೊಂದೂ ಮಾತನಾಡದೆ ಸುಮ್ಮನೆ ಊಟಮಾಡಿ ಮನೆಯಿಂದ ಹೊರಬಿದ್ದ.

ಸಂಜೆ ಮನೋಹರನು ಮನೆಯಲ್ಲಿದ್ದ ಹೊತ್ತಿನಲ್ಲೇ ರೂಪಳು ಪುನಃ ಬಂದಳು.

"ಏನು ರೂಪ್, ಬಾ. ಇತ್ತ ಕಡೆಗೆ ಕುಳಿತುಕೋ" ಎಂದು ಮನೋಹರ ಹೇಳಿದ. ರೂಪಳು ಅಲ್ಲಿಯೇ ಅವನು ತೋರಿಸಿದ ಒಂದು ಕುರ್ಚಿಯ ಮೇಲೆ ಮಂಡಿಸಿದಳು.

"ಡಾಕ್ಟರ್ ಸಾಹೇಬರೇ, ನೀವು ಹೇಳಿದ ಪ್ರಕಾರ ಇವತ್ತು ಬೆಳಿಗ್ಗೆ ನಾನು ಇಲ್ಲಿಗೆ ಬಂದಿದ್ದೆ. ಆದರೆ ನೀವು ಮಾತ್ರ ಇರಲಿಲ್ಲ."

"ಹೇಗೋ? ಇರಲಿ. ನಮ್ಮ ಅಪರೇಶನ್ ಕೇಸು ಯಶಸ್ವಿಯಾಯಿತಲ್ಲ."

"ಆಗದೆ ಏನು? ನಿಮ್ಮಂತಹ ಡಾಕ್ಟರರಿಗೆ ಅದೇನು ಮಹಾ?"

"ಹಾಗೆಂದರೇನು ರೂಪಾ? ನಾನೇನು ಇಂದ್ರಲೋಕದಿಂದ ಇಳಿದವನೆ? ನನಗೆ ಒಬ್ಬನಿಂದಲೇ ಏನನ್ನೂ ಮಾಡಲಿಕ್ಕೆ ಸಾಧ್ಯವಿಲ್ಲ. ನಾನು ಮಾಡಿದುದೆಲ್ಲ ನಿನ್ನ ಸಹಾಯದಿಂದಲೇ. ನೀನಿಲ್ಲದಿದ್ದರೆ ಇವತ್ತು ಬಹಳ ಕಷ್ಟವಾಗುತ್ತಿತ್ತು" ಎಂದ. ಅಷ್ಟರೊಳಗೆ ಅಡಿಗೆ ಕೋಣೆಯಲ್ಲಿದ್ದ ವಿಮಲೆಯು ಅಲ್ಲಿಗೆ ಬಂದಳು.

"ನೀನಿಲ್ಲದಿದ್ದರೆ ಇವತ್ತು ಬಹಳ ಕಷ್ಟವಾಗುತಿತ್ತು" ಎಂಬ ಅವನ ಕೊನೆಯ ಮಾತು ಮಾತ್ರ ಅವಳ ಕಿವಿಗೆ ಬಿತ್ತು. ಆ ಮಾತನ್ನು ಕೇಳಿ ಅವಳಿಗೆ ಒಮ್ಮೆಲೇ ತಿವಿದಂತಾಯಿತು. ಮೊದಲೇ ಅವಳಿಗೆ ರೂಪಳ ಮೇಲಿದ್ದ ಸಂಶಯವು ಈಗ ಇನ್ನಷ್ಟು ಬಲವಾಯಿತು. ಅವಳ ಮನಸ್ಸು ಅಲ್ಲೋಲ ಕಲ್ಲೋಲವಾಯಿತು. ಅವಳು ನಿಂತಲ್ಲಿಯೇ ನಿಂತುಬಿಟ್ಟಳು. ಬಾಯಿಂದ ಏನನ್ನೂ ಮಾತನಾಡಲಿಲ್ಲ. "ಕಣ್ಣಾರೆ ಕಂಡರೂ ಪರಾಮರ್ಶಿಸಿ ನೋಡಬೇಕು" ಎಂಬುದೇ ಅವಳ ತತ್ವವಾಗಿತ್ತು. ಅಷ್ಟು ಹೊತ್ತಿಗೆ ಗಡಿಯಾರವು ಏಳು ಗಂಟೆ ಬಡಿಯಿತು. ಆಗ ರೂಪಳು "ಹೊತ್ತಾಯಿತು, ಗಂಟೆ ಏಳು ಬಡಿಯಿತು. ಇನ್ನು ನಾನು ಹೋಗುತ್ತೇನೆ. ಜೈಹಿಂದ್!" ಎಂದು ಒಯ್ಯಾರ ಮಾಡುತ್ತ ಅಲ್ಲಿಂದ ಹೊರಟುಹೋದಳು.

ವಿಮಲೆಯ ಮನಸ್ಸಿಗೆ ಸಂಶಯ ಪಿಶಾಚ ಹಿಡಿದಿದೆಯೆಂದು ಅರಿಯದ ಮನೋಹರನಿಗೆ ಅವಳ ದುಃಖವು ಹೇಗೆ ಗೊತ್ತಾಗಬೇಕು? ಅವನ ಮನಸ್ಸೇನೋ ಚಂಚಲವಾಗಿತ್ತು. ವಿಮಲೆಯ ಮುಖದಲ್ಲಿ ಮಾತ್ರ ಏನೊಂದು ಗೆಲುವೂ ಇರಲಿಲ್ಲ. ಅವಳ ಮುಖವು ಬಾಡಿದ ಹೂವಿನಂತಾಗಿತ್ತು.

ಮನೋಹರನು "ವಿಮಲಾ, ಯಾಕೆ ಇಷ್ಟೊಂದು ಮೌನ? ಜೈಹಿಂದ್ ಟಾಕೀಸಿನಲ್ಲಿ "ಜೀನತ್" ಚಿತ್ರವಂತೆ. ಈಗ ಹೋಗೋಣವೆ?" ಎಂದ.

"ಇಲ್ಲ. ನಾನು ಇವತ್ತು ಸಿನೆಮಕ್ಕೆ ಬರುವದಿಲ್ಲ" ಎಂದು ಅರೆಮುನಿಸಿನಿಂದ ನುಡಿದಳು ವಿಮಲೆ.

"ಏಕೆ? ಈಗ ಅಡುಗೆಯಾಗಲಿಲ್ಲವೆ?"

"ಹೌದು."

"ಇರಲಿ, ಚಿಂತೆಯಿಲ್ಲ. ನಾಳೆ ಹೋಗಬಹುದು," ಎನ್ನುತ್ತ ಮನೋಹರ ಹೊರಟುಹೋದ.

ಇತ್ತ ವಿಮಲೆಗೆ ಏನು ಮಾಡುವದೆಂದು ತೋಚಲಿಲ್ಲ. ಅವಳಿಗೆ ತನ್ನ ಗಂಡನ ನಡತೆಯ ಮೇಲೆ ಅಷ್ಟೊಂದು ಸಂಶಯವಿದ್ದಿರಲಿಲ್ಲ. ಅವನನ್ನು ಅವಳು ದೂರುತ್ತಿರಲೂ ಇಲ್ಲ. ಆದರೆ "ಎಷ್ಟೆಂದರೂ ಗಂಡಸಲ್ಲವೇ! ಹೆಂಗುಸಾಗಿಯೇ ತನ್ನ ಮೈಮೇಲೆ ಬೀಳುತ್ತಿರುವಾಗ ಅದರಲ್ಲೂ ನಾನಿಲ್ಲದ ವೇಳೆಯಲ್ಲಿ" ಎಂದು ಮುಂತಾಗಿ ಅವಳು ಯೋಚಿಸುತಿದ್ದಳು.

× × ×

ಮರುದಿನ ಮಧ್ಯಾಹ್ನ ಮನೋಹರನು ಊಟಕ್ಕೆ ಬಂದಾಗ ವಿಮಲೆಯು "ಇವತ್ತು ಇನ್ನೂ ಪೋಸ್ಟ್ ಬರಲಿಲ್ಲವೇ?" ಎಂದಳು.

"ಯಾಕೆ ಇಷ್ಟೊಂದು ಆತುರ? ಈಗ ತಾನೆ ಬಂದೀತು."

"ಅಲ್ಲ ಮಂಗಳೂರಿನಿಂದ ಕಾಗದ ಬಾರದೆ ಬಹಳ ದಿನಗಳಾದವು. ಇವತ್ತಾದರೂ ಬಂದೀತೋ ಎಂದು ಆಶೆಯಷ್ಟೆ." ಅಷ್ಟರೊಳಗೆ ಅಂಚೆಯವನು ಬಂದು ಒಂದು ಕಾಗದವನ್ನು ಮನೋಹರನ ಕೈಗಿತ್ತು ಹೋದ.

ಮನೋಹರನು ಆ ಲಕೋಟೆಯನ್ನು ಒಡೆದು, "ವಿಮಲಾ, ಇದು ನಿನ್ನ ತಂದೆಯವರ ಕಾಗದವಲ್ಲ. ಈ ಕಾಗದವು ಇದೇ ಊರಿನಿಂದ ಬಂದುದು" ಎಂದಿಷ್ಟೇ ಹೇಳಿದ. ವಿಮಲೆಯು "ಹಾಗಾದರೆ ಅದನ್ನು ಮತ್ತೆ ಓದಿದರಾಯಿತು, ಹೊತ್ತಾಯಿತು. ಈಗ ನೀವು ಊಟಕ್ಕೆ ಕುಳಿತುಕೊಳ್ಳಿ" ಎಂದಳು.

"ಒಮ್ಮೆ ಪೂರ್ಣ ಓದುತ್ತೇನೆ. ನೀನು ಹೋಗಿ ಬಟ್ಟಲನ್ನಿಟ್ಟು ಬಡಿಸು. ಅಷ್ಟರೊಳಗೆ ನಾನೂ ಬರುತ್ತೇನೆ" ಎಂದ ಮನೋಹರ. ಆದರೂ ವಿಮಲೆಯು ಅಲ್ಲಿಂದ ಕದಲಲಿಲ್ಲ. ಅವಳು ಎವೆಯಿಕ್ಕದೆ ಗಂಡನ ಮುಖವನ್ನೇ ನೋಡುತ್ತ ನಿಂತಳು. ಇಡೀ ಕಾಗದವನ್ನು ಓದಿಯಾದರೂ ಅವನ ಮುಖದಲ್ಲಿ ಏನೊಂದೂ ಬದಲಾವಣೆಯಾಗದಿದ್ದುದನ್ನು ಕಂಡು ಅವಳಿಗೆ ಆಶ್ಚರ್ಯವಾಯಿತು.

ಆ ಪತ್ರದಲ್ಲಿ ಹೀಗಿತ್ತು:—

೨೮-೭-೧೯೪೮

ಪ್ರಿಯ ಮನೋಹರನಿಗೆ,

ರೂಪಳು ಮಾಡುವ ಸಪ್ರೇಮ ವಂದನೆಗಳು. ನಾನು ನಿನ್ನ ರೂಪ, ಗುಣ ಹಾಗೂ ಕೀರ್ತಿ-ಇವುಗಳಿಗೆ ಅತ್ಯಂತ ಮನಸೋತಿದ್ದೇನೆ. ಎಷ್ಟೋ ಸಮಯದಿಂದ ಇದನ್ನು ನಿನಗೆ ತಿಳಿಸಬೇಕೆಂದು ನನಗೆ ಆಶೆಯಾಗುತಿತು. ಆದರೆ ಬಾಯಿಂದ ಹೇಳಲು ನಾಚಿಕೆ

—(ಇನ್ನೂ ಇದೆ) [ಮುಂದಿನ ಪುಟಕ್ಕೆ]

ನಮ್ಮ ನೆರೆಯ ಬ್ರಹ್ಮೀಯರು

ಸ್ವಾತಂತ್ರ್ಯದ ಉದಯದೊಡನೆ ಯಾದವಿಯ ಆರಂಭ—ಕಮ್ಯುನಿಸ್ಟರ ಅಸಮಾಧಾನ—ಕಾರೆನ್ನರ ದಂಗೆ—ಆಂಗ್ಲರ ಮೇಲೆ ಆರೋಪ—ಸರಕಾರದ ದೌರ್ಬಲ್ಯ—ಹಿಂದೀಯರ ಹಾನಿ—ಭಾರತದ ಸಹಾಯ—

೧೮೨೬ ರಿಂದ ೧೮೮೬ ರ ವರೆಗೆ ಬ್ರಿಟಿಶರು ಬ್ರಹ್ಮದೇಶದ ಭಾಗಗಳನ್ನು ಒಂದೊಂದಾಗಿ ಗೆದ್ದು, ೧೯೧೯ ರಲ್ಲಿ ಹಿಂದುಸ್ತಾನ ಸರಕಾರ ಕಾಯಿದೆಯ ಮೇರೆಗೆ ಅದನ್ನೊಂದು ಗವರ್ನರರ ಪ್ರಾಂತವನ್ನಾಗಿ ಮಾಡಿ ೧೯೩೭ ರ ಬ್ರಹ್ಮೀ ಸರಕಾರ ಕಾಯಿದೆಯನ್ವಯ ಭಾರತದಿಂದ ಅದನ್ನು ವಿಚ್ಛೇದಿಸಿದರು. ೧೯೪೨ ರ ಮಾರ್ಚಿನಲ್ಲಿ ಜಪಾನೀ ಸೈನ್ಯವು ರಂಗೂನನ್ನು ಆಕ್ರಮಿಸಿ ೧೯೪೫ ರ ವರೆಗೆ ಅಲ್ಲಿಯ ಪ್ರದೇಶಗಳನ್ನು ಆಕ್ರಮಿಸಿದ್ದು ಅನಂತರ ಸೋತು ಬಿಟ್ಟುಕೊಟ್ಟು ಹೋಯಿತು. ಆ ಮೇಲೆ ೧೯೪೭ ಲಂಡನ್ ಪರಿಷತ್ತಿನಲ್ಲಿ ಬ್ರಹ್ಮೀ ಸ್ವಾತಂತ್ರ್ಯದ ಯೋಜನೆ ಸಿದ್ಧವಾಯಿತು. ಮರು ವರುಷವೇ ಸ್ವಾತಂತ್ರ್ಯ ಸಾರಿದ ಬ್ರಹ್ಮದೇಶವಿಂದು ಅಂತಃಕಲಹದ ಗಗನಚುಂಬಿ ಜ್ವಾಲೆಗಳಿಂದ ಗಾರುಗೆಟ್ಟಿದೆ. ಕಮ್ಯುನಿಸ್ಟರು ಕಾರೆನ್ನರೇ ಮೊದಲಾದ ಇತರ ಬಣಗಳು ಸರಕಾರದ ವಿರುದ್ಧ ದಂಗೆಯೆದ್ದು ಪರಿಸ್ಥಿತಿಯನ್ನು ಹದಗೆಡಿಸಿಬಿಟ್ಟಿದ್ದಾರೆ. ಈ ಅಲ್ಲೋಲ ಕಲ್ಲೋಲದಿಂದ ಮೇಲಕ್ಕೆದ್ದು ಬ್ರಹ್ಮೀ ಸರಕಾರಕ್ಕೆ ಶಾಂತಿ ಸುವ್ಯವಸ್ಥೆಯನ್ನು ಸ್ಥಾಪಿಸಲು ಎಂದು ಶಕ್ಯವಾದೀತೆಂದು ಜಗತ್ತು ಬಿಡುಗಣ್ಣಿನಿಂದ ನಿರೀಕ್ಷಿಸುತ್ತಿದೆ.

ಭಾರತದಂತೆ ಬ್ರಹ್ಮದೇಶವಾದರೂ ಒಂದು ಪ್ರಾಚೀನ ನಾಗರಿಕತೆಯುಳ್ಳ ದೇಶ. ಸಂಸ್ಕೃತಿ ನಾಗರಿಕತೆಗಳಲ್ಲಿ ಭಾರತಕ್ಕೆ ಅದು ಸಹೋದರನಂತಿದೆ. ಅಲ್ಲಿಯದು ಬೌದ್ಧ ಸಂಸ್ಕೃತಿ. ಬ್ರಹ್ಮೀಯರಲ್ಲಿ ಬಹುಸಂಖ್ಯರು ಇಂದಿಗೂ ಬೌದ್ಧರು. ಬೌದ್ಧರಿಗೆ ಭಾರತವು ಈ ಕಾರಣದಿಂದ ಯಾತ್ರಾಸ್ಥಳ. ಕುಲದಲ್ಲಿ ಮತ್ತು ಭಾಷೆಯಲ್ಲಿ ಅವರು ಚೀನೀಯರಿಗೆ ಬಹಳ ಹತ್ತಿರದಲ್ಲಿದ್ದಾರೆ. ಹೀಗಾಗಿ ಬ್ರಹ್ಮದೇಶವು ಚೀನ ಮತ್ತು ಭಾರತಗಳನ್ನು ಜೋಡಿಸುವ ಒಂದು ಸಂಗಮ, ಸೇತು ಎನ್ನಬಹುದು. ಭಾರತದ "ಛಪ್ಪನ್ನೈವತ್ತಾರು" ರಾಜಾಧಿರಾಜರನ್ನು ಗೆದ್ದ ತಂತ್ರಜ್ಞರಾದ ಬ್ರಿಟಿಶರು ಬ್ರಹ್ಮದೇಶದ ರಾಜನನ್ನೂ ಗೆದ್ದು ಹಿಂದೆ ಸಾಮ್ರಾಜ್ಯವನ್ನು ಕಟ್ಟಿದರು. ಆದರೆ ಕಾಲಮಹಿಮೆಯಿಂದ ಭಾರತದ ಜೊತೆ ಜೊತೆಗೇ ಬ್ರಹ್ಮದೇಶಕ್ಕೂ ಸ್ವಾತಂತ್ರ್ಯ ಲಭಿಸಿತು. ೧೯೪೮ ಜನವರಿಯಲ್ಲಿ ಬ್ರಹ್ಮೀಯರು ತಮ್ಮ ಸ್ವಾತಂತ್ರ್ಯವನ್ನು ಪಡೆದರು.

ರಂಗೂನು ಬ್ರಹ್ಮದೇಶದ ರಾಜಧಾನಿ. ಸ್ವಾತಂತ್ರ್ಯ ಬಂದೊಡನೆ ಹೊಸ ಪ್ರಜಾರಾಜ್ಯದ ಸ್ಥಾಪನೆಯ ಮುಹೂರ್ತವನ್ನು ಬೌದ್ಧ ಜ್ಯೋತಿಷಿಕರು ನಿರ್ಧರಿಸಿದರು. ಅದರ ಪ್ರಕಾರ ಸ್ಥಾಪಿತವಾದ ಪ್ರಜಾರಾಜ್ಯ ಕ್ಷೇಮದಿಂದ ಸಾಗುವುದೆಂದು ಎಲ್ಲರೂ ನಂಬಿದರು. ಹೊಸದಾಗಿ ಸ್ವಾತಂತ್ರ್ಯ ಪಡೆದ ದೇಶದ ರಾಜಧಾನಿಯ ಲಕ್ಷಣ ಮರುದಿನವೇ ಬೇರೆಯದಾಯಿತು. ಮೊದಲಿನಂತೆ ಅಲ್ಲಿಯ ಹೊಟೇಲು ಮತ್ತು ಹಾದಿ ಬೀದಿಗಳಲ್ಲಿ ಬಿಳಿಯರು ಕಾಣಿಸಲಿಲ್ಲ; ಬ್ರಿಟಿಶ್ ಶಿಪಾಯಿಗಳಿಲ್ಲ, ಅಧಿಕಾರಿಗಳಿಲ್ಲ, ಏಶಿಯೇತರರ ಸುಳಿವೇ ಇಲ್ಲ! ಎಲ್ಲೆಲ್ಲೂ ಒಂದು ವಿಧದ ಉಲ್ಲಾಸದ ವಾತಾವರಣವೇ ಕಾಣಿಸಿತು.

ಕಮ್ಯುನಿಸ್ಟರ ವಿರೋಧ

ಆದರೆ ಈ ಉಲ್ಲಾಸದ ವಾತಾವರಣ ಬಹಳಕಾಲ ಉಳಿಯದಾಯಿತು. ಅದಕ್ಕೆ ದೇಶದಲ್ಲಿ ಒಮ್ಮಿಂದೊಮ್ಮೆ ಬೇರೆ ಬೇರೆ ರಾಜಕೀಯ ಪಂಗಡಗಳ ಆಂದೋಲನ ಪ್ರಾರಂಭವಾದುದೇ ಕಾರಣ. ಮೊದಲು ಪರಿಸ್ಥಿತಿ ಆಶಾದಾಯಕವಾಗಿತ್ತು. ಬ್ರಹ್ಮದೇಶದಲ್ಲಿ ವಿವಿಧ ಪಕ್ಷಗಳಿದ್ದರೂ ಅವೆಲ್ಲ ಸೋಶಲಿಜಮ್ಮಿನ ವಿವಿಧ ರೂಪಗಳೇ ಆಗಿದ್ದು, ಒಕ್ಕಲುತನದ ಸುಧಾರಣೆ ಮತ್ತು ಮೌಲಿಕ ಉದ್ಯಮಗಳ ರಾಷ್ಟ್ರೀಕರಣಗಳಲ್ಲಿ ಒಮ್ಮತ ತಾಳಿದ್ದವು. ಇಂಥ ಶಾಂತಿಯುತ ವಾತಾವರಣ ಕದಡಲು ಕಮ್ಯುನಿಸ್ಟರು ಮೊದಲು ಕಲ್ಲೆಸೆದರು. ಬ್ರಹ್ಮೀ ಸ್ವಾತಂತ್ರ್ಯ ಸಂಧಾನದಲ್ಲಿ ಜನರಲ್ ಆಂಗ್‌ಸೇನರು ಸಂಪೂರ್ಣ ಸ್ವಾತಂತ್ರ್ಯ ಸಿದ್ಧಿ ಮತ್ತು ಚೀನೀ ಕಮ್ಯುನಿಸ್ಟರು ಮಾಡಿದ ಮಾದರಿಯ ಆಂತರಿಕ ಸುಧಾರಣೆ ಇವುಗಳಲ್ಲಿ ಸರ್ವಾನುಮತ ಪಡೆದರೂ ಅವನ್ನು ಸಾಧಿಸುವಲ್ಲಿ ತೆಗೆದುಕೊಳ್ಳಬೇಕಾದ ಕ್ರಮ ಮತ್ತು ತಂತ್ರಗಳಲ್ಲಿ ಭಿನ್ನಾಭಿಪ್ರಾಯವನ್ನು ಎದುರಿಸಬೇಕಾಯಿತು. ಸರ್ವಪಕ್ಷ ಸಂಘವೆನಿಸಿದ "ಆ್ಯಂಟಿ ಫ್ಯಾಸಿಸ್ಟ್ ಲೀಗ್" ನಲ್ಲಿ ಆಗ ಒಡಕು ಉಂಟಾಯಿತು. ೧೯೪೬ ರಲ್ಲಿ ಸ್ಟಾಲಿನ್ ಮತಾನುಯಾಯಿಗಳಾದ ಕಮ್ಯುನಿಸ್ಟರು ಬ್ರಿಟಿಶರೊಡನೆ ಸಾಮಸಂಧಿ ಮಾಡಿಕೊಳ್ಳುವುದನ್ನು ವಿರೋಧಿಸಿದ ಕಾರಣ ಅವರನ್ನು ಸಂಘದಿಂದ ಹೊರತಳ್ಳಲಾಯಿತು. ಕಳೆದ ಚಳಿಗಾಲದಲ್ಲಿ ಅವರು ಮುಖ್ಯಮಂತ್ರಿ ಥಾಕಿನ್‌ನೂ ಬ್ರಿಟಿಶರೊಡನೆ ಮಾಡಿಕೊಂಡ ಒಪ್ಪಂದವನ್ನು ಜರೆದರು. ಏಕೆಂದರೆ, ಥಾಕಿನ್‌ನೂ ಬ್ರಹ್ಮದೇಶ ಸ್ಟರ್ಲಿಗ್ ಪ್ರದೇಶದಲ್ಲಿ ಉಳಿಯುವುದಕ್ಕೂ ರಾಷ್ಟ್ರೀಕೃತ ಬ್ರಿಟಿಶ್ ಉದ್ಯಮಗಳಿಗೆ ಪರಿಹಾರ ಕೊಡುವುದಕ್ಕೂ ಒಪ್ಪಿಕೊಂಡದ್ದು ಅವರಿಗೆ ಸರಿಬರಲಿಲ್ಲ. ಇದರ ಮೇಲೆ ಬ್ರಿಟಿಶರೊಡನೆ ಅವನು ಒಂದು ಸೈನಿಕ ಒಪ್ಪಂದವನ್ನು ಮಾಡಿಕೊಂಡನು. ಈಯೆಲ್ಲ ಕಾರಣಗಳಿಂದ ಕಮ್ಯುನಿಸ್ಟರು ಸರಕಾರದ ವಿರೋಧಿಗಳಾದರು ಮತ್ತು ಅವರ ದೃಷ್ಟಿಯಲ್ಲಿ ಸರಕಾರವು ಆಂಗ್ಲೋ-ಅಮೇರಿಕನ್ನರ ಬಾಲಬಡಿಕ ಎನಿಸಿತು.

ಕಾರೆನ್ನರ ದಂಗೆ

ಕಳೆದ ಮಾರ್ಚ್ ಮತ್ತು ಏಪ್ರಿಲ್ ತಿಂಗಳಲ್ಲಿ ಸಾಕ್ಷಾತ್ ಘರ್ಷಣೆಗೆ ಆರಂಭವಾಯಿತು. ಕಮ್ಯುನಿಸ್ಟರು ಬಲ ಸಂಗ್ರಹಿಸಲಾರಂಭಿಸಿದರು. ಈ ಸಮಯದಲ್ಲಿ ಕಾರೆನ್ನರು ಮೊದಲಿಸಿಂದಲೂ ಸಾಧಿಸ ಹವಣಿಸಿದ್ದ ಬೇಡಿಕೆಗಳನ್ನು ಸಾಧಿಸಲು ಸೊಂಟ ಕಟ್ಟಿದರು. ಇವರು ಬ್ರಹ್ಮದೇಶದ ಮೂಲ ನಿವಾಸಿಗಳ ಬಳಗದಲ್ಲಿ ಒಬ್ಬರು; ಸಂಖ್ಯಾಬಲ ೧೫ ಲಕ್ಷ. ಇವರ ಪ್ರದೇಶ ದೇಶೀ ಅರಸೊತ್ತಿಗೆಯಲ್ಲಿತ್ತು. ಗುಡ್ಡಗಳಲ್ಲಿಯೂ ಸಯಾಮಿನ ಗಡಿಗಳಲ್ಲೂ ದಕ್ಷಿಣ ಬ್ರಹ್ಮದಲ್ಲೂ ಇವರು ಹರಡಿಕೊಂಡಿದ್ದಾರೆ. ಮಹಾಯುದ್ಧಕ್ಕೆ ಮೊದಲು ಬ್ರಹ್ಮದೇಶಕ್ಕೆ ಸ್ವಾತಂತ್ರ್ಯ ಕೊಟ್ಟರೂ ಈ ಗಡಿಯ ಗುಡ್ಡಗಾಡು ಜನರನ್ನು ನೇರವಾಗಿ ತಾವೇ ಆಳಬೇಕೆಂದು ಬ್ರಿಟಿಶರು ಹವಣಿಸಿದ್ದರು. ಆದರೆ ಅವರು ಅದಕ್ಕೆ ಬೆಂಬಲ ಕೊಡದೆ ಬ್ರಹ್ಮೀ ಒಕ್ಕೂಟದಲ್ಲೇ ಉಳಿದರು. ದೇಶೀ ಅರಸೊತ್ತಿಗೆಯ ಮೂಲಕ ತಮ್ಮದೇ ಆದ ವಿಶಿಷ್ಟ ಪರಂಪರೆ ಕಟ್ಟಿಕೊಂಡ ಕಾರೆನ್ನರು ತಮಗೆ ಕೆಲವೊಂದು ಬಗೆಯ ಸ್ವಾಯತ್ತತೆಯನ್ನು ಕೇಳಲು ಅದನ್ನು ಕೊಡಲಾಯಿತು. ಅದೂ ಸಾಲದೆಂದು ಈಗ ಅವರು ಸ್ವತಂತ್ರ 'ಸ್ಥಾನ' ಬೇಕೆಂದು ಹೋರಾಟ ಹೂಡಿದ್ದಾರೆ. ಅವರ ಸಶಸ್ತ್ರ ದಾಳಿ ದುಃಶಾಸ್ಯವಾಗಿರುವುದು ಇಂದು ಎಲ್ಲರಿಗೂ ತಿಳಿದ ವಿಷಯ.

ಆಂಗ್ಲರ ಮೇಲೆ ಆರೋಪ

ಸ್ವಾತಂತ್ರ್ಯೋದಯದ ದಿನ ಬ್ರಹ್ಮೀ ಧ್ವಜ ಐದು ಶ್ವೇತ ನಕ್ಷತ್ರಗಳಿಂದ ಕಂಗೊಳಿಸಿತು. ಅವು ಮೂಲ ಬ್ರಹ್ಮದೇಶ ಮತ್ತು ಅಲ್ಲಿಯ ನಾಲ್ಕು ಮುಖ್ಯ ಮೂಲ ನಿವಾಸಿ ವರ್ಗಗಳ ಪ್ರತೀಕವಾದವು. ಆಗ ಒಕ್ಕಟ್ಟಿನಲ್ಲಿದ್ದಾಗ ಸರಕಾರ ಕೊಟ್ಟ ವಚನವನ್ನು ಪಾಲಿಸಲಿಲ್ಲವೆಂಬುದೇ ಕಾರೆನ್ನರ ಆಪಾದನೆ. ಅದೇ ಅವರ ಶಸ್ತ್ರಗ್ರಹಣಕ್ಕೆ ಹೇತು. ಆದರೆ ಬ್ರಹ್ಮೀ ಸರಕಾರದ ಸುದ್ದಿಯ ಅಧಿಕಾರಿಗಳು ಬ್ರಹ್ಮೀ ಸೋಶಲಿಸ್ಟ ಆಡಳಿತೆಯನ್ನು ಇತಿಶ್ರೀಗೊಳಿಸಿ ಬ್ರಿಟಿಶರಿಗೆ ಹೆಚ್ಚು ಮಿತ್ರತ್ವದಿಂದ ಇರುವ ಮತ್ತಾವುದಾದರೂ ಒಂದು ಪಕ್ಷವನ್ನು ಅಧಿಕಾರಕ್ಕೆ ತರಬೇಕೆಂದು ಕೆಲ ಆಂಗ್ಲರು ಒಳಸಂಚು ನಡೆಸಿ ಕಾರೆನ್ನರನ್ನು ಎತ್ತಿ ಕಟ್ಟಿದ್ದಾರೆ ಎಂದು ಆರೋಪಿಸಿದ್ದಾರೆ. ಈ ಆಂಗ್ಲರ ಗುಂಪಿನಲ್ಲಿ ಬ್ರಹ್ಮದೇಶದ ಹಿಂದಿನ ಗವರ್ನರರಾದ ಸರ್ ರಿಜಿನಾಲ್ ಡಾರ್ಮನ್ ಸ್ಮಿತ್ತರೂ ಲಾರ್ಡ ಮೌಂಟಿಬ್ಯಾಟನ್ನರ ಧೋರಣೆಗೆ ವಿರುದ್ಧರಿದ್ದ ಆಗ್ನೇಯ ಏಶಿಯದ ಸೈನ್ಯದ ಹಿಂದಿನ ಅಧಿಕಾರಿಗಳೂ ಇದ್ದಾರೆಂದು ಹೇಳಲಾಗಿದೆ.

ಪಕ್ಷಗಳ ಬಲಾಬಲ

ಸರಕಾರವಿಂದು ಬದುಕಲು ಹೆಣಗುತ್ತಿದೆ. ಅದರ ಆಡಳಿತೆಗಾರರು ದುರ್ಬಲರು, ಅನನುಭವಿಗಳು ಮತ್ತು ಅಪ್ರಿಯರು. ಅದರ ಹತ್ತಿರ ೧೫೦೦೦ ಯೋಧರ ಬಲವಿದೆ. ಬ್ರಹ್ಮದೇಶವು ಫ್ರಾನ್ಸ, ಬೆಲ್ಜಿಯಂ ಮತ್ತು ಸ್ವಿಜರ್ಲೆಂಡುಗಳು ಮೂರೂ ಸೇರಿದರೆ ಎಷ್ಟಾಗುವವೋ ಅಷ್ಟು ವಿಸ್ತಾರವಾಗಿದೆ. ಇಷ್ಟು ದೊಡ್ಡ ಪ್ರದೇಶವನ್ನು ರಕ್ಷಿಸಲು ಈ ಸೈನ್ಯ ಸಾಲದು. ಈ ಸೈನಿಕರಾದರೂ ಒಂದೇ ಯುದ್ಧವಿದ್ಯಾರಹಿತರು ಇಲ್ಲವೆ ಅಪ್ರಾಮಾಣಿಕರು ಎನಿಸಿದ್ದಾರೆ. ಎದುರು ಬಿದ್ದ ಪಂಗಡಗಳ ಸಶಸ್ತ್ರ ಸೈನಿಕರ ಸಂಖ್ಯೆ ಸರಕಾರೀ ಸೈನಿಕರ ಸಂಖ್ಯೆಗಿಂತ ಹೆಚ್ಚಿದೆ. ಕೆಂಪು ಬಾವುಟದ ಟ್ರಾಸ್ಕಿ ಕಮ್ಯುನಿಸ್ಟರ ಬಲ ೪ ಸಾವಿರವಿದೆ; ಸನಾತನಿಗಳಾದ ಬಿಳಿಯ ಬಾವುಟದ ಕಮ್ಯುನಿಸ್ಟರದು ೫ ಸಾವಿರ. ಕಮ್ಯುನಿಸ್ಟರ ಮಿತ್ರರಾದ ಜನತಾ ಸ್ವಯಂಸೇವಕ ಸಂಘದವರ ಬಲ ೩ ಸಾವಿರ. ೧-೨ ಸಾವಿರ ಸರಕಾರೀ ದಳಜವರು ದಂಗೆಯೆದ್ದಿದ್ದಾರೆ. ಕಾರೆನ್ನರ ಶಸ್ತ್ರಧಾರಿ ಸೈನಿಕರು ೫ ಸಾವಿರದಷ್ಟಿದ್ದಾರೆ ಮತ್ತು ಸುಮಾರು ಒಂದು ಸಾವಿರದಷ್ಟು ಅರಕಾನೀ ಮುಸಲ್ಮಾನರು ಪೂರ್ವ ಪಾಕಿಸ್ತಾನಕ್ಕೆ ತಮ್ಮ ಪ್ರದೇಶವನ್ನು ಸೇರಿಸಬೇಕೆಂದು ಹಟತೊಟ್ಟು ಸರಕಾರವನ್ನು ಎದುರಿಸಿ ನಿಂತಿದ್ದಾರೆ. ಸನಾತನಿ ಕಮ್ಯುನಿಸ್ಟರಲ್ಲಿ ಜಪಾನೀ ವಿರುದ್ಧ ಕೂಟಯೋಧ ದಲಗಳಿದ್ದು, ಅವರು ಎಲ್ಲರಿಗಿಂತ ಹೆಚ್ಚು ದುರ್ದಮ್ಯರಾಗಿದ್ದಾರೆ. ಅವರಿಗೆ ರೈತ ಸಂಘಗಳ ಬೆಂಬಲವೂ ಇದೆ.

ಪ್ರಜಾವಿಭಾಗ

ಒಟ್ಟು ಬ್ರಹ್ಮದೇಶದ ಪ್ರಜೆಗಳನ್ನು ನಾಲ್ಕು ವಿಭಾಗಗಳನ್ನಾಗಿ ವಿಂಗಡಿಸಬಹುದು. ಮೊದಲನೆಯ ಭಾಗದವರು ಬ್ರಿಟಿಶರು. ಅವರ ಸಂಖ್ಯೆ ಅಲ್ಪವಾದರೂ ವ್ಯಾಪಾರೋದ್ಯಮಗಳಲ್ಲಿ ಅಗ್ರಸ್ಥಾನ ಹಿಡಿದು ನೆಲೆನಿಂತವರವರು. ಆರ್ಥಿಕ ಸ್ಥಿತಿಯಲ್ಲಿ ಎರಡನೆಯವರು "ವಿದೇಶೀ ಅಲ್ಪಸಂಖ್ಯರು". ಅವರಲ್ಲಿ ೨॥ ಲಕ್ಷ ಚೀನೀಯರೂ ೮ ಲಕ್ಷ ಹಿಂದೀಯರೂ ಇದ್ದಾರೆ. ಇವರು ಆಂತರಿಕ ವ್ಯಾಪಾರೋದ್ಯಮಗಳಲ್ಲಿ ದೃಢವಾದ ಸ್ಥಾನಗಳನ್ನು ಹಿಡಿದಿದ್ದಾರೆ. ಇವರಲ್ಲಿ ಹಲವರು ಬಡ್ಡಿಯಿಂದ ಜೀವಿಸುವವರು. ಸ್ವತಃ ಬ್ರಹ್ಮೀಯರ ಸಂಖ್ಯೆ ೧೭ ಕೋಟಿ ಅವರಲ್ಲಿ ನೂರಕ್ಕೆ ೮೫ ರಷ್ಟು ಜನ ಒಕ್ಕಲಿಗರು. ಅವರ ಕೆಳಗಿನ ದರ್ಜೆಯವರೆಂದರೆ ಮೂಲನಿವಾಸಿಗಳು. ಅವರಲ್ಲಿ ೧೫ ಲಕ್ಷ ಕಾರೆನ್ನರಲ್ಲದೆ ಇತರ ೧೦ ಲಕ್ಷ ಶಾನರು, ೪ ಲಕ್ಷ ಕಾಚಿನ್ನರು, ೪ ಲಕ್ಷ ಚಿನ್ನರು, ನಾಗರು ಮತ್ತು ಇತರರು ಇದ್ದಾರೆ.

ಇತ್ತೀಚಿನ ಪರಿಸ್ಥಿತಿ

ಕಾರೆನ್ನರ ಪ್ರಬಲಸ್ಥಾನವೆನಿಸಿದ ಒಂದು ಬೌದ್ಧವಿಹಾರವನ್ನು ಸರಕಾರೀ ಸೈನ್ಯ ಮುತ್ತಿ, ಘೋರಕದನ ನಡೆಯಿತು. ಒಂದೇ ದಿನದಲ್ಲಿ ಅದು ಅನೇಕಸಲ ಹಸ್ತಾಂತರವಾಯಿತು. ಆದರೆ ಕಡೆಯಲ್ಲಿ ಆ ಸ್ಥಳದಿಂದ ಸರಕಾರೀ ಸೈನ್ಯವು ಕಾರೆನ್ನರನ್ನು ಓಡಿಸಿತು. ಇನ್‌ಸೀನ್ನಿನಲ್ಲಿ ಕಾರೆನ್ನರು ಶಕ್ತಿ ಸಂಘಟನೆ ಮಾಡಿ ಮತ್ತೆ ದಾಳಿಯನ್ನು ಮುಂದುವರಿಸಲು ತೊಡಗಿದ್ದಾರೆ.

ಬ್ರಹ್ಮೀ ಸರಕಾರವು ಹಿಂದುಸ್ತಾನ ಪಾಕಿಸ್ತಾನಗಳಿಗೆ ಸೇರಿದ ತನ್ನ ಸರಕಾರೀ ನೌಕರರನ್ನು ಕೆಲಸದಿಂದ ತೆಗೆದುಹಾಕಿದೆ. ಆ ನೌಕರರು ಒಂದು ಸಭೆ ಸೇರಿ ಸರಕಾರದ ಅನ್ಯಾಯವನ್ನು ಟೀಕಿಸಿ ತಂತಮ್ಮ ದೇಶಗಳ ರಾಯಭಾರಿಗಳ ಹತ್ತಿರ ತಮ್ಮನ್ನು ಸ್ವದೇಶಗಳಿಗೆ ಮರಳಿಸುವ ವ್ಯವಸ್ಥೆ ಮಾಡಬೇಕೆಂದು ಬಿನ್ನವಿಸಿಕೊಂಡರು. ರಂಗೂನಿನಲ್ಲಿರುವ ನಿರಾಶ್ರಿತರ ಸಹಾಯಕ್ಕೆಂದು ಹಿಂದೀ ಸರಕಾರ ೧೧೦೦೦ ರೂಪಾಯಿಗಳನ್ನು ದಾನಮಾಡಿದೆಯೆಂದು ತಿಳಿಯುತ್ತದೆ. ಇನ್ಸೀನಿನ ಯುದ್ಧ ಪ್ರಾರಂಭವಾದಂದಿನಿಂದ ಇಲ್ಲಿಯ ವರೆಗೆ ಸುಮಾರು ೭೦೦೦ ಜನರು (ಅವರಲ್ಲಿ ಬಹುಸಂಖ್ಯರು ಹಿಂದೀಯರು) ಬ್ರಹ್ಮದೇಶದಿಂದ ಹೊರಗೆ ಕಳಿಸಲ್ಪಟ್ಟಿದ್ದಾರೆ. ಸುಮಾರು ೧೦ ಲಕ್ಷ ರೂಪಾಯಿ ಬೆಲೆಬಾಳುವ ಆಸ್ತಿಯನ್ನು ಒಟ್ಟಿನಲ್ಲಿ ಭಾರತೀಯರು ಕಳೆದುಕೊಂಡಿದ್ದಾರೆ.

ರಂಗೂನ್ ಕೇಂದ್ರ ಕಾರಾಗಾರದಲ್ಲಿ ಅಖಿಲ ಬ್ರಹ್ಮದೇಶದ ಸರಕಾರೀ ನೌಕರರ ಸಂಘದ ಅಧ್ಯಕ್ಷ ಯು. ತಂಗ್ ಆಂಗ್ ಗ್ಯಾ ಅವರನ್ನು ವಿಚಾರಣೆಗೆ ಗುರಿಪಡಿಸಿದ್ದರ ವಿರುದ್ಧ ಕೈದಿಗಳು ಪ್ರತಿಭಟನೆ ಮಾಡಿದ್ದರಿಂದ ಅವರ ವಿಚಾರಣೆಯನ್ನು ಮುಂದೆ ಹಾಕಲಾಯಿತು. ಸರಕಾರೀ ನೌಕರರಿಗೆ ಮುಷ್ಕರ ಹೂಡಲು ನಿಯಂತ್ರಿಸಿದ ಆರೋಪ ಅವರ ಮೇಲಿದೆ.

ಆಂಗ್ಲ ಪಾರ್ಲಿಮೆಂಟಿನ ಕನ್ಸರ್ವೇಟಿವ್ ಸದಸ್ಯ ಕ್ಯಾಪ್ಟನ್ ಎಲ್. ಡಿ. ಗ್ಯಾನನು ಆಂಗ್ಲರಿಗೆ ಜಪಾನರ ವಿರುದ್ಧ ಸಹಾಯ ಮಾಡಿದ ಕಾರೆನ್ನರು ಮಿತ್ರರಿದ್ದು, ಅವರನ್ನು ಬಗ್ಗು ಬಡಿಯಲು ಆಂಗ್ಲರು ಬ್ರಹ್ಮೀ ಸರಕಾರಕ್ಕೆ ಸೈನಿಕ ಸಹಾಯ ಸಲ್ಲಿಸುತ್ತಿರುವುದು ತಪ್ಪೆಂದು ಹೇಳಿಕೆ ಕೊಟ್ಟಿದ್ದಾನೆ.

ಅರಕಾನಿನಲ್ಲಿರುವ ಕೆಲ ಬ್ರಹ್ಮೀ ಮುಸಲ್ಮಾನರು ಆಗಲೇ ಪೂರ್ವ ಪಾಕಿಸ್ತಾನವನ್ನು ಪ್ರವೇಶಿಸಹತ್ತಿದ್ದಾರೆಂದು ಕರಾಚಿಗೆ ಸುದ್ದಿ ಬಂದು ಗಾಬರಿಗೆಡಿಸಿದೆ.

— ಅರ್ಜುನ

ಹಿರಿಯೋಲಗದಲ್ಲಿ ಒಂದು ವಾರ

ಕಳೆದ ವಾರ ಹಿರಿಯೋಲಗದಲ್ಲಿ ಪೂರೈಸಗೊಳಿಸಲ್ಪಟ್ಟ ಕಾರ್ಯಕಲಾಪಗಳಲ್ಲಿ ಬ್ಯಾಂಕಿಂಗ್ ಕಂಪನಿಗಳ ಮಸೂದೆಯ ಸ್ವೀಕಾರವೇ ದೊಡ್ಡದು. ಹಿಂದೂ ಕಾಯಿದೆ ಕ್ರೋಢೀಕರಣ ಮಸೂದೆಯನ್ನು ಡಾ. ಅಂಬೇಡಕರರು ಸಭೆಯಲ್ಲಿ ಮಂಡಿಸಿದರೂ ಅದು ಮುಂಗಡ ಪತ್ರಿಕೆಯ ಸ್ವೀಕಾರವಾದ ಮೇಲೆಯೆ, ಅಂದರೆ ಹಲ ವಾರಗಳ ನಂತರವೆ ಚರ್ಚೆಗೆ ತೆಗೆದುಕೊಳ್ಳಲ್ಪಡುವದು. ಸದ್ಯಕ್ಕೆ ರೇಲ್ವೇ ಮುಂಗಡ ಪತ್ರಿಕೆಯ ಬಗ್ಗೆ (ಅದರ ವಿವರಗಳು ಕಳೆದ ಸಂಚಿಕೆಯಲ್ಲಿ ಪ್ರಕಟವಾಗಿವೆ) ಎಂದಿನಂತೆ ಸ್ವಾರಸ್ಯವೇ ಇದ ಚರ್ಚೆ ನಡೆದಿದೆ.

[illegible] ಕಲಮು, ೩೬೦ ತಿದ್ದುಪಡಿ

ಬ್ಯಾಂಕಿಂಗ್ ಕಂಪನಿಗಳ ಮೇಲಿನ ನಿಯಂತ್ರಣವನ್ನು ಬಿಗಿಗೊಳಿಸುವ ಪ್ರಯತ್ನ ೧೯೩೬ರಲ್ಲಿ ಕೇಂದ್ರ ಸರಕಾರದವರಿಂದ ಪ್ರಾರಂಭಿಸಲ್ಪಟ್ಟಿತ್ತು. ಆಗ ಕಂಪನಿ ಕಾಯದೆಗೇ ಕೆಲ ಕಲಮುಗಳನ್ನು ಜೋಡಿಸಿ ಹಲ ಕೆಲವು ನಿಯಮಗಳನ್ನು ಅವುಗಳ ಮೇಲೆ ಹೇರಲಾಯಿತಲ್ಲದೆ, ಬ್ಯಾಂಕಿಂಗ್ ಕಂಪನಿಗಳನ್ನುಳಿದು ಹೊರತಾಗಿ ಮತ್ತಾರೂ ಅಥವಾ ಯಾವ ಕಂಪನಿಗಳೂ ಬ್ಯಾಂಕುಗಳ ಮೆನೇಜಿಂಗ್ ಏಜನ್ಸಿ ನಡೆಸಕೂಡದೆಂದು ವಿಧಿಸಲಾಯಿತು. ಬ್ಯಾಂಕುಗಳು ಇನ್ನಿತರ ವ್ಯಾಪಾರ-ಉದ್ಯಮಗಳಲ್ಲಿ ಕೈಹಾಕಕೂಡದೆಂದೂ ವಿಧಿಸಲಾಯಿತಲ್ಲದೆ ಅವು ಕೈಯಲ್ಲಿ ನಿರ್ದಿಷ್ಟಪ್ರಮಾಣದ ನಗದಿ ಹಣವನ್ನು ಇಟ್ಟುಕೊಳ್ಳಲೇಬೇಕೆಂದು ನಿರ್ದೇಶಿಸಲಾಯಿತು. ಮುಂದೆ ಅವುಗಳ ಪಾಲು ಬಂಡವಲದ ಕನಿಷ್ಠ ಪರಿಮಾಣವನ್ನೂ ವಿಧಿಸಲಾಯಿತು. ಈಗ ಹಲ ವರ್ಷಗಳಿಂದ ನಡೆದ ಚರ್ಚೆ, ಗಳಿಸಿದ ಅನುಭವ ಮೊದಲಾದವುಗಳ ನಂತರ ಬ್ಯಾಂಕಿಂಗ್ ಕಂಪನಿಗಳಿಗೆ ಅನ್ವಯಿಸುವ ಕಲಮುಗಳನ್ನೆಲ್ಲ ಕ್ರೋಢೀಕರಿಸಿ, ಹೊಸವನ್ನು ಸೇರಿಸಿ ಸಿದ್ಧಗೊಳಿಸಿದ ಮಸೂದೆ ಇದೀಗ ಹಿರಿಯೋಲಗದಲ್ಲಿ ಸ್ವೀಕರಿಸಲ್ಪಟ್ಟಿದೆ.

ಈ ಕಲಮುಗಳಲ್ಲಿ ಈ ಮಸೂದೆಗೆ ೩೬೦ ತಿದ್ದುಪಡಿಗಳು ಮಂಡಿಸಲ್ಪಟ್ಟಿದ್ದೊಂದು ವಿಶೇಷ. ಅರ್ಥಸಚಿವ ಡಾ|| ಮತ್ತಾಯಿಯವರು ಅವುಗಳಲ್ಲಿ ಹೆಚ್ಚು ಕಡಿಮೆ ಎಲ್ಲವನ್ನೂ ಯುಕ್ತಿಯಿಂದ ಪ್ರತಿರೋಧಿಸಿ ಹೆಚ್ಚುಕಡಿಮೆ ಮೂಲ ಸ್ವರೂಪದಲ್ಲಿ ಮಸೂದೆಯನ್ನು ಪಾಸಮಾಡಿಸಿಕೊಂಡರು. ೩ ದಿನಗಳ ಚರ್ಚೆಯಲ್ಲಿ ಈ ಮಸೂದೆಯಲ್ಲಿ ಕ್ರಾಂತಿಕಾರಿ ಬದಲಾವಣೆ ಮಾಡಬಲೆಂದು ತಿದ್ದುಪಡಿಗಳನ್ನು ಮುಂದೊತ್ತಿದ ಶ್ರೀ ಕೆ. ಟಿ. ಶಹಾ ಮೊದಲಾದವರ ಪ್ರಯತ್ನಗಳಿಗೆ ಫಲ [illegible] ದೊರೆಯಲಿಲ್ಲ. ಈಗ ಈ ಕಾಯದೆಯಲ್ಲಿ ಸಲ್ಲಿಸಲ್ಪಟ್ಟ ಬ್ಯಾಂಕುಗಳನ್ನು—ಅಥವಾ ಯಾವವೇ ಬ್ಯಾಂಕುಗಳನ್ನು [illegible] ಕಲಮುಗಳ ಪರಿಧಿಯಿಂದ ಮುಕ್ತಗೊಳಿಸುವ ಅಧಿಕಾರ ಸರಕಾರಕ್ಕಿದೆ. ವಿದೇಶಿ [illegible] ನಿಯಮಯು ಬ್ಯಾಂಕುಗಳಿಗೆ ಇದು ಅನ್ವಯಿಸುವದಿಲ್ಲ. ಇದಕ್ಕಾಗಿ ಇದನ್ನು ಕಠಿಣ [illegible] ಟೀಕಿಸಲಾಯಿತು. ಬ್ಯಾಂಕಿಂಗ್ ಕಂಪ [illegible] ಮೆನೇಜಿಂಗ್ ಡೈರೆಕ್ಟರರು ಪಡೆಯ [illegible]

[illegible]

[illegible]

ವೇಡಿಕೆಗಳ ಬಗ್ಗೆ ಮತಗಣನೆ ಪ್ರಾರಂಭವಾಗಿದೆ.

ಪ್ರಶ್ನೋತ್ತರಗಳು

ಪ್ರಶ್ನೋತ್ತರ ಕಾಲದಲ್ಲಿ ಹೊರಪಟ್ಟ ಮುಖ್ಯ ಅಂಶಗಳು ಇಂತಿವೆ:

ಜವಳಿ ನಿಯಂತ್ರಣವನ್ನು ಕಿತ್ತುಹಾಕುವ ಅಥವಾ ಅದರ ಬೆಲೆಗಳನ್ನು ಬದಲಿಸುವ ಇಚ್ಛೆ ಸರಕಾರಕ್ಕಿಲ್ಲ.

ಪಶ್ಚಿಮ ಬಂಗಾಲದಲ್ಲಿ ೬, ಓಡಿಸಾದಲ್ಲಿ ೧, ಮಧ್ಯಪ್ರಾಂತದಲ್ಲಿ ೨, ಮುಂಬಯಿಯಲ್ಲಿ ೩, ಮದ್ರಾಸಿನಲ್ಲಿ ೧೦ ಹೀಗೆ ವನಸ್ಪತಿ ಕಾರಖಾನೆಗಳು ಸ್ಥಾಪಿತವಾಗಲಿವೆ. ಇವುಗಳಲ್ಲಿ ವರ್ಷಕ್ಕೆ ೧,೪೫,೫೨೦ ಟನ್ ವನಸ್ಪತಿ ತುಪ್ಪ ತಯಾರಾಗುವದು.

ಎಣ್ಣೆಯ ಆದಿರುಗಳಿಗಾಗಿ ಭಾರತದಲ್ಲಿ ಕಚ್ಛ, ಕಾಠೇವಾಡ, ಆಸಾಮ, ಪೂರ್ವಪಂಜಾಬಗಳಲ್ಲಿ ಭೂಗರ್ಭಸಂಶೋಧನೆಯಾಗುತ್ತಿದೆ. ಆಸಾಮದಲ್ಲಿ ಮಾತ್ರ ಈಗ ಪೆಟ್ರೋಲ ಸಿಗುತ್ತಿದ್ದು ಅದು ನಮ್ಮ ಬೇಡಿಕೆಯಲ್ಲಿ ೧೦೦ ಕ್ಕೆ ೧೦ ರಷ್ಟೂ ಪೂರೈಸುವದಿಲ್ಲ. ಅದರಿಂದ ವಿದೇಶಗಳಿಂದ ಕ್ರೂಡಆಯಿಲ್ ತರಿಸಿ ಇಲ್ಲಿ ಶುದ್ಧಗೊಳಿಸುವ ಬಗ್ಗೆ ವಿದೇಶಿ ಕಂಪನಿಗಳೊಡನೆ ವ್ಯವಹಾರ ನಡೆದಿದೆ.

ಬ್ರಹ್ಮದೇಶದಲ್ಲಿ ಬ್ರಹ್ಮೀಯರಿಗೂ ಕೆರೆನರಿಗೂ ಯುದ್ಧ ನಡೆಯುತಿರುವ ಪ್ರದೇಶಗಳಲ್ಲಿ ಅನೇಕ ಹಿಂದೀಯರಿದ್ದು ಅವರಲ್ಲಿ ಅಧಿಕಾಂಶ ಜನರನ್ನು ರಂಗೂನಿಗೆ ಉಭಯಪಕ್ಷಗಳ ಸಹಕಾರದಿಂದ ಸ್ಥಳಾಂತರಿಸಲಾಗಿದೆ. ಅಲ್ಲಿ ಒಟ್ಟು ೭ ಲಕ್ಷ ಹಿಂದೀಯರಿದ್ದಾರೆ. ಇನಸೀನದಲ್ಲಿ ಸಿಕ್ಕಿಬಿದ್ದಿದ್ದ ಹಿಂದೀಯರಲ್ಲಿ ೪೦೦೦ ಜನರನ್ನು ಹಿಂದೀ ರಾಯಭಾರಿಗಳ ಪರಿಶ್ರಮದಿಂದ ಪಾರುಮಾಡಲಾಗಿದೆ. ಬ್ರಹ್ಮದಲ್ಲಿದ್ದ ಹಿಂದೀಯರನ್ನೆಲ್ಲ ತಿರುಗಿ ಕರೆಸಿಕೊಳ್ಳುವ ವಿಚಾರವಿಲ್ಲ.

ವಿಲೀನ ಸಂಸ್ಥಾನಗಳ ಅರಸರ ಖಾಸಗಿ ವೆಚ್ಚಕ್ಕಾಗಿ ಆಯಾ ಸಂಸ್ಥಾನದ ಉತ್ಪನ್ನದಲ್ಲಿ ಮೊದಲಿನ ಲಕ್ಷಕ್ಕೆ ಸೇಕಡಾ ೧೫, ಮುಂದಿನ ೪ ಲಕ್ಷಕ್ಕೆ ಸೇಕಡಾ ೧೦, ಉಳಿದುದಕ್ಕೆ ಸೇಕಡಾ ೭॥ ಯಂತೆ ಗೊತ್ತುಪಡಿಸಲಾಗಿದ್ದು ಅದು ಒಟ್ಟು ವರ್ಷಕ್ಕೆ ೧೦ ಲಕ್ಷ ಮೀರಬಾರದೆಂದು ನಿರ್ಧರಿಸಲಾಗಿದೆ. ಈ ನಿಯಮವನ್ನು ಕೆಲ ಪ್ರಸಂಗಗಳಲ್ಲಿ ಅನ್ವಯಿಸಿಲ್ಲ. ಈ ವ್ಯವಸ್ಥೆ ಸದ್ಯದ ಅರಸರ ಜೀವಮಾನದವರೆಗಷ್ಟೆ. ಅನ್ವಯಿಸುವದು ಉತ್ತರಾಧಿಕಾರಿಗಳ ಖಾಸಗಿ ವೆಚ್ಚದ ವಿವರ ಇನ್ನೂ ನಿರ್ಧಾರವಾಗಿಲ್ಲ.

ರೇಡಿಯೋ ಟ್ರಾನ್ಸಮಿಟರ, ರಿಸೀವರ ಮೊದಲಾದ ಆಕಾಶವಾಣಿ ಉಪಕರಣಗಳನ್ನು ಭಾರತದಲ್ಲೆ ತಯಾರಿಸುವ ಯೋಜನೆ ಸಿದ್ಧವಾಗಿದೆ.

ಕರಾಚಿಯಲ್ಲಿರುವ ಪಂಚಮುಖಿ ಹನುಮಾನ್ ದೇವಾಲಯದ ಮೂರ್ತಿಭಂಗ ಮಾಡಿದ ಬಗ್ಗೆ ಭಾರತ ಸರಕಾರ ಪಾಕಿಸ್ತಾನಕ್ಕೆ ನಿಷೇಧ ಪತ್ರ ಕಳಿಸಿದ್ದು ಆ ಬಗ್ಗೆ ಪಾಕಿಸ್ತಾನ ವಿಷಾದ ವ್ಯಕ್ತಗೊಳಿಸಿದೆ. ಆ ಸಂಬಂಧದಲ್ಲಿ ಪಾಕಿಸ್ತಾನ ಸರಕಾರ ಇಬ್ಬರು ಮುಸ್ಲಿಮರನ್ನು ಬಂಧಿಸಿದೆ.

ರೇಲ್ವೆ ಮುಂಗಡಪತ್ರ

ಶುಕ್ರವಾರ (ತಾ ೧೮) ದಿನ ಅವರ ಎರಡು ದಿನ ಹಿಂದೆ ಮಂಡಿಸಲ್ಪಟ್ಟ ರೇಲ್ವೆ ಮುಂಗಡ ಪತ್ರದ ಸಾಮಾನ್ಯ ಚರ್ಚೆ ಪ್ರಾರಂಭವಾಗಿ ಸೋಮವಾರ ತಾ ೨೦ ಕ್ಕೆ ಮುಗಿಯಿತು. ಎಂದಿನಂತೆ ಚರ್ಚೆಯಲ್ಲಿ ಹಜನುಗಟ್ಟಲೆ ಸದಸ್ಯರು ಭಾಗವಹಿಸಿದ್ದರು. ಹೆಚ್ಚು ಕಡಿಮೆ ಎಲ್ಲರೂ ಮೂರನೆ ವರ್ಗದ ಪ್ರವಾಸಿಕರ ತೊಂದರೆಗಳನ್ನು ದೂರೀಕರಿಸಲು ಒತ್ತಾಯ ಮಾಡಿದರು.

ಶ್ರೀ ಜಿ. ದಾಸರು ರೇಲ್ವೆ ಸಂಪನ್ನು ಪರಿಹರಿಸಿದುದಕ್ಕಾಗಿ ಜಯಪ್ರಕಾಶ ನಾರಾಯಣರನ್ನು ಅಭಿನಂದಿಸಿದರು. ಸೇಠ ಗೋವಿಂದದಾಸರು, ಗಾಂಧೀಜಿಯಂತೆ ಮಂತ್ರಿಗಳೂ ಮೂರನೆ ವರ್ಗದಲ್ಲಿ ಪ್ರವಾಸ ಮಾಡಿ ಸುಖ ಕಷ್ಟ ಅನುಭವಿಸಬೇಕೆಂದು ಸೂಚಿಸಿದರು. ಅವರು ಉಪ್ಪದೇಶವಾದ ಇಲ್ಲಿ ಮೂರನೆ ವರ್ಗಕ್ಕೂ ಬೀಸಣಿಗೆಯ ವ್ಯವಸ್ಥೆಯಾಗಬೇಕೆಂದು ಸೂಚಿಸಿದರಲ್ಲದೆ ಹೊಸ ವರ್ಗೀಕರಣ ವ್ಯವಸ್ಥೆಯನ್ನು ಟೀಕಿಸಿ ಅದರಿಂದ ಎರಡನೆ ವರ್ಗದಲ್ಲಿ ದಟ್ಟಣೆಯುಂಟಾಗಿ ಪ್ರವಾಸಿಕರು ಬಾಧೆಪಡಬೇಕಾಗಿದೆಯೆಂದು ದೂರಿದರು. ರಾಷ್ಟ್ರೀಯ ಮಜದೂರ ಸಂಘದ ಪಂ. ಹರಿಹರನಾಥ ಶಾಸ್ತ್ರಿಗಳು ಸಮಾಜವಾದಿಗಳನ್ನು ತಿರುಗಿ ಕಾಂಗ್ರೆಸ್ಸಿನಲ್ಲಿ ಸೇರಲು ಬಿನ್ನವಿಸಿದರು. ರೇಲ್ವೇ ನೌಕರರ ಸಂಬಳ ಏರಿಸಿದ್ದು ಸಾಲದೆಂದೂ ಅವರ ಬೇಡಿಕೆಗಳನ್ನು ಔದಾರ್ಯದಿಂದ ನೋಡಬೇಕೆಂದೂ ಅವರು ಕೇಳಿಕೊಂಡರು.

ಶ್ರೀಮತಿ ಆನಿ ಮಸ್ಕರಿನೆರು ಹೆಂಗಸರ ಡಬ್ಬಿಗಳನ್ನು ಹೆಚ್ಚಿಸಬೇಕೆಂದರೆ ಶ್ರೀ ಟಿ. ಪ್ರಕಾಶಂ ಅವರು ಮೂರನೆ ವರ್ಗದ ದರಗಳ ಇಳಿಸಬೇಕೆಂದರು. ಸಲತಿಂಗಳ ಹಿಂದೆ ರೇಲ್ವೆ ವಿಚಾರಣಾ ಮಂಡಲದ ಅಧ್ಯಕ್ಷರಾಗಿ ನೇಮಿಸಲ್ಪಟ್ಟಿದ್ದ ಪಂ. ಕುಂಜ್ರುರು ಅವರು ತಮ್ಮ ವರದಿಯನ್ನು ಸಕಾಲದಲ್ಲಿ ಸರಕಾರದವರು ಪ್ರಕಟಿಸದಿದ್ದುದನ್ನು ಟೀಕಿಸಿ, ಈಚೆಗೆ ರೇಲ್ವೆ ಓಡಾಟದ ಸಕಾಲಿಕತೆ ಮತ್ತು ವೇಗ ಸುಧಾರಿಸಿದ್ದರೂ ಇನ್ನೂ ಸುಧಾರಿಸಬೇಕೆಂದು ಹೇಳಿದರು. ರೇಲ್ವೆ ನಿರ್ಮಾಣ-ಕಾರ್ಯಗಳಲ್ಲಿ ಸರಿಯಾದ ಮೇಲ್ವಿಚಾರಣೆಯಾಗಬೇಕು ಮತ್ತು ಕೆಲಸಗಾರರಲ್ಲಿ ಕರ್ತವ್ಯಬುದ್ಧಿಯನ್ನು ಜಾಗ್ರತಗೊಳಿಸಬೇಕೆಂದು ಅವರ ಸೂಚನೆಯಿತ್ತು. ಶ್ರೀ ಸಿಧ್ವಾ ಅವರು ದಿಲ್ಲಿಯಿಂದ ಪಾಟಣಾಕ್ಕೆ ಓಡುವ ಪಾಟಣಾ ಎಕ್ಸಪ್ರೆಸ್ ಮಾದರಿಯ ಗಾಡಿಗಳು ಹೆಚ್ಚಬೇಕೆಂದರು.

ಮುಂಬಯಿ ಶಾಸನ ಸಭೆ
ಪಾನ ಪ್ರತಿಬಂಧ ಮಸೂದೆ

ಮುಂಬಯಿ ಶಾಸನ ಸಭೆಯ ಆಯವ್ಯಯ ಅಧಿವೇಶನ ತಾ. ೧೮ ಕ್ಕೆ ಮುಂಬಯಿಯಲ್ಲಿ ಪ್ರಾರಂಭವಾಗಿದೆ. ಶ್ರೀ ಕೆ. ಎಸ್. ಫಿರೋದಿಯಾ ಅವರು ಅಧ್ಯಕ್ಷಪೀಠದಲ್ಲಿದ್ದರು. ಸಮಾರಂಭ ಕಾಲದಲ್ಲಿ ಸದಸ್ಯರು ವಿರಳವಾಗಿದ್ದರು. ಇಬ್ಬರು ಹೊಸ ಸದಸ್ಯರ ಪ್ರತಿಜ್ಞಾವಿಧಿ ಜ[illegible]ಗು.

ಪ್ರಾರಂಭದ ದಿನ [illegible]ರು ಮಂಡಿಸಿದ ಅನೇಕ ತಿದ್ದುಪಡಿ [illegible] ವಿಶೇಷ ಚರ್ಚೆಯಿಲ್ಲದೆ ಸ್ವೀಕೃತವಾದವು. ಅವುಗಳಲ್ಲಿ ಮುಂಬಯಿ ನಗರ ಭೂಕಂದಾಯ ತಿದ್ದುಪಡಿ ಮಸೂದೆ, ಹಿಂದೂ ಬಹುಪತ್ನೀತ್ವ ನಿರೋಧಕ ಕಾಯದೆ ತಿದ್ದುಪಡಿ ಮಸೂದೆ ಇತ್ಯಾದಿಗಳು ಮಹತ್ವದವು.

ಪ್ರಶ್ನೋತ್ತರ ಕಾಲದಲ್ಲಿ ಮುಖ್ಯ ಮಂತ್ರಿ ಶ್ರೀ ಬಿ ಜಿ. ಖೇರರು ಪ್ರಾಂತದಿಂದ ಜಾತೀಯತೆಯ ಉಚ್ಚಾಟನೆ ಮಾಡಲು ಕೈಕೊಳ್ಳಲ್ಪಟ್ಟ ಉಪಾಯಗಳನ್ನು ವಿವರಿಸಿದರು. ಮಹಾತ್ಮರ ಕೊಲೆಯ ನಂತರ ಆರ್. ಎಸ್. ಎಸ್., ಮುಸ್ಲಿಂ ನ್ಯಾಶನಲ್ ಗಾರ್ಡ್ಸ, ಖಾಕ್ಸಾರ, ಸಮತಾ ಸೈನಿಕ ದಲ, ಆರ್. ಎಸ್. ಸೇವಿಕಾ ಸಂಘ, ಹಿಂದೂ ಮಹಿಳಾ ಮಂಡಲ ಈ ಸಂಸ್ಥೆಗಳನ್ನು ಪ್ರತಿಬಂಧಿಸಲಾಯಿತು. ಸರಕಾರಿ ಅಧಿಕಾರಿಗಳು ಜಾತೀಯ ಸ್ವರೂಪದ ರಾಜಕೀಯ ಸಂಸ್ಥೆಗಳಲ್ಲಿ ಭಾಗ ವಹಿಸತಕ್ಕದ್ದಲ್ಲವೆಂದು ಆಜ್ಞಾಪಿಸಲಾಗಿದೆ. ನೌಕರಿಯ ಅರ್ಜಿಗಳಲ್ಲಿ ಜಾತಿಯ ಉಲ್ಲೇಖದ ಕಡ್ಡಾಯತನವನ್ನು ತೆಗೆದುಹಾಕಲಾಗಿದೆ. ಜಾತೀಯ ಸಂಸ್ಥೆಗಳಿಂದ ಬರುವ ರಾಜಕೀಯ ಸ್ವರೂಪದ ಮನವಿಗಳನ್ನೂ ಜಾತೀಯ ಶಿಷ್ಟಮಂಡಲಗಳನ್ನೂ ಸ್ವೀಕರಿಸಬಾರದು. ರಾಜಕೀಯ ರಂಗದಲ್ಲಿ ಕೆಲಸ ಮಾಡುತಿರುವ ರಾಜಕೀಯ ಸಂಸ್ಥೆಗಳನ್ನು ಪ್ರತಿಬಂಧಿಸುವ ವಿಚಾರವೂ ಇದೆ.

ಶಾಸನ ಸಭೆಯಲ್ಲಿ ಪಕ್ಷಗಳ ಬಲಾಬಲವನ್ನು ಕುರಿತ ಅಂಕೆ ಸಂಖ್ಯೆಗಳನ್ನು ಅಧ್ಯಕ್ಷರು ಸಭೆಯ ಮುಂದಿಟ್ಟರು. ೧೭೧ ಸದಸ್ಯರುಳ್ಳ ಸಭೆಯಲ್ಲಿ ೧೪೫ ಕಾಂಗ್ರೆಸ್, ೨೭ ಚತುರ್ಥಪಕ್ಷ, ೫ ಪ್ರಾಗತಿಕ, ೧ ಹಿಂದುಸಭಾ, ೧ ಕಮ್ಯುನಿಸ್ಟ, ೫ ಒಕ್ಕಲಿಗ ಕೂಲಿಕಾರ ಪಕ್ಷ, ೫ ಸ್ವತಂತ್ರ ಸಭಿಕರಿದ್ದು ಹೊಸದಾಗಿ ಆರಿಸಲ್ಪಟ್ಟಿರುವ ಮಿಯಾಭಾಯಿ ಮಣಿಕಾಜಿ, ಹಾಗು ಗುಲಾಮ ಹೈದರಲಿ ಇವರೂ ಸ್ವತಂತ್ರರಿದ್ದಾರೆ. ಇನ್ನೊಂದರ ಉಪಚುನಾವಣೆ ಇನ್ನೂ ಜರಗಿಲ್ಲ.

ತಾ. ೧೯ ಕ್ಕೆ ಅಬಕಾರಿ ಮಂತ್ರಿ ಶ್ರೀ ಎಲ್. ಮ. ಪಾಟೀಲರು ಮದ್ಯಪಾನ ಪ್ರತಿಬಂಧಕ ಮಸೂದೆಯನ್ನು ಮಂಡಿಸಿ ಅದರ ಬಗ್ಗೆ ಕೆಲ ಮಾತುಗಳನ್ನು ಹೇಳಿದರು. ಈಗಿರುವ ಹಲ ಮದ್ಯಪಾನ ಪ್ರತಿಬಂಧ ಕಾಯದೆಗಳನ್ನು ಒಂದುಗೂಡಿಸಿ ಅವಶ್ಯ ಮಾರ್ಪಾಟುಗಳೊಡನೆ ಸಿದ್ಧವಾದ ೧೪೮ ಕಲಮಿನ ೫೪ ಪುಟಗಳನ್ನು ವ್ಯಾಪಿಸಿದ ಈ ಮಸೂದೆಯು ೧೧ ಪ್ರಕರಣಗಳಲ್ಲಿ "ಪ್ರತಿಬಂಧಿತ ಪದಾರ್ಥ"ಗಳ ಆಯಾತ ನಿರ್ಯಾತ ಮತ್ತು ಉಪಯೋಗ, ಅವುಗಳ ಜಾಹಿರಾತು ಮೊದಲಾದವುಗಳನ್ನು ಪ್ರತಿಬಂಧಿಸುವ, ಈ ಕಾಯದೆಯ ಸಂಬಂಧದಲ್ಲಿ ವಿದೇಶೀಯರೇ ಮೊದಲಾದವರನ್ನು ಅಪವಾದವಾಗಿ ಮಾಡುವ, ಶಿಕ್ಷೆಯ, ಅಡಳಿತೆಯ ಮತ್ತು ಇತರ ಬಾಬುಗಳ ಬಗ್ಗೆ ಸವಿಸ್ತಾರ ವಿಧಿಗಳು ಇವೆ. ಸಂಪೂರ್ಣ ಮದ್ಯಪಾನ ನಿರ್ಬಂಧದಿಂದ ಸರಕಾರಕ್ಕೆ (ವಿಲೀನ ಪ್ರದೇಶಗಳನ್ನೊಳಗೊಂಡು) ಸುಮಾರು ೧೨ ಕೋಟಿ ರೂಪಾಯಿ ಹಾನಿಯಾಗುವದೆಂದೂ ಪಾನಪ್ರತಿಬಂಧದ ಆಡಳಿತೆಯ ವೆಚ್ಚವನ್ನು ಆದಷ್ಟು ಕಡಿಮೆ ಮಾಡಲು ಪ್ರಯತ್ನಿಸಲಾಗುವದೆಂದೂ ಮಂತ್ರಿಗಳು ತಿಳಿಸಿದರು.

ತಾ. ೧೯ ಕ್ಕೆ ಪ್ರಶ್ನೋತ್ತರ ಕಾಲದಲ್ಲಿ ಗೃಹಮಂತ್ರಿಗಳು ಮುಂಬಯಿ ಪ್ರಾಂತದಲ್ಲಿ ಆರ್. ಎಸ್. ಎಸ್. ನವರ ಗುಪ್ತ ಚಟುವಟಿಕೆಗಳು ಪುನಃ ಪ್ರಾರಂಭವಾಗಿವೆಯೆಂದು ವರದಿಗಳು ಬಂದಿದ್ದರೂ ಸಾಮಾನ್ಯ ಪೋಲೀಸರೇ ಅದರ ಸಮಾಚಾರ ತೆಗೆದುಕೊಳ್ಳಲು ಸಮರ್ಥರಿರುವದರಿಂದ ಪ್ರತ್ಯೇಕ ಪೋಲೀಸು ಪಡೆಯನ್ನು ನಿರ್ಮಿಸುವ ಅವಶ್ಯಕತೆಯಿಲ್ಲೆಂದು ತಿಳಿಸಿದರು.

ಪಶ್ಚಿಮ ಪಾಕಿಸ್ತಾನದಲ್ಲಿಯ ಮೂರೂ ಪ್ರಾಂತಗಳನ್ನು ಒಟ್ಟುಗೂಡಿಸಿ ಒಂದೇ ಆಡಳಿತದಲ್ಲಿ ತರುವ ವಿಚಾರವು ನಡೆದಿದೆಯೆಂದು ತಿಳಿಯುತ್ತದೆ.

ವಜ್ರೇಶ್ವರಿಯ ಬಿಸಿನೀರ ಕುಂಡಗಳು

ಪ್ರಕೃತಿಸೌಂದರ್ಯದ ತೌರುಮನೆಯಲ್ಲಿ ದೇವರಿಟ್ಟ ಆರೋಗ್ಯದ ಸೆಲೆಗಳು: ನಿಸರ್ಗದ ಒಂದು ವೈಚಿತ್ರ್ಯ

ಮುಂಬಯಿಯ ಚರ್ಚಗೇಟ್ (B. B & C. I.) ರೈಲು ನಿಲ್ದಾಣದಿಂದ ಬೇಸಿನ್ ರೋಡ್ ಎಂಬಲ್ಲಿಯ ವರೆಗೆ ಒಂದು ತಾಸಿನ ಸುಖಮಯ ರೈಲು ಹಾದಿ. ಅಲ್ಲಿಂದ ಮುಂದೆ ಎರಡುತಾಸಿನ ಮೋಟಾರು ದಾರಿಯೆಂದರೆ ನಿಮ್ಮ ಮೈಯೆಲ್ಲ ನಜ್ಜುಗುಜ್ಜಾಗುವವು. ಆದರೆ ದಾರಿಯುದ್ದಕ್ಕೂ ಸುತ್ತುಮುತ್ತಲಿನ ಸುಂದರ ನೋಟಗಳು ಪಟ್ಟಣಿಗನ ಕಣ್ಣಿಗೆ ಹಬ್ಬವಾಗುವವು. ಅಲ್ಲಲ್ಲಿ ಹರಕು ಮುರಕು ಗುಡಿಸಲುಗಳು, ಹೊಟ್ಟು ಬಿಟ್ಟ ಗದ್ದೆಗಳು ಕರಿಯ ಹಸುರು ಕಾಡುಗಳು, ಕೆಸರ ಕೊಂಪೆಗಳು, ಇವೆಲ್ಲ ಮನೋರಂಜಕವಾಗಿ ಗೋಚರಿಸುವದರಿಂದ ಪ್ರಯಾಣದ ಶ್ರಮವೇ ಆಗದು.

ಮುಂಬಯಿಯಿಂದ ಸುಮಾರು ಐವತ್ತು ಮೈಲು ದೂರದಲ್ಲಿ ವಜ್ರೇಶ್ವರಿ ಎಂಬೊಂದು ಸ್ಥಳವಿದೆ. ಅದೊಂದು ಬರಿಯ ಹಳ್ಳಿ; ಆದರೆ ಮುಂಬಯಿಯ ಜನರಿಗೆ ಈ ಹೆಸರು ಹೊಸತಲ್ಲ. ಬೆಳಗಿನಿಂದ ಸಾಯಂಕಾಲದ ವರೆಗೆ ದುಡಿದು "ಯಾಂತ್ರಿಕ ಜೀವನ"ವನ್ನು ನಡೆಸುವ ಮುಂಬಯಿಗನೊಬ್ಬನಿಗೆ ಚಲಚಿತ್ರ, ನಾಟಕ, ಆಟ ಕೂಟಗಳ ಹೊರತು ಬೇರೆ



ವಜ್ರೇಶ್ವರಿಯ ಸುತ್ತಲೂ ವಿಶಾಲವಾದ ಬಯಲು

ಇದೊಂದು ಮೆಚ್ಚಿನ ವಿಹಾರ ಕೇಂದ್ರವೆನ್ನಬಹುದು. ಮುಂಬಯಿಯಿಂದ ಅಲ್ಲಿಗೆ ಹೋಗಿ ಬರುವ ರೈಲುಬಂಡಿ ಮತ್ತು ಮೋಟಾರು ಗಾಡಿಯ ಪ್ರವಾಸ ವೆಚ್ಚ, ವ್ಯಕ್ತಿಯೊಂದರ ಸುಮಾರು ಮೂರು ನಾಲ್ಕು ರೂಪಾಯಿಗಳಷ್ಟು. ಬೇರೆ ತಿಂಡಿ, ತಿನಸುಗಳಿಗೆಂದು ಎರಡು ಮೂರು ರೂಪಾಯಿಗಳಿಷ್ಟರಾಯಿತು. ಹೀಗೆ ಐದಾರು ರೂಪಾಯಿಗಳಲ್ಲೊಂದು ಸಣ್ಣ ಅಚ್ಚುಮೆಚ್ಚಿನ ಸುಗಮ ಪ್ರವಾಸವನ್ನು ಮುಗಿಸಿ, ಒಂದೆರಡು ದಿನದಲ್ಲಿ ಹಿಂದಿರುಗಬಹುದು.

ಸತ್ಯಸೃಷ್ಟಿಯ ತೌರುಮನೆ

ವಜ್ರೇಶ್ವರಿಯು ವಿಶ್ವವ್ಯಾಪೀ ಪರಮಾತ್ಮನ ಸತ್ಯಸೃಷ್ಟಿಯ—ಅಲ್ಲ ಅಲ್ಲ—ಪ್ರಕೃತಿದೇವಿಯ ಭೂಗರ್ಭದ ಅದ್ಭುತ ಅಚ್ಚರಿಗಳಿಗೊಂದು ನಿದರ್ಶನ. ಜನರು ಇಲ್ಲಿನ ಬಿಸಿನೀರ ಕುಂಡಗಳಿಗಾಗಿ ತಂಡ ತಂಡವಾಗಿ ಬರುತ್ತಾರೆ. ಅವರಲ್ಲಿ ಸ್ನಾನ ಮಾಡಿ ಸಂತೃಪ್ತಿಪಡುತ್ತಾರೆ. ಈ ಪತ್ರಿಕೆಯ ಮುಖಪತ್ರದಲ್ಲಿರುವ ಚಿತ್ರವು ವಜ್ರೇಶ್ವರಿಯಲ್ಲಿನದೊಂದು ಪ್ರಾಮುಖ್ಯ ದೇವಸ್ಥಾನದ ಗೋಪುರದ್ದಾಗಿದೆ. ಈ ದೇಗುಲದಲ್ಲಿನ ದೇವಿಯ ಹಾಲುಗಲ್ಲಿನ ಪ್ರತಿಮೆಯ ದೆಸೆಯಿಂದಾಗಿ ಈ ಊರಿಗೆ ವಜ್ರೇಶ್ವರಿ ಎಂದು ಹೆಸರು ಬಂದಿರಬೇಕು. ಸುತ್ತು ಮುತ್ತಲೂ ಕಾಡು ಗುಡ್ಡಗಳು, ಸಣ್ಣ ದೊಡ್ಡ ನದಿ, ಹಳ್ಳ, ಹಳ್ಳವೆಂದು ಎತ್ತ ಕಂಡರತ್ತ ಏನಾದರೊಂದು ವೈಶಿಷ್ಟ್ಯದಿಂದ ಅವ್ಯಕ್ತವಾದ ಈ ಸ್ಥಳವು ನಯನಮನೋಹರವಾಗಿದೆ. ದೂರದಿಂದ ಗೋಚರಿಸುವ ಪಶ್ಚಿಮ ಪರ್ವತಾವಳಿ. ಇಲ್ಲಿಗೆ ಬರುವ ಜನರೆಲ್ಲ ಸ್ವೇಚ್ಛಾರ್ಥಿಗಳಾಗಿ ತಮ್ಮ ತಾಪತ್ರಯಗಳನ್ನೆಲ್ಲ ಮರೆತು ಮನಬಂದಂತೆ ವಿಹರಿಸುವರು. ವಜ್ರೇಶ್ವರಿಯ ವಿಹಾರ ವಿಲಾಸಗಳಲ್ಲಿ ಅವರೆಲ್ಲದ ಸಿಡುಕಿಗೂ ಬಿಡುವೇ. ಅಂತೂ ಅಲ್ಲಿಗೆ ಹೋಗಿ ಆ ಸ್ಥಳವನ್ನು ಕಂಡಾಗ ದಣಿದು ಬಂದ ಮಾನವಪ್ರಾಣಿಗೆ ಶಾಂತಿ ಸಿಗುವುದೆಂಬುದರಲ್ಲಿ ಸಂದೇಹವಿಲ್ಲ.

ಒಟ್ಟಿಗೆ ಇಲ್ಲಿ ಮೂರು ಮುಖ್ಯ ದೇಗುಲಗಳಿವೆ. ಮರ, ಕಲ್ಲುಗಳ, ಕೆತ್ತನೆಯ ಕೆಲಸ, ಶಿಲ್ಪ ಮುಂತಾದ ಕಲಾ ವೈಚಿತ್ರ್ಯ ನೈಪುಣ್ಯ ಅಲ್ಲಿ ಕಂಡು ಬಾರದಿದ್ದರೂ ಚಿಕ್ಕದೂ ಚೊಕ್ಕದೂ ಆದ ಈ ಗುಡಿಗೋಪುರಗಳು ಶೋಭಾಯಮಾನವಾಗಿವೆ. ಚಾರಿತ್ರಿಕ ದರ್ಶನಗಳೇನೂ ಇಲ್ಲಿ ಹೆಚ್ಚು ಸಿಗುವಂತಿಲ್ಲವಾದರೂ ಇವೆಲ್ಲ ಪ್ರಾಚೀನ ಕಾಲದವುಗಳೆಂದು ಕರೆಯಲು ಏನೂ ಶಂಕೆ ಪಡಬೇಕಾಗಿಲ್ಲ. ವಜ್ರಾದೇವೀ ದೇವಾಲಯದಲ್ಲಿ ಸರ್ವ ಸುಂದರವಾದ ಸುಮಾರು ನಾಲ್ಕಡಿ ಎತ್ತರದ ವಿಗ್ರಹವಿರುವದಾದರೆ ಇನ್ನೊಂದರಲ್ಲಿ ಶಿವಲಿಂಗವಿದೆ. ಅದರ ಮುಂದೆ ನಂದಿಯು ಚೆಂದವಾಗಿ ಕಂಗೊಳಿಸುತ್ತಿದೆ. ವಜ್ರೇಶ್ವರಿ ದೇವಸ್ಥಾನವು ಒಂದು ಸಣ್ಣ ಬೆಟ್ಟದ ಅಂಚಿನಲ್ಲಿದೆ. ಗುಡ್ಡದಪ್ಪಲಿನಲ್ಲಿದ್ದ ಆ ಗುಡಿಯನ್ನೇರಲು ಕಲ್ಲಿನಿಂದ ಮೆಟ್ಟಲುಗಳನ್ನು ಕಟ್ಟಿದ್ದಾರೆ.

ಇಲ್ಲಿಗೆ ಬಂದವರು ಈ ದೇಗುಲವನ್ನೇರಿ ವಜ್ರೇಶ್ವರಿಯ ದರ್ಶನವನ್ನು ಪಡೆಯದೆ ಹಿಂತಿರುಗುವದು ಅಪರೂಪ. ಇಲ್ಲಿಂದ ಸುಮಾರು ಅರ್ಧ ಮೈಲು ದೂರದಲ್ಲಿ ನಮಗೆ ಇನ್ನೊಂದು ದೇವಸ್ಥಾನವು ಸಿಗುವದು. ಅದೇ ಶಿವಾಲಯ. ಇಲ್ಲಾದರೂ ಸರಿಯೆ" ಚಿತ್ರ ವಿಚಿತ್ರ ಮನೋಹರ ವಿಷಯಗಳೇನೂ ಇಲ್ಲದಿದ್ದರೂ ಅದರ ಮುಂಭಾಗದಲ್ಲಿದ್ದ ಮೂರು ನೀರ ಕುಂಡಗಳು ಪ್ರಸಿದ್ಧವಾಗಿವೆ. ಆದರಲ್ಲಿನ ನೀರಿನ ವೈಚಿತ್ರ್ಯವನ್ನು ಹೇಳಿತೀರದು! ಅದನ್ನು ಕಂಡು, ಕಣ್ಣಾರೆ ಕಂಡೇ ಮನಗಾಣಬೇಕು.

ಬಿಸಿ ನೀರ ಕುಂಡಗಳು

ಸುಮಾರು ಹನ್ನೆರಡು ಅಡಿ ಉದ್ದ. ಆರಡಿ ಅಗಲ ಆಯತಾಕಾರದ ಈ ಕುಂಡಗಳ ಆಳವು ಹೆಚ್ಚು ಕಡಿಮೆ ನಾಲ್ಕಡಿಯಾಗಿದೆ. ಕುಂಡದ ನಾಲ್ಕು ಮಗ್ಗುಲುಗಳಿಗೂ ಶಿಲೆ ಕಲ್ಲನ್ನು ಚೌಕಟ್ಟಾಗಿ ಕಟ್ಟಿರುವರಲ್ಲದೆ ಪಾತಳಿಯನ್ನೂ ಕಲ್ಲ ತುಂಡುಗಳಿಂದ ಹಾಸಿರುತ್ತಾರೆ. ಅಲ್ಲಲ್ಲಿ ಬಿರುಕಿನಂತಿದ್ದ, ಬಿಲದಂತಿದ್ದ ಒಂದೆರಡು ಸಣ್ಣ ತೂತುಗಳ ಹೊರತು ಬೇರೆ ನೀರ ಝರಿಗೆ ಇಲ್ಲಿ ಅವಕಾಶವೇ ಇಲ್ಲ. ಈ ತೂತುಗಳಿಂದ ನೀರು ಒಸರಿ ಬಂದು ಕುಂಡಗಳು ತುಂಬುವವು. ಬರಿದು ಮಾಡಲು ಬುಡದಲ್ಲಿ ಒಂದು ತೂತಿದೆ. ಇದರಿಂದ ಒಮ್ಮೆಲೇ ನೀರನ್ನು ಬಿಟ್ಟು ಬಿಟ್ಟರೆ ಇನ್ನೊಮ್ಮೆ ಕುಂಡವು ತುಂಬಲು ಕೆಲವು ತಾಸುಗಳಾದರೂ ಬೇಕಾಗುವುದು. ಒಂದರಲ್ಲಿ ಬಿಸಿನೀರು, ಇನ್ನೊಂದರಲ್ಲಿ ಅರೆ ಬಿಸಿ, ಮಗುದೊಂದರಲ್ಲಿ ಉಗುರು ಬೆಚ್ಚನೆ. ಮೂರು ಕುಂಡಗಳಲ್ಲಿ ಮೂರು ವಿಧವಾದ ನೀರು ಹೊಮ್ಮುವುದು. ಮಗ್ಗುಲಲ್ಲಿ ಇನ್ನೊಂದು ಚಿಕ್ಕ ಕುಂಡವಿದೆ. ಅಲ್ಲಿಯ ನೀರು ತಣ್ಣಗಿದೆ. ಸ್ನಾನವಾದ ಬಳಿಕ ಬಟ್ಟೆಬರೆಗಳನ್ನು ಇಲ್ಲಿ ಒಗೆವರು. ಹೆಂಗಸರು, ಗಂಡಸರು, ಮಕ್ಕಳು, ಮುದಿಗಳೆಲ್ಲ ಈ ಕುಂಡಗಳಲ್ಲಿ ಸ್ನಾನ ಮಾಡುವರು. ಚಳಿಗಾಲದಲ್ಲಿ ಇಲ್ಲಿ ಕೆಲ ತಾಸುಗಳ ವರೆಗೆ ನಿಂದರೂ ಬೇಸರವೇ ಬಾರದು.



ವಜ್ರೇಶ್ವರಿಯ ಇನ್ನೊಂದು ಕೆರೆ

ಈ ಶಿವಾಲಯವನ್ನು ಬಿಟ್ಟು ಇನ್ನೂರು ಹೆಜ್ಜೆ ಹಿಂದಕ್ಕೆ ನಡೆದರೆ ದಾರಿಯ ಮಗ್ಗುಲಲ್ಲಿ ಕೆಳಗೆ ನಮಗೆ ಹಲವಾರು ಸಣ್ಣ ದೊಡ್ಡ ಕುಂಡಗಳು ಗೋಚರವಾಗುವುವು. ಇವುಗಳಲ್ಲಿ ಕೆಲವು ಚಚ್ಚೌಕ, ಆಯತ ಮತ್ತು ಗೋಲಾಕಾರವಾಗಿವೆ. ಇವುಗಳಲ್ಲಿ ಕೆಲವಲ್ಲಿ ಕುದಿಯುವ ನೀರು! ಇದರಲ್ಲಿಳಿದು ತುಸು ಹೊತ್ತು ನಿಂತರೆ ಮೈ ಕೈ ಸುಟ್ಟುಕೊಳ್ಳಬೇಕಾದೀತು. ಅದಲ್ಲದೆ ಬೇರೆ ಕುಂಡಗಳಲ್ಲೂ ಸಾಕಷ್ಟು ಬೇಕಷ್ಟು ಅಂದರೆ ಭಿನ್ನ ಭಿನ್ನ ಪರಿಮಿತಿಯ ಉಷ್ಣದ ನೀರಿದೆ. ಇಲ್ಲಿಯ ಕೆಲವು ಕುಂಡಗಳ ಪಾತಳಿಯಲ್ಲಿ ಮರಳಿದೆ. ಈ ಉಸುಬು ಕರ್ರಗಾಗಿದ್ದು ಸುಟ್ಟು ಹೋದಂತಿದೆ. ಇದು ವರೆಗೆ ಹೇಳಿದ ಎಲ್ಲಾ ಕುಂಡಗಳ ನೀರಿಗೂ ಗಂಧಕದ ವಾಸನೆ ಬರುತ್ತಿದೆ. ಇದರಿಂದ ಮಿಂದವರಿಗೇನೂ ಅಪಾಯವಿಲ್ಲವಂತೆ.

ನೀರಿನ ವೈಶಿಷ್ಟ್ಯ

ಈ ನೀರು ನೈಸರ್ಗಿಕವಾದ ಸೆಲೆಯಿಂದಲೇ ಬರುತ್ತದೆ. ಈ ನೀರನ್ನು ಅಲ್ಲಿನ ಜನರು ತಮ್ಮ ಬಾಳಬದುಕಿನ ವ್ಯವಹಾರಕ್ಕೆ ಉಪಯೋಗಿಸುವುದಿಲ್ಲವಾದರೂ ಕೆಲವರು ದಿನಾಲೂ ಇದನ್ನು ಒಂದೆರಡು ಗುಟುಕು ಕುಡಿಯುವರಂತೆ. ಹೀಗೆ ಕುಡಿದಲ್ಲಿ ರೋಗರುಜಿಗಳು ಬಾರವೆಂದು ಹೇಳುತ್ತಾರೆ. ಕಜ್ಜಿ ಜಡ್ಡು, ಚರ್ಮರೋಗಗಳು ಮುಂತಾದ ಅಂಟುರೋಗಗಳಿಗೆ ಈ ನೀರು ರಾಮಬಾಣದಂತಿದೆ. ಇದರಲ್ಲಿ ಬಹುಕಾಲ ಮಿಂದರೆ. ಮೈ ಕೈ ನೋವು, ವಾತ, ಉಳುಕು, ಮತ್ತು ಇನ್ನಿತರ ಬಗೆಯ ದೀರ್ಘ ಕಾಲದ ನೋವುಗಳು ಮಾಯವಾಗುವುವು. ಅಂತೂ ಇದು ವರೆಗೆ ಯಾವನೊಬ್ಬ ಭೌತ ವಿಜ್ಞಾನ ಶಾಸ್ತ್ರಜ್ಞನು ಈ ನೀರ ಪ್ರಯೋಗಮಾಡಿ ಪರಿಷ್ಕರಣವನ್ನು ವ್ಯಕ್ತಪಡಿಸಿಲ್ಲವಾದರೂ ಇದರಲ್ಲಿ ಕೆಲಬಗೆಯ ಲವಣಗಳು ಮತ್ತು ಅಧಿಕವಾಗಿ ಗಂಧಕಾಮ್ಲ ಮುಂತಾದುವು ಮಿಶ್ರವಾಗಿವೆಯೆಂಬ ಮಾತನ್ನು ನಂಬಲು ಅಡ್ಡಿಯಿಲ್ಲ. ಇಲ್ಲೂ ತುಂಬಾ ಜನರು ದಿನಾಲೂ ಸ್ನಾನಮಾಡಲೆಂದು ಊರು ನೆರೆಊರುಗಳಿಂದ, ಪೇಟೆ ಪಟ್ಟಣಗಳಿಂದ ಬರುತ್ತಾರೆ.

ಇಲ್ಲಿಂದ ಸುಮಾರು ಎರಡು ಮೈಲು ದೂರದಲ್ಲಿ ಗಣೇಶಪುರವೆಂಬ ಸ್ಥಳವಿದೆ. ಅಲ್ಲಿ ಒಂದು ಗಣೇಶ ದೇಗುಲವಿದೆ. ಅದರ ಮುಂಗಡೆ ಮೂರು ನೀರಕುಂಡಗಳಿವೆ. ಒಂದರ ನೀರು ಬಲು ಬಿಸಿ, ಇನ್ನೊಂದು ಸಾಕಷ್ಟೆ (ಮೀಯುವಷ್ಟು) ಬಿಸಿ. ಮಗುದೊಂದು ಸಪ್ಪೆ, ತಣ್ಣಗೆ.


ಈ ಗಣೇಶಾಲಯದ ಮುಂಭಾಗದಲ್ಲೇ ಒಂದು ಧರ್ಮಶಾಲೆಯಿದೆ. ಇದೊಂದು ಅನ್ನಸತ್ರವಲ್ಲವಾದರೂ ಇಲ್ಲಿ ಉಳಕೊಳ್ಳಲು ಸೌಕರ್ಯವಿದೆ. ಅಡುಗೆ ಮಾಡಲು ಬೇಕಾದ ಸಾಧನೋಪಕರಣಗಳು ಸಿಗುತ್ತವೆ. ಬೇಕಾದ ಬೇಳೆ, ಧಾನ್ಯ, ತರಕಾರಿ, ಹಣ್ಣು ಹಂಪಲುಗಳನ್ನು ಪೇಟೆಯಿಂದ ಕೊಂಡುಕೊಂಡರಾಯಿತು. ಪೇಟೆಯೂ ಸಮೀಪದಲ್ಲಿದೆ. ಹಾಲೂ ಯಥೇಷ್ಟವಾಗಿ ಯೋಗ್ಯ ಬೆಲೆಗೆ ದೊರೆಯುವುದು. ಊಟದ ಹೋಟೇಲಿಗಾದರೂ ಅಲ್ಲೇನೂ ಕಡಿಮೆಯಿಲ್ಲ.

ಗಣೇಶಪುರಿಯ ಸನ್ಯಾಸಿ

ಗಣೇಶಪುರಿಯಲ್ಲಿನ ವಿಘ್ನೇಶ್ವರಾಲಯದ ಮಗ್ಗುಲಲ್ಲೇ ಕುಟೀರದಂತಹ ಒಂದು ಸಣ್ಣ ಕಟ್ಟಡವಿದೆ. ಇದು ದೇಗುಲದ ಆವಾರಗಳಿಗೆ ಹೊಂದಿಕೊಂಡಿದೆ. ಸುಣ್ಣಮಣ್ಣಿನ ಗಾರೆಗಳೂ ಇವಕ್ಕಿಲ್ಲ. ಪೇಟೆ, ಪಟ್ಟಣದ ಮನೆ ಮಹಡಿಗಳ ಸೊಬಗಾದರೂ ಇಲ್ಲಿ ಕಾಣಸಿಗಲಿಕ್ಕಿಲ್ಲ. ನೆಲ ಮತ್ತು ಗೋಡೆಗಳಿಗೆ ಸಗಣಿ ಸಾರಿಸಿದೆ. ಈ ಮಂದಿರದ ವಿಶಿಷ್ಟತೆಗೆ ಬೇರೆ ಕಾರಣವಿದೆ. ಈ ನಿವಾಸದ ಮೂಲೆಯೊಂದರಲ್ಲಿ ಸದಾಕಾಲ ಹಣ್ಣು ಹಂಪಲುಗಳ ರಾಶಿಯೊಂದನ್ನು ನೀವು ಅಲ್ಲಿ ಹೋದಾಗ ಕಾಣಬಹುದು. ಅದು ಅಲ್ಲಿನ ಅಪ್ರತಿಮ, ಅಸಾಧಾರಣ ವ್ಯಕ್ತಿಯೊಬ್ಬರಿಗೆಂದು ಜನರು ತರುವ ಪ್ರೇಮಾದರಗಳ ಕಾಣಿಕೆ. ಅವರೇ ಶ್ರೀ ನಿತ್ಯಾನಂದ ಸ್ವಾಮಿಯವರು. ಬಾಳು, ಬದುಕುಗಳೆಲ್ಲ ನೀರಸವೆಂದು ಅವರು ತಮ್ಮದೇ ಆದ ಹೊಸ ಸಿದ್ಧಿಗೆಂದು ಹಲವಾರು ವರ್ಷಗಳಿಂದ ಇಲ್ಲಿ ನೆಲೆನಿಂತಿರುತ್ತಾರೆ. ಅಲ್ಲಾಗಲೀ, ಅವರಲ್ಲಾಗಲೀ ಏನೂ ಆಡಂಬರವಿಲ್ಲ. ದಾಂಭಿಕರಿಗೆ ಅಲ್ಲಿ ಪ್ರವೇಶವಿಲ್ಲ. ಬರಿಯ ಹಾಸುಗಂಬಳಿಯೊಂದನ್ನು ಸದಾಕಾಲ ಮೈಮೇಲೆ ಸುತ್ತಿಕೊಂಡಿದ್ದ ಈ ಅರೆಬತ್ತಲೆ ಸ್ವಾಮೀಜಿಯವರ ದರ್ಶನವೆಂ

—೧೧ನೆಯ ಪುಟಕ್ಕೆ

ಲೇಖಕರು ಮತ್ತು ಚಿತ್ರಗ್ರಾಹಕರು:
ಶ್ರೀ ಕೆ. ಗೋಪಾಲಕೃಷ್ಣ ಹೆಗಡೆ, ಮುಂಬಯಿ



ವಜ್ರೇಶ್ವರಿಯ ಶಿವಾಲಯ— ಅದರ ಮುಂದಿನ ಕುಂಡ (ಬಲಕ್ಕೆ) ಸ್ನಾನಾರ್ಥಿಗಳಿಂದ ತುಂಬಿದೆ

ಕುಡುಕತನಕ್ಕೊಂದು ರಾಮಬಾಣ!

ಕುಡಿಯುವ ಚಟವನ್ನು ಬಿಟ್ಟುಕೊಡಲಾರವೆ ಕೊಳಲುವವರು ಅನೇಕರಿದ್ದಾರೆ. ಕುಡುಕತನ ಕೆಡುಕೆಂದು ಅವರಿಗೆ ಗೊತ್ತಿರುತ್ತದೆ. ಆದರೆ ಆ ಹೊತ್ತು ಬಂದಾಗ ಅವರ ಬುದ್ಧಿ ಸ್ಥಿಮಿತದಲ್ಲಿ ಉಳಿಯುವದಿಲ್ಲ. ಗಡಂಗಿನ ಸೆಳೆತ ದುರ್ನಿವಾರವಾಗುತ್ತದೆ. ಅಂಥವರಿಗೆ ಕೋಪೆನ್‌ಹೇಗನ (ಡೆನ್‌ಮಾರ್ಕ) ಡಾಕ್ಟರರೊಬ್ಬರ ಹೊಸ ಶೋಧ ಬಹಳ ಸಹಾಯ ಮಾಡಬಹುದು.

ಅವರ ಹೆಸರು ಡಾ. ಎರಿಕ್ ಜಾಕೋಬ್ಸನ್. ಯಾವುದಾದರೊಂದು ಹೊಸ ಔಷಧವನ್ನು ತಮ್ಮ ರೋಗಿಗಳ ಮೇಲೆ ಪ್ರಯೋಗಿಸುವ ಮೊದಲು ಸ್ವಂತದ ಮೇಲೆ ಅದನ್ನು ಉಪಯೋಗಿಸಿ ನೋಡುವದು ಅವರ ರೂಢಿ. ಒಂದು ರಾತ್ರಿ ಅವರು ಒಂದು ಭೋಜನಕೂಟಕ್ಕೆ ಹೊರಡುವ ಮೊದಲು ಟೆಟ್ರೇಥಿಲ್-ಥ್ಯುರಮ್-ಡೈಸಲ್ಫೈಡ್ (Tetraethyl-thiuram-disulfide) ಎಂಬ ಔಷಧದ ಎರಡು ಗುಳಿಗೆಗಳನ್ನು ನುಂಗಿದರು. ಅದು ಹೊಟ್ಟೆ ಹುಳ (ಜಂತು)ಕ್ಕೆ ಉತ್ತಮ ಔಷಧವೆಂದು ಪ್ರತೀತಿ. ಆದರೆ ಭೋಜನ ಸಮಾರಂಭಕ್ಕೆ ಹೋಗಿ ಡಾಕ್ಟರ ಸಾಹೇಬರು ಅನುಭವಿಸಿದ್ದೇನು! ಬೀರಿನ ಕಪ್ಪನ್ನು ಬಾಯಿಯ ಹತ್ತಿರ ಒಯ್ದರೆ ಸಾಕು, ಯಾಕೋ ಏನೊ, ಓಕರಿಕೆ ಬರುತಿತ್ತು. ಅದರ ವಾಸನೆ ಕೇಳಿದರೆ ಮುಖ ಕೆಂಪೇರಿ, ಎದೆಗುಂಡಿಗೆ ಧಕ್‌ಧಕ್ಕೆಂದು ಹಾರತೊಡಗುತಿತ್ತು; ಉಸಿರಾಡಿಸುವದು ಕೂಡ ಕಠಿನ ಹೋಗುತಿತ್ತು.

ಹಾ! ಕುಡಿಯುವ ಚಟ ಹತ್ತಿದ ರೋಗಿಗಳಿಗೆ ಇದೊಂದಿತ್ತು ಉಪಾಯ! ಆ ಚಟದಿಂದ ಮುಕ್ತರಾಗಬಯಸಿದ ೫೦೦ ಜನ ರೋಗಿಗಳಿಗೆ ಆ ಔಷಧವನ್ನು ಡಾ. ಜಾಕೋಬ್ಸನ್ನರು ಕಳೆದ ವರ್ಷ ಕೊಟ್ಟಿದ್ದರು. ಈ ವರ್ಷ ಅವರಲ್ಲಿ ೪೫೦ ಜನರಿಗೆ ಇನ್ನೂ ಮದ್ಯ ಕಂಡರೆ ಓಕರಿಕೆ ಬರುತಿತ್ತು. ಅವರಿಗೆ ಡಾಕ್ಟರರು ಕೊಟ್ಟಿದ್ದುದು ಕೇವಲ ಒಂದೇ "ಡೋಜು" ಔಷಧ. ಡಾಕ್ಟರರು ಅದಕ್ಕೆ "ಅಂಟಾಬಸ್" ಅಂದರೆ ದುರಭ್ಯಾಸನಿವಾರಕ ಎಂದು ಹೆಸರಿಟ್ಟಿದ್ದಾರೆ.

ಈ ಸುದ್ದಿ ಅಮೇರಿಕೆಯ "ಟೈಮ್" ಪತ್ರಿಕೆಯಲ್ಲಿ ಪ್ರಕಟವಾದ ನಂತರ ನಡೆದ ಸಂಗತಿಗಳು ಸ್ವಾರಸ್ಯವೂ ಉದ್ಬೋಧಕವೂ ಆಗಿವೆ. ಅವು ಈ ಚಟದಿಂದ ನಿವೃತ್ತಿಹೊಂದ ಬಯಸುವ ಲಕ್ಷಾಂತರ ಜನರಿರುವರೆಂದು ತೋರಿಸಿಕೊಟ್ಟವು. ಏಕೆಂದರೆ ಅದು ಪ್ರಕಟವಾದ ಒಂದೇ ವಾರದೊಳಗೆ ಡಾಕ್ಟರ ಜಾಕೋಬ್ಸನ್ನರಿಗೆ ಔಷಧವನ್ನು ಕಳಿಸಲು ಲಕ್ಷಾಂತರ ಪತ್ರಗಳು ಬಂದವಂತೆ. ಕುಡುಕರು, ಅವರ ಹೆಂಡತಿ ಮಕ್ಕಳು, ಸಂಬಂಧಿಕರು ಬರೆದ ಪತ್ರಗಳಾಗಿದ್ದವು ಅವು. ಅವುಗಳಿಗೆ ಉತ್ತರ ಬರೆಬರೆದು ಡಾಕ್ಟರರ ಕಾರ್ಯದರ್ಶಿಗಳಿಗೆ ಕೈನೋಯಿಸತೊಡಗಿತು.

ಅವರವರ ಡಾಕ್ಟರರ ಮೂಲಕವೇ ಈ ಔಷಧವನ್ನು ಪಡೆಯಬೇಕು ಹೊರತು ಪ್ರಕರಣದ ತಿಳಿವಳಿಕೆಯಿಲ್ಲದೆ ಔಷಧ ಕೊಡುವದು ಸಮಂಜಸವಲ್ಲೆಂದು ಡಾ. ಜಾಕೋಬ್ಸನ್ನರು ಪತ್ರಲೇಖಕರಿಗೆ ತಿಳಿಸಿದರು.

ಅಮೇರಿಕೆಯ ನ್ಯಾಯ !
ಮೋಟಾರು ಇಟ್ಟುಕೊಂಡದ್ದಕ್ಕೆ ನೀಗ್ರೋನ ಕೊಲೆ !

ರಾಬರ್ಟ ಮಿಲಾರ್ಡನು ಯಶಸ್ವಿ ನಿಗ್ರೋ ನಾಗರಿಕ. ಅವನಿದ್ದ ಅಮೇರಿಕೆಯ ಜಾರ್ಜಿಯಾ ಪ್ರಾಂತದಲ್ಲಿ ಅದೇ ಅಪರಾಧವೆಂದು ಪರಿಗಣಿತವಾಗುತ್ತದೆ. ಅವನು ಸಂಚಾರಿ ಏಜಂಟ. ತುಂಬ ಹಣ ಸಂಪಾದಿಸಿ ಅಪ್-ಟು-ಡೇಟ ಮಾದರಿಯ ಸೆಡಾನ್ ಕಾರಿನಲ್ಲಿ ಹೆಂಡತಿ ಮಕ್ಕಳನ್ನು ಕೂಡಿಸಿಕೊಂಡು ಓಡಾಡುತಿದ್ದ. ಈ "ಕರಿ ಮುಖಳನ ಸೊಕ್ಕು" ನೋಡಿ ಬಿಳಿಯರ ಕಣ್ಣು ಕೆಂಪೇರುತಿತ್ತು. ಆದುದರಿಂದ ಒಂದು ರಾತ್ರಿ ಅವನ ಮೋಟಾರನ್ನು ತರುಬಿ, ಬಿಳಿ ಮುಖವಾಡ ಹಾಕಿಕೊಂಡಿದ್ದ ಇಬ್ಬರು ಮಿಲಾರ್ಡನನ್ನು ಗುಂಡುಹಾಕಿ ಕೊಂದರು.

ಕೆಲದಿನ ಈ ಸುದ್ದಿಯೇ ಪತ್ರಿಕೆಗಳಲ್ಲಿ ಬರಲಿಲ್ಲ. ಜಾರ್ಜಿಯಾ ಎಂದರೆ ಬಿಳಿಯರ ದರ್ಪದ ಪ್ರಾಂತ. ಕೆಲವೇ ವಾರಗಳ ಹಿಂದೆ ಅಲ್ಲೆ ಇನ್ನೊಂದು ಹಳ್ಳಿಯಲ್ಲಿ ಪ್ರಾಥಮಿಕ ಚುನಾವಣೆಗಳಲ್ಲಿ ತನ್ನ ಮತಾಧಿಕಾರವನ್ನು ಉಪಯೋಗಿಸಿದ ತಪ್ಪಿಗಾಗಿ ಬಿಳಿಯರು ಇನ್ನೊಬ್ಬ ನಿಗ್ರೋವನ್ನು ಕೊಲೆ ಮಾಡಿದ್ದರು. ಅದ್ದರಿಂದ ಇದೇನು ಮಹಾ? ಮತ್ತೊಂದು ನಿಗ್ರೋ ಹುಳಕ್ಕೆ ಶಾಸ್ತಿಯಾಯಿತು ಎಂದು ಅಲ್ಲಿಯ ಬಿಳಿಯರ ಪತ್ರಿಕೆಗಳು ಸುದ್ದಿಯನ್ನೆ ಪ್ರಕಟಿಸಲಿಲ್ಲ.

ಆದರೆ ಉದಾರಮತವಾದಿಯಾದ ಇನ್ನೊಂದು ದೂರದ ಪತ್ರಿಕೆ ಸುದ್ದಿಯನ್ನು ಹೇಗೋ ಅರಿತು ಬೆಳಕಿಗೆ ತಂದಿತು. ತುಂಬ ಗೊಂದಲವೂ ಎದ್ದಿತು. ಪೋಲೀಸರಿಗೆ ಇನ್ನು ಸುಮ್ಮನಿರುವದಾಗಲಿಲ್ಲ.

ಅದ್ದರಿಂದ ಆ ಬಿಳಿ ಪೋಲೀಸರು ಸತ್ತವನ ಹೆಂಡತಿಯನ್ನೆ ಬಂಧಿಸಿದರು. ಅವಳೇ ಕೊಲೆಗಡಕಳೆಂದು. ಆದರೆ ಅವಳ ಕೂಗಾಟ ಕಿರಿಚಾಟಗಳು ಹೆಚ್ಚಿದ್ದರಿಂದ ಬಿಟ್ಟುಬಿಡಬೇಕಾಯಿತು. ಯಾರೋ ಒಬ್ಬ ಬಿಳಿಯನು ಅವಳಿಗೆ ಸಹಾಯ ಮಾಡಿದ. ಇಬ್ಬರು ಬಿಳಿ ರೈತರ ಮೇಲೆ ಕೊಲೆಯನ್ನು ಆರೋಪಿಸಿ ವಿಚಾರಣೆಗೆ ಗುರಿಪಡಿಸಲಾಯಿತು.

ಆದರೆ ವಿಚಾರಣೆಯೂ ಒಂದು ತಮಾಷೆಯೆ! ಪಂಚರ ವಿಚಾರಣೆ, ಆ ಪಂಚರು ಹೇಳಿಕೇಳಿ ಬಿಳಿಯರು. ಮಿಲಾರ್ಡನ ಹೆಂಡತಿ ಅರಚುತ್ತ ಅಳುತ್ತ ಅಪಾದಿತರ ವಿರುದ್ಧ ಸಾಕ್ಷಿ ಹೇಳಿದಾಗ ನೆರೆದ ಬಿಳಿ ಪ್ರೇಕ್ಷಕರು ಅಟ್ಟಹಾಸ ಮಾಡಿ ನಕ್ಕರು. ಆ ಮೇಲೆ ಪಂಚರಲ್ಲಿಯೆ ಇಬ್ಬರು ಇಳಿದು ಸಾಕ್ಷಿ ಪಂಜರದಲ್ಲಿ ಪ್ರವೇಶಿಸಿ, ಈ ಹೆಂಗಸು ದುಷ್ಟೆ, ಅವಳ ಮಾತು ನಂಬತಕ್ಕದ್ದಲ್ಲ ಎಂದು ಸಾಕ್ಷಿ ನುಡಿದರು. ಅವರೇ ಸಾಕ್ಷಿದಾರರು, ಅವರೇ ನ್ಯಾಯಮೂರ್ತಿಗಳು! ಆಮೇಲೆ ಕೋರ್ಟು ಎದ್ದಿತು. ಕೆಲ ನಿಮಿಷಗಳ ನಂತರ ನ್ಯಾಯಮೂರ್ತಿಗಳು ಬಂದು ಆರೋಪಿಗಳು ನಿರಪರಾಧಿಗಳೆಂದು ತೀರ್ಪು ಕೊಟ್ಟರು.

ಜಗತ್ತನ್ನು ಕಮ್ಯುನಿಸ್ಟರ ಕ್ರೌರ್ಯದಿಂದ ವಿಮೋಚನಗೊಳಿಸಹೊರಟ ಅಮೇರಿಕೆಯಲ್ಲಿ ಇದು ಅಲ್ಪಸಂಖ್ಯಾಕರಿಗೆ ದೊರೆವ ನ್ಯಾಯ!

ಶಾಸನಸಭೆಗಾಗಿ ಪ್ರಾರ್ಥನೆಗಳು

ಅಮೇರಿಕೆ ಕ್ರೈಸ್ತ ರಾಷ್ಟ್ರ. ಕ್ರೈಸ್ತರಲ್ಲಿ ಪ್ರಾರ್ಥನೆಗೆ ಮಹತ್ವ ಹೆಚ್ಚು. ನಮ್ಮ ಪುರಾಣಿಕರು "ಸರ್ವ ಪಾಪಾದ್ವಿಮುಚ್ಯತೇ" ಎಂದಂತೆ ಕ್ರೈಸ್ತರಲ್ಲಿಯೂ ಪ್ರಾರ್ಥನೆಯಿಂದ ಎಲ್ಲ ಪಾಪಗಳೂ ಸುಟ್ಟುಹೋಗುವವೆಂಬ ನಂಬಿಕೆಯುಂಟು. ಹೀಗೆ ಪ್ರಾರ್ಥನೆಯ ಮಹಿಮೆ ಅಪಾರವಾಗಿರುವದರಿಂದ ಅಮೇರಿಕೆಯ ಸಿನೇಟ ಸಭೆಗೂ ಒಬ್ಬ ಪುರೋಹಿತನಿರುವದು ರೂಢಿ. ರೆ. ಪೀಟರ ಮಾರ್ಶಲ್ಲರೆಂಬ ಸಿನೇಟ ಪುರೋಹಿತರು ಮೊನ್ನೆ ಜನೆವರಿ ಅಂತ್ಯದಲ್ಲಿ ಮರಣ ಹೊಂದಿದರು. ಅವರು ತಮ್ಮ ಪೌರೋಹಿತ್ಯದ ಅವಧಿಯಲ್ಲಿ ಸಿನೇಟನಲ್ಲಿ ಮಾಡಿದ ದೇವ ಪ್ರಾರ್ಥನೆಗಳು ಅಮೇರಿಕೆಯ ಮಾತ್ರವಲ್ಲ ಸಕಲ ದೇಶಗಳ ಶಾಸನಸಭೆಗಳಿಗೂ ಆದರ್ಶವಾಗುವಂತಿವೆ. ಕೆಲವು ದೃಷ್ಟಾಂತಗಳು:

"ಓ ನಮ್ಮ ತಂದೆಯಾದ ಪರಮಾತ್ಮನೆ. ಘಟಿಸಲಿರುವ ಸಂಗತಿಗಳನ್ನು ಎದುರು ನೋಡುತ್ತ ಕುಳಿತಿರುವವರಲ್ಲಿಯೆ ನಾವು ತೃಪ್ತರಾಗದೆ ನ್ಯಾಯವಾದ ಸಂಗತಿಗಳೇ ಘಟಿಸುವಂತೆ ಮಾಡಿತೀರುವೆವೆಂಬ ದೃಢ ನಿರ್ಧಾರವನ್ನು ನಮಗೆ ದಯಪಾಲಿಸು. ಸಿಕ್ಕಿಸಿಕ್ಕಿದುದಕ್ಕೆಲ್ಲ ನಾವು ಮನಸೋಲದಂತೆ ಯಾವುದೊಂದು ಧ್ಯೇಯದಲ್ಲಿ ಮನಸು ನಡುವಂತೆ ಅನುಗ್ರಹಿಸು... ತಥಾಸ್ತು."

"ನಮಗೆ ಏನು ಹೇಳಬೇಕೆಂದು ಗೊತ್ತಿಲ್ಲದಿದ್ದಾಗ ಮೌನವಾಗಿರುವಂತೆ ಪ್ರೇರಿಸು." ಯುದ ಸಂಗತಿಗಳ ಮೇಲೆ ಗೊಳ್ಳುಗೊಳ್ಳು ಮಾತಾಡುವ ಸದಸ್ಯರಿಗೆ ಎಂಥ ಉಪದೇಶ!

"ಬಡ ಅಲ್ಪಸಂಖ್ಯಾಕರನ್ನು ಮರೆಯದೆ ಅವರಿಗೆ ನ್ಯಾಯ ದೊರೆಯುವಂತೆ ಮಾಡಲು ನಮ್ಮನ್ನು ಪ್ರೇರಿಸು." ಬಹುಸಂಖ್ಯರ ರಾಜ್ಯಭಾರಕ್ಕೆ ಇದಕ್ಕಿಂತ ದೊಡ್ಡ ಬೋಧನೆ ಬೇಕೆ?

ಅವರು ಸಾಯುವ ಮುಂಚೆ ಸಿನೇಟ ಸಭೆಗಾಗಿ ಬರೆದ ಕೊನೆಯ ಪ್ರಾರ್ಥನೆ ಇದು: "ಮನದಟ್ಟು ಮಾಡಲು ನಮಗೆ ಸಾಧ್ಯವಾಗದಲ್ಲಿ ಮನವೊಲಿಸುವ ಪ್ರಯತ್ನ ಮಾಡುವಂತೆ ನಮ್ಮನ್ನು ಪ್ರೇರಿಸು. ಏಕೆಂದರೆ ಯೋಜಿಸಿದ ಮಹತ್ಕಾರ್ಯಗಳಿಗಿಂತಲೂ ಸಾಧಿಸಿದ ಅಲ್ಪ ಕಾರ್ಯವೇ ಮಿಗಿಲು."

ಪ್ರಜಾತಂತ್ರ ಲೀಲೆ

ಅಮೇರಿಕೆಯ ಮೆಸಾಚುಸೆಟ್ಸ ಸಂಸ್ಥಾನದ ಸೆನೇಟಿಗೆ ಇಪ್ಪತ್ತು ಡೆಮಾಕ್ರೆಟರು ೨೦ ರಿಪಬ್ಲಿಕನ್ನರು ಆರಿಸಿ ಬಂದಿದ್ದರು. ಅಧ್ಯಕ್ಷನನ್ನು ಆರಿಸಲು ೧೯ ಬಾರಿ ಮತ ತೆಗೆದುಕೊಂಡರೂ ನಿರ್ಣಯಾತ್ಮಕ ಪರಿಣಾಮ ಬರಲಿಲ್ಲ. ಕೊನೆಗೆ ೧೯೪೯ ರ ಬಗ್ಗೆ ಒಬ್ಬ ಡೆಮಾಕ್ರೆಟನನ್ನೂ ೧೯೫೦ ರ ಬಗ್ಗೆ ಒಬ್ಬ ರಿಪಬ್ಲಿಕನನ್ನೂ ಆರಿಸಿ ಅವರು ಸಂಧಿ ಮಾಡಿಕೊಂಡರು!



ಮನೆಕಟ್ಟುವ ಸಹಕಾರಿ ಸಂಘಗಳಿಗೆ ಧನಸಹಾಯ

ಕಳೆದ ಮೇ ತಿಂಗಳಲ್ಲಿ ಸಾರಿದ ಯೋಜನೆಯ ಮೇರೆಗೆ, ಮುಂಬಯಿ ಮುಂಬಯಿ ಉಪನಗರ ಜಿಲ್ಹೆ ಅಹಮ್ಮದಾಬಾದ, ಪುಣೆ, ಸೊಲ್ಲಾಪುರ ಮತ್ತು ಹುಬ್ಬಳ್ಳಿಯಲ್ಲಿ ಎರಡು ಕೋಣೆ ಮತ್ತು ಅಡಿಗೆ ಮನೆಯುಳ್ಳ ಮನೆಗಳನ್ನು ಹಾಗು ಇದಕ್ಕಿಂತ ಮೇಲ್ಮಾದರಿಯ ಮನೆಗಳನ್ನು ಕಟ್ಟುವ ಸರಕಾರಿ ಸಂಘಗಳು ಕೆಲವೊಂದು ಕರಾರುಗಳ ಮೇಲೆ ಸರಕಾರದಿಂದ ಸಾಲ ಪಡೆಯಲು ಪಾತ್ರವಿದ್ದವು. ಸರಕಾರವು ಮನೆಕಟ್ಟುವ ಸಹಕಾರಿ ಸಂಘಗಳಿಗೆ ಮುಂಬಯಿ ಪ್ರಾಂತಿಕ ಸಹಕಾರಿ ಹೊಲ ಒತ್ತಿ (ಲ್ಯಾಂಡ ಮೊರ್ಗೇಜ) ಬ್ಯಾಂಕ. ಲಿ. ಮುಖಾಂತರ ಧನಸಹಾಯ ಒದಗಿಸುವ ಯೋಜನೆಯನ್ನು ಮಂಜೂರು ಮಾಡಿದ್ದು ಈ ಉದ್ದೇಶಕ್ಕಾಗಿಯೆ ಹೊಲ ಒತ್ತಿ ಬ್ಯಾಂಕಿಗೆ ಸಹಾಯಧನ ಕೊಡಲಾಗುವದು. ನಿರ್ದಿಷ್ಟ ಮಾದರಿಯ [ಅಡಿಗೆ ಮನೆ, ನಡುಹಾದಿ ಪಡಸಾಲೆ, ಸ್ನಾನದ ಮನೆ, ಶೌಚಕೂಪ ಇತ್ಯಾದಿ ಮತ್ತು ಎರಡು ಕೋಣೆಗಳ ಹಾಗು ಅಡಿಗೆ ಮನೆ ನೆಲದ ಒಟ್ಟು ಕ್ಷೇತ್ರವು ೪೫೦ ಚೌ. ಫೂಗಳಿಗಿಂತ ಹೆಚ್ಚಿರಕೂಡದು] ಇಲ್ಲವೆ ಅದಕ್ಕೂ ಕೆಳಮಟ್ಟದ ಮನೆಗಳನ್ನು ಕಟ್ಟುವ ಹಾಗು ಕಟ್ಟುತ್ತಿರುವ ಸಂಘಗಳಿಗೆ ಮಾತ್ರ ಸರಕಾರದ ಮನೆಗಳ ಕಾರ್ಯಕ್ರಮದ ಅಂಗವಾಗಿ ಧನಸಹಾಯ ಕೊಡಲು ಈಗ ನಿರ್ಣಯಿಸಲಾಗಿದೆ. ಮಾದರಿಯ ಮನೆಗಳಿಗಿಂತ ಮೇಲ್ತರಗತಿಯ ಮನೆಗಳ ಸಲುವಾಗಿ ಧನ ಸಹಾಯ ಬೇಡುವ ಇಂಥ ಸಂಘಗಳು ಮುಂಬಯಿ ಪ್ರಾಂತಿಕ ಸಹಕಾರಿ ಹೊಲ ಒತ್ತಿ ಬ್ಯಾಂಕಿಗೆ ಅರ್ಜಿಮಾಡಿಕೊಳ್ಳಬಹುದು.

ಮನೆ ಒಡೆಯರು ಪಾತ್ರರಿಲ್ಲ

ಮನೆಕಟ್ಟುವ ಕಾರ್ಯಕ್ರಮಗಳ ಮೇರೆಗೆ ಸಹಕಾರಿ ಸಂಘಗಳಿಗೆ ಕೊಡಮಾಡಿದ ಈ ಸಹಾಯವನ್ನು ಅವುಗಳ ಸದಸ್ಯರಿಗೆ ಕೊಡಲಾಗುವದು. ಆದರೆ ಅಂಥ ಸದಸ್ಯರಿಗೆ ಸಂಘಗಳು ಯಾವ ನಗರ ಅಥವಾ ಜಿಲ್ಹೆಯಲ್ಲಿ ತಮ್ಮ ಮನೆಗಳನ್ನು ಕಟ್ಟುವವೋ ಆ ಸ್ಥಳದಲ್ಲಿ ಈಗಾಗಲೆ ವಾಸಿಸಲು ಮನೆ ಮತ್ತು ಅಥವಾ ಮನೆ ಕಟ್ಟುವ ಸ್ಥಳ ಇರಕೂಡದೆಂದು ಸರಕಾರವು ನಿಶ್ಚಯಿಸಿದೆ. ಅದ್ದರಿಂದ ಸಂಘಗಳು ಸಂಬಂಧಿಸಿದ ಕಲೆಕ್ಟರರಿಗೆ ಇಲ್ಲವೆ ಸಹಕಾರಿ ಸಂಘಗಳ ಅಸಿಸ್ಟೆಂಟ ರಜಿಸ್ಟ್ರಾರರ ಕಡೆಗೆ ಸ್ಥಳ ಇಲ್ಲವೆ ಸಾಲಕ್ಕಾಗಿ ಅರ್ಜಿಮಾಡಿಕೊಳ್ಳುವಾಗ ಅದರಲ್ಲಿ ಇಂಥ ಸದಸ್ಯರ ಬಗ್ಗೆ ಸ್ಪಷ್ಟವಾಗಿ ತಿಳಿಸಬೇಕೆಂದು ಸೂಚಿಸಲಾಗಿದೆ.

ಶೀಖರ ಮುಂದಾಳುಗಳಾದ ಮಾಸ್ಟರ ತಾರಾಸಿಂಗರು ಜಾತೀಯ ಭಾವನೆಯನ್ನು ಪ್ರಚೋದಿಸುವ ಪ್ರಯತ್ನಗಳನ್ನು ನಡೆಸಿದ್ದಾಗಿ ಅವರನ್ನು ಸೆರೆ ಹಿಡಿಯಲಾಗಿದೆ. ಸರಕಾರದವರು ಪ್ರಕಟನೆಯನ್ನು ಹೊರಡಿಸಿ ಈ ಬಗ್ಗೆ ಸ್ಪಷ್ಟೀಕರಿಸಿದ್ದಾರೆ.



ಫೆಬ್ರುವರಿ ೧೩ ದಿನ ಪಂ. ಜವಾಹರಲಾಲ ನೆಹರು ಅವರು ಗೋಧ್ರಾದಲ್ಲಿ ಸರದಾರ ವಲ್ಲಭಭಾಯಿ ಪಟೇಲರ ಪುತ್ಥಳಿಯ ಅನಾವರಣ ಮಾಡುತಿರುವರು

ಹುಬ್ಬಳ್ಳಿಯಲ್ಲಿ ಒಕ್ಕಲತನ, ಆರೋಗ್ಯ, ಔದ್ಯೋಗಿಕ ಪ್ರದರ್ಶನ

ಕೆಲ ವೈಶಿಷ್ಟ್ಯಗಳು

(ನಮ್ಮ ವಿಶೇಷ ಪ್ರತಿನಿಧಿಯಿಂದ)

ಪ್ರಯೋಗಗಳ ಮತ್ತು ಸಂಶೋಧನಗಳ ಬಲದಿಂದ ಭೂಮಾತೆಯ ಔದಾರ್ಯವನ್ನು ಹೆಚ್ಚಿಸಿ ಸಮೃದ್ಧಿಯನ್ನು ಪಡೆಯುತಿರುವ ಈ ಯುಗಗಳಲ್ಲಿ ಪ್ರದರ್ಶನಗಳಿಗೆ ತುಂಬಾ ಮಹತ್ವ ಬಂದಿದೆ. ಸಾಮಾನ್ಯವಾಗಿ ಎಲ್ಲ ಬಗೆಯ ಪುಸ್ತಕ ಪತ್ರಿಕೆಗಳು ಲಭ್ಯವಾಗದ ಹಳ್ಳಿಗರಿಗಂತೂ ಇಂಥ ಪ್ರದರ್ಶನಗಳಿಂದ ಸಂಶೋಧನಗಳ ಪರಿಣಾಮಗಳ ಅದ್ಯಾವಧಿ ಜ್ಞಾನವನ್ನು ದೊರಕಿಸಿಕೊಳ್ಳಲು ಬಹಳ ಸಹಾಯವಾಗುತ್ತದೆ. ಈ ದೃಷ್ಟಿಯಿಂದ ಹುಬ್ಬಳ್ಳಿ ನಗರದಲ್ಲಿ ಸದ್ಯಕ್ಕೆ ನಡೆಯುತಿರುವ ನಾಲ್ಕನೆ ಕರ್ನಾಟಕ ಔದ್ಯೋಗಿಕ, ಆರೋಗ್ಯ ಮತ್ತು ಒಕ್ಕಲತನ ಪ್ರದರ್ಶನ ಸರಿಯಾದ ಉಪಕ್ರಮವೆಂದು ಹೇಳಲಡ್ಡಿಯಿಲ್ಲ. ಇದನ್ನು ಯೋಜಿಸಿದ ಧಾರವಾಡ ಜಿಲ್ಲಾ ಲೋಕಲ್ ಬೋರ್ಡಿನವರು ಅಭಿನಂದನಾರ್ಹರಾಗಿದ್ದಾರೆ.

ಗುಳಕವ್ವನ ಕೆರೆಯಲ್ಲಿ ಭವ್ಯವಾದ ಮಂಟಪದಲ್ಲಿ ನೂರಾರು ಸ್ಟಾಲುಗಳನ್ನೊಳಗೊಂಡ ೧೦ ದಿನಗಳ ವರೆಗೆ ನಡೆಯುವ ಈ ಪ್ರದರ್ಶನವನ್ನು ಶನಿವಾರ ತಾ. ೧೯ ದಿನ ಡಾ. ನಾ. ಸು. ಹರ್ಡೀಕರರು ಉದ್ಘಾಟಿಸಿದರು. ಸ್ವಾಗತಾಧ್ಯಕ್ಷರಾದ (ಲೋಕಲ್ ಬೋರ್ಡ ಅಧ್ಯಕ್ಷ) ಶ್ರೀ ತಂಬಾಕದರು ಕರ್ನಾಟಕದಲ್ಲಿ ಈ ಬಗೆಯ ಪ್ರದರ್ಶನಗಳ ಹಿನ್ನೆಲೆಯನ್ನು ವಿವರಿಸುತ್ತ, ಹುಬ್ಬಳ್ಳಿಯಲ್ಲಿ ಇಂಥದು ಜರಗುವದು ಎರಡನೆ ಸಲವೆಂದರು. (ಮೊದಲನೆಯದು ೧೯೪೬ ರಲ್ಲಿ). ಜಿಲ್ಲಾ ಗ್ರಾಮೋದ್ಧಾರಮಂಡಲ ಕಳೆದ ಮೂರು ವರ್ಷಗಳಿಂದ ಒಕ್ಕಲತನ ಪ್ರದರ್ಶನ, ಸಹಕಾರಿ ಸಮ್ಮೇಲನಗಳ ಸ್ಪೇರ್ಪಡಿಸುತ್ತ ಬಂದಿದೆ. ಈ ಸಲ ತನ್ನ ಪ್ರದರ್ಶನ ಸಮ್ಮೇಲನಗಳನ್ನು ಈ ಪ್ರದರ್ಶನದೊಡನೆ ಅಳವಡಿಸಿದೆ. ಅಲ್ಲದೆ ಕರ್ನಾಟಕ ವಣಿಕ್ಸಂಘದವರು ಕರೆದ ಔದ್ಯೋಗಿಕ ಪರಿಷತ್ತೂ ಇದೇ ಮಂಟಪದಲ್ಲಿ (ಬುಧವಾರ ತಾ. ೨೩) ಜರಗಿತು. ಅಲ್ಲದೆ ಮುಂಬಯಿ ಪಾನಪ್ರತಿಬಂಧ ಶಾಖೆಯವರು ತಮ್ಮ ಪ್ರಚಾರ ಕಾರ್ಯವನ್ನೂ ಇಲ್ಲಿ ನಡೆಸುತಿದ್ದಾರೆ. ಬ್ರಿಟಿಶ ಮತ್ತು ಅಮೇರಿಕನ್ ಪ್ರಕಟನ ಶಾಖೆಯವರು ಕಳಿಸಿದ ವ್ಯಾಪಕವಾದ ಚಲಚ್ಚಿತ್ರಗಳ ಪ್ರದರ್ಶನವೂ ಪ್ರದರ್ಶನಕ್ಕೆ ರಂಗು ಕೊಟ್ಟಿದೆ.

ಧಾರವಾಡ ಜಿಲ್ಲಾ ಬೋರ್ಡ ಹಾಗು ಗ್ರಾಮೋದ್ಧಾರ ಮಂಡಲಗಳ ಸಂಯುಕ್ತ ಪ್ರಯತ್ನವಾದ ಈ ಪ್ರದರ್ಶನ ಸಂಯುಕ್ತಾಧ್ಯಕ್ಷರಾದ ಶ್ರೀ ಎಂ. ಆರ್. ಪಾಟೀಲರೂ ಶ್ರೀ ಗುಡ್ಡೆಪ್ಪ ಹಳ್ಳಿಕೇರಿಯವರೂ ಪ್ರದರ್ಶನಗಳ ಅವಶ್ಯಕತೆಯನ್ನು ವಿವರಿಸಿದರು. ಹಳ್ಳಿಗರ ಪ್ರಯೋಜನಕ್ಕಾಗಿ ಒಕ್ಕಲತನದ ಪ್ರದರ್ಶನಗಳನ್ನು ಪ್ರತಿ ಹತ್ತು ಹಳ್ಳಿಗಳಿಗೊಂದರಂತೆ ಏರ್ಪಡಿಸುವ ವಿಚಾರ ಸರಕಾರಕ್ಕಿದೆಯೆಂದು ತಿಳಿದುಬಂತು.

ಉದ್ಘಾಟಕರಾದ ಡಾ. ಹರ್ಡೀಕರರು, ಜನಜಾಗೃತಿಗೆ ಇಂಥ ಪ್ರದರ್ಶನಗಳು ಅವಶ್ಯಕವೆಂದು ಹೇಳಿದರು. ಈ ದೇಶದಲ್ಲಿ ಈ ಬಗೆಯ ಪ್ರದರ್ಶನಗಳ ರೂಢಿ ಈ ಶತಮಾನದ ಪ್ರಾರಂಭದಲ್ಲಿ ಮೊದಲಾಗಿ ಗಾಂಧೀಜಿಯವರಿಂದ ವಿಶೇಷ ಪ್ರಚಾರಕ್ಕೆ ಬಂತು. ಮುಂದುವರಿಯುತ್ತ ಡಾ. ಹರ್ಡೀಕರರು ದೇಶದಲ್ಲಿ ಹಬ್ಬಿರುವ ಅನೈತಿಕ ಪ್ರವೃತ್ತಿ, ಸರಕಾರವನ್ನು ಸುಮ್ಮನೆ ಟೀಕಿಸುವ ಬುದ್ಧಿಗಳನ್ನು ಖಂಡಿಸಿ ಇಂಗ್ಲಂಡ್ ಮೊದಲಾದ ದೇಶಗಳಲ್ಲಿರುವಂತೆ ಇಲ್ಲಿಯೂ ಸರಕಾರಕ್ಕೆ ಜನತೆ ಸಹಕಾರ ನೀಡಬೇಕೆಂದು ಬೋಧಿಸಿದರು. ಈ ಪ್ರದರ್ಶನದಲ್ಲಿ ಕಂಡ ಪ್ರದರ್ಶಿತ ವಸ್ತುಗಳಿಂದ ಜ್ಞಾನಲಾಭ ಪಡೆದು ಜನರಲ್ಲಿ ಅದನ್ನು ಬಿತ್ತರಿಸುತ್ತ ಹೋದರೆ ಪ್ರದರ್ಶನ ಸಾರ್ಥಕವಾಗುವದು ಎಂದು ಹೇಳಿ ಅವರು ಪ್ರದರ್ಶನವನ್ನು ಉದ್ಘಾಟಿಸಿದರು.

ಪ್ರದರ್ಶನ

ಹೆಸರಿಗೆ ತಕ್ಕಂತೆ ಪ್ರದರ್ಶನದಲ್ಲಿ ಒಕ್ಕಲತನ, ಆರೋಗ್ಯ ಮತ್ತು ಔದ್ಯೋಗಿಕ ಇವೆಲ್ಲ ಜಾತಿಗೆ ಸೇರಿದ ವಸ್ತುಗಳೂ ಪ್ರದರ್ಶಿಸಲ್ಪಟ್ಟಿವೆ. ಮುಂಜಾನೆ ೮ ರಿಂದ ೧೨ ಮತ್ತು ಮಧ್ಯಾಹ್ನ ೪ ರಿಂದ ರಾತ್ರಿ ೧೦ ರ ವರೆಗೂ ತೆರೆದಿರುವದು. ಇದಕ್ಕೆ ಪ್ರವೇಶ ಧನ ಕೇವಲ ಎರಡಾಣೆ. ಹಳೆಗಾಲದ ದಾಕ್ಷಿಣಾತ್ಯ ಮಂದಿರಗಳಂತೆ ಸುತ್ತಲೂ ವರ್ತುಲಾಕಾರದ ಹಲವು ಆವಾರ, ಪೌಳಿಗಳು, ನಡುವೆ ಗರ್ಭಗುಡಿಯಂತೆ ಸಭಾ ಮಂಟಪ. ವಿದ್ಯುದ್ದೀಪಗಳಿವೆ. ಧ್ವನಿಯಂತ್ರ ಮೊದಲಾದವುಗಳ ವ್ಯವಸ್ಥೆಯೂ ಸರಕಾರದ ಪಾನನಿರೋಧ ಪ್ರಚಾರದ ಭಾಷಣ ಹಾಡುಗಳ ಕಲಕಲವೂ ಪ್ರದರ್ಶನವನ್ನು ಪ್ರಕ್ಷುಬ್ಧವಾಗಿಯೂ ಮಾಡಿಬಿಟ್ಟಿವೆ!

ಹೊರ ಪೌಳಿಯಲ್ಲಿ ಸುತ್ತಲೂ ನಿಮಗೆ ಸರಕಾರಿ ಒಕ್ಕಲತನದ ಮತ್ತು ಗ್ರಾಮೋದ್ಯೋಗದ ವಸ್ತುಗಳೂ ಪಠಗಳೂ ಪ್ರದರ್ಶಿಸಲ್ಪಟ್ಟದ್ದು ಕಾಣುವದು. ಕರ್ನಾಟಕದಲ್ಲಂತೂ ಅಪಕೀರ್ತಿಗೆ ಗುರಿಯಾಗಿ ಬರಗಾಲ ಸಮಿತಿಯವರಿಂದ ಟೀಕಿಸಲ್ಪಟ್ಟ ಕ್ಯಾಂಟೂರ ಅಥವಾ ದೊಂಕು ಒಡ್ಡುಗಳ ಒಂದು ಪ್ರತ್ಯಕ್ಷ ಮಾದರಿಯ ಮುಂದೆ "ಜಕ್ರದ ಅವಿಷ್ಕಾರದಷ್ಟೆ ಮಹತ್ವದ ಸಂಶೋಧ" ಎಂಬ ಅದೇ ಆ ಬರಗಾಲ ಸಮಿತಿಯ ಖಂಡನೆಗೊಳಗಾದ ಭಿತ್ತಿಪತ್ರವನ್ನು ನೋಡಿ ನಿಮ್ಮ ಪ್ರತಿನಿಧಿ ಆಶ್ಚರ್ಯಪಟ್ಟ. ಈ ಸ್ಟಾಲುಗಳಲ್ಲಿ ಪ್ರದರ್ಶಿಸಲ್ಪಟ್ಟ ಚಿತ್ರಯುಕ್ತ ಭಿತ್ತಿಪತ್ರಗಳಲ್ಲಿ ಹೆಚ್ಚಿನವುಗಳು ಇಂಗ್ಲಿಷ ಮರಾಠಿಗಳಲ್ಲಿದ್ದು ಕನ್ನಡದವು ವಿರಳವಾಗಿದ್ದುದೂ ಸ್ವಲ್ಪ ವಿಚಿತ್ರವೇ ಅನಿಸಿತು. ವಿವರಿಸಲು ನಿಯುಕ್ತರಾದ ಪ್ರಚಾರಕರೂ ಅಷ್ಟು ಸಮರ್ಥರಾಗಿದ್ದಿಲ್ಲ. ಮುಖ್ಯವಾಗಿ ಹಳ್ಳಿಗರಿಗೆ ಮುಖವೇ ಶಿಕ್ಷಣಮಾಧ್ಯಮವೆಂದು ಮರೆಯಬಾರದು. ಈ ಕೆಲವು ಮಾತುಗಳನ್ನು ಬಿಟ್ಟರೆ ಮತ್ತು ಪ್ರದರ್ಶಿತ ವಸ್ತುಗಳಲ್ಲಿ ಉತ್ತಮ ವಸ್ತುಗಳನ್ನು ಎದ್ದು ಕಾಣುವಂತೆ ಇಡಲು ತಪ್ಪಿದುದವನ್ನು ಮರೆತರೆ ಉಳಿದುದೆಲ್ಲ ಉದ್ಬೋಧಕವಾಗಿತ್ತು. ಬಯಲು ಪ್ರದೇಶದಲ್ಲಿ ಲಾಭಕರವಾಗಿ ಬೆಳೆಸಬಹುದಾದ ಮರಗಿಡಗಳು, ಉಸುಕಿನ ಪ್ರದೇಶದಲ್ಲಿ ಬಿದ್ದ ನೀರನ್ನು ಕೆರೆಯಲ್ಲಿ ಸಂಗ್ರಹಿಸಿ, ತೋಡಿದ ಬಾವಿಗಳಿಗೆ ಹೋಗುವಂತೆ ಮಾಡುವ ಬಸಿಯುವ ಕೆರೆ, ಮಲೆನಾಡಂಚಿನಲ್ಲಿ ಮೃಗಗಳ ಕಾಟದಿಂದ ಬೆಳೆಗಳನ್ನು ರಕ್ಷಿಸುವ ಬಂದೂಕು ಸಂಘಗಳ ಮಾದರಿ ಇವೆಲ್ಲ ಪ್ರಾತ್ಯಕ್ಷಿಕೆಗಳು ಚೆನ್ನಾಗಿವೆ. ಧಾರವಾಡದ ಒಕ್ಕಲುತನ ಶಾಖೆಯವರ ಪ್ರಯೋಗಗಳ ಫಲವಾಗಿ ಉತ್ತಮ ಜಾತಿಯವೆಂದು ಸಿದ್ಧವಾದ ನಂದ್ಯಾಳ, ಬಿಳಿ ಫುಲ್ಗಾರ, ಹಳದಿ ಫುಲ್ಗಾರ, ಜೋಳಗಳು, ೮೦೮ ನಂಬರಿನ ಗೋಧಿ, ಮುಗದದ ಹಕ್ಕಲುಸಾಳಿ, ಉದರಸಾಳಿ, ೧೪೦ ನಂ. ಮೊದಲಾದ ಭತ್ತಗಳು ಇವುಗಳ ಸ್ಯಾಂಪಲುಗಳು, ಒಕ್ಕಲಿಗರಿಗೆ ಉಪಯುಕ್ತವಾಗಿವೆ.

ಆರೋಗ್ಯ ವಿಭಾಗದಲ್ಲಿ ಪೈರು ಹಾಗು ದನಕರುಗಳಿಗೆ ಬರುವ ರೋಗಗಳ ಕಾರಣಭೂತ ಕ್ರಿಮಿಗಳು, ಅವುಗಳ ನಿವಾರಣೋಪಾಯಗಳು ಭಿತ್ತಿಪತ್ರ ಮತ್ತು ಸಮರ್ಥ ಪ್ರಚಾರಕರ ಸಹಾಯದಿಂದ ವಿವರಿಸಲ್ಪಡುತ್ತಿವೆ.

ದೇವಿಹೊಸೂರ ಒಕ್ಕಲತನ ಶಾಲೆಯವರ ಗುದ್ದಾರ ಹೊಡೆಯುವ ಪ್ರತ್ಯಕ್ಷ ಪ್ರಯೋಗ, ಗದುಗಿನ ಸರಕಾರಿ ನೇಯ್ಗೆ ಶಾಲೆಯ ಉಣ್ಣೆ ನೇಯುವ ಪ್ರಾತ್ಯಕ್ಷಿಕೆ, ಡೇರಿ ಫಾರ್ಮಿಗೆ ಅವಶ್ಯಕವಾದ ಬೆಣ್ಣೆ ತೆಗೆಯುವ, ಹಾಲು ಪರೀಕ್ಷಿಸುವ ಮೊದಲಾದ ಉಪಕರಣಗಳು, ಹೊನ್ನಾವರದ ಗ್ರಾಮೋದ್ಯೋಗ ಸಮಿತಿಯವರ "ಮನೆಮನೆಯ ಕೈಬಟ್ಟಿಯ ಸೃಗಾರ" (ಬೆಲೆ ೫೦ ರೂಪಾಯಿ, ಮುಂದೆ ೨೫-೩೦ ರೂಪಾಯಿಗೆ ಸಿಗುವಂತೆ ಅಧಿಕ ಸಂಖ್ಯೆಯಲ್ಲಿ ಇದನ್ನು ತಯಾರಿಸಲಾಗುವದು), ಮತ್ತು ಖಾನಾಪುರದ ಸರಕಾರಿ ಕುಂಬಾರಿಕೆ ಶಾಲೆಯ ಅತ್ಯುತ್ತಮ ತಯಾರಿಕೆಗಳ ಪ್ರಾತ್ಯಕ್ಷಿಕೆ ಇವು ಉಲ್ಲೇಖಾರ್ಹವಾಗಿವೆ.

ಔದ್ಯೋಗಿಕ ವಿಭಾಗದಲ್ಲಿ ಕಿರ್ಲೋಸ್ಕರ ಮತ್ತು ಮೈಸೂರು ಕಿರ್ಲೋಸ್ಕರ ಕಂಪನಿಗಳ ಗಾಣ, ಪಂಪು, ನೇಗಿಲು ಮೊದಲಾದವುಗಳ ಸಪ್ರಯೋಗ ಪ್ರದರ್ಶನಕ್ಕೇ ಅಗ್ರಸ್ಥಾನ ಸಲ್ಲಬೇಕು. ಒಕ್ಕಲತನದ ಅಭಿವೃದ್ಧಿಗೆ ಈ ಉಪಕರಣಗಳ ಧಾರಾಳ ಪ್ರಯೋಗ ಅವಶ್ಯವಾಗಿದೆ. ಅದೇ ರೀತಿ ಕೂಪರ ಕಂಪನಿ ಎಂಜಿನುಗಳು ಪ್ರೇಕ್ಷಣೀಯವಾಗಿವೆ. ಸಿಮೆಂಟಿನ ಛಾವಣಿ, ಸೀರಿನ ಹೌದುಗಳೂ, ಡಾಡ್ಸನ್ ಮೊದಲಾದವರ ಎಣ್ಣೆ ಗಾಣಗಳೂ ನಮ್ಮ ಉದ್ಯೋಗಿಗಳ ಪ್ರಗತಿಪರತೆಯನ್ನು ತೋರಿಸುತ್ತವೆ. ಮೈಸೂರಿನ ರೇಷ್ಮೆ ಸೀರೆಗಳ ಸ್ಟಾಲಿನ ಮುಂದೆ "ಶೃಂಗಾರ" ವೆಂಬ ಹಲಿಗೆ ನೇತಾಡುತಿದ್ದರೂ ಸಾಬೂನಿನ ಅರಮನೆಯ ಮಧ್ಯದಲ್ಲಿರುವ ಸ್ವಾನಾರ್ಥಿನಿಯಾದ ನಿರ್ಮಾಣ ಸುಂದರಿಯಲ್ಲಿಯೇ ನೀವು ಶೃಂಗಾರವನ್ನು ಕಾಣಬಹುದೇನೊ. ಈ ಸಲದ ಪ್ರದರ್ಶನದಲ್ಲಿ ಮೈಸೂರು ಸಂಸ್ಥಾನ ಸರಕಾರದವರು ನಡೆಯಿಸುತಿರುವ ವಿವಿಧ ಉದ್ಯೋಗಗಳ ಮತ್ತು ಒಕ್ಕಲತನ ಸಂಶೋಧನಗಳ ಫಲಗಳು ತೀರ ವಿರಳವಾಗಿರುವದು ಎದ್ದು ಕಾಣುತಿದೆ. ಇತರ ಕರ್ನಾಟಕದಿಂದ ಅದಷ್ಟು ದೂರ ಉಳಿಯಬೇಕೆಂಬ ರಾಜಕೀಯ ಮುತ್ಸದ್ದಿತನ ಇದಕ್ಕೆ ಕಾರಣವಿರಲಿಕ್ಕಿಲ್ಲವಷ್ಟೇ? ಸಂದುಗೂಡಿದ ದೇಹಗಳ ಅವಳಿ ಹೆಣ್ಣುಗಳು, ಕಾಲಲ್ಲಿ ಬರೆಯುವ ಕೈಯಿಲ್ಲದ ಹೆಣ್ಣೇ ಮೊದಲಾದ ಮಾನವ ಪ್ರದರ್ಶನ ವಸ್ತುಗಳು ನಿಮ್ಮ ಕೌತುಕವನ್ನು ಕೆರಳಿಸಬಹುದು. ಪ್ರದರ್ಶನದಲ್ಲಿ ಅಲೆದಾಡಿ ಅಲೆದಾಡಿ ಉಂಟಾದ ಶ್ರಮವನ್ನು ಬೇಕಾದರೆ ಮಹಿಳಾ ಸಹಕಾರಿ ಸಂಘದ ತರುಣಿಯರು ನಡೆಸುವ "ಆರೋಗ್ಯಭವನ"ದಲ್ಲಿ (ಅಥವಾ ಮತ್ತೆರಡು ಉಪಾಹಾರಗೃಹಗಳಲ್ಲಿ) ಹಂಚಲ್ಪಡುವ ತಂಪಾದ ಪಾನೀಯಗಳಿಂದ ಅಥವಾ ಬೆಳಗಿನ ಹೊತ್ತಾದರೆ ಸರಕಾರದವರು ಕೊಡುವ ನೀರಾನ್ಮೃತದಿಂದ ತಣಿಸಿಕೊಂಡು ನೀವು ದಾರಿ ಹಿಡಿಯಬಲ್ಲಿರಿ.

ಕರೇನ ಬಂಡಾಗಾರರು ಒಂದು ವಿಮಾನದಲ್ಲಿ ಹೋಗಿ ಮಿತಕಲಾ ನಗರವನ್ನು ವಶಪಡಿಸಿಕೊಂಡರೆಂದು ತಿಳಿಯುತ್ತದೆ. ತಪ್ಪಿಸಿಕೊಂಡವಾಗಿ ಮಂಡಾಲೆಗೆ ಹೋಗುವ ೧೦೦ಮೈಲುದ್ದ ರೇಲ್ವೆ ಮತ್ತು ಲೈನಮಾರ್ಗ ಅವರ ವಶವಾಯಿತು.

ಹುರಳಿ, ಅವರೆ ಮತ್ತು ತೊಗರಿಗಳ ಬೆಲೆಯನ್ನು ಹಿಡಿತದಲ್ಲಿ ತರುವ ಉದ್ದೇಶದಿಂದ ಸಂಸ್ಥಾನದ ಹೊರಗಿನ ಯಾವದೇ ಪ್ರದೇಶಕ್ಕೆ ಆಹಾರ ಪೂರೈಕೆ ಡಾಯರೆಕ್ಟರರ ವಿಶೇಷ ಅಪ್ಪಣೆ ಇಲ್ಲದೆ ಕಳಿಸಕೂಡದೆಂದು ಮೈಸೂರ ಸರಕಾರದವರು ಪ್ರಸಿದ್ಧಿಸಿದ್ದಾರೆ.

ಬಳ್ಳಾರಿ ಜಿಲ್ಲಾ ಸಮಾಜವಾದೀ ಪಕ್ಷದ ಸಭೆ ೧೯ ಕ್ಕೆ ಸೇರಿ ಮೈಸೂರು ಸರಕಾರವು ಸೋಶಾಲಿಸ್ಟ ಪಕ್ಷದ ಕಾರ್ಯಕರ್ತರನ್ನು ಬಂಧಿಸಿದ್ದನ್ನು ನಿಷೇಧಿಸಲಾಯಿತು. ಎಪ್ರಿಲದಲ್ಲಿ ಬಳ್ಳಾರಿಯಲ್ಲಿ ಸಮಾಜವಾದಿ ಪರಿಷತ್ತನ್ನು ಕೂಡಿಸಬೇಕೆಂದು ನಿರ್ಣಯಿಸಲಾಯಿತು. ಜಿಲ್ಲೆಯಲ್ಲಿ ಪಕ್ಷದ ಪರವಾಗಿ ರೈತ ಮತ್ತು ಮಜದೂರ ಪಂಚಾಯತಿಗಳನ್ನು ಸ್ಥಾಪಿಸಬೇಕೆಂತಲೂ ರೈತ ಮತ್ತು ಮಜದೂರರಲ್ಲಿ ಜಾಗ್ರತೆಗಾಗಿ ಪಕ್ಷವು ಹೆಚ್ಚು ಆಸ್ಥೆ ವಹಿಸಬೇಕೆಂದೂ ಬಿನ್ನವಿಸಲಾಯಿತು.

ವ್ಯಾಪಾರ ಪ್ರಪಂಚ

ಮುಂಬಯಿ ಶೇರಪೇಟೆ

ತಾ. ೨೫

ಪೇಟೆಯಲ್ಲಿ ಬೆಲೆಗಳು ಒಂದು ಸ್ವಲ್ಪ [illegible] ಈ ಸಲ ಬಾಧಗಳ ಮೇಲಿನ ಕರಭಾರ [illegible] ಕಡಿಮೆಯಾಗಬಹುದೆಂದು ಅನೆಯುಂಟಾಗಿ [illegible] ಪದೆಂದು ಅನೆಯುಂಟಾಗಿದ್ದರೂ [illegible] ಅಲ್ಪಸ್ವಲ್ಪ ಹತ್ತಿ ಸಿಕ್ಕದುದರಿಂದ ಇದಕ್ಕೆ [illegible] ಉತ್ಕೃಷ್ಟ ನಿಯಂತ್ರಿತ ದರಗಳು [illegible] ದೇಟ ಆಚೆ ಉತ್ಕೃಷ್ಟ ಪಾಲುಗಳನ್ನು [illegible] ಮೇಲೇರಿಸಿದೆ. ಇಂದಿನ ಕೊನೆಯ ದರಗಳು ಹೀಗಿವೆ: —

ಮುಂಬಯಿ ಡಾಯಿಂಗ್	[illegible]
ಕೊಹಿನೂರು	[illegible]
ಸ್ವದೇಶಿ	[illegible]
ಗೋಕಾಕ	[illegible]
ಸೆಂಚುರಿ	[illegible]
ಸೆಂಟ್ರಲ ಇಂಡಿಯಾ	[illegible]
ಟಾಟಾ ಸ್ಟೀಲ ಡೆಫರ್ಡ	[illegible]
ಇಂಡಿಯನ್ ಆಯರ್ನ	[illegible]
ಅಸೊ. ಸಿಮೆಂಟ್ಸ	[illegible]
ಬೇಲಾಪುರ ಸಕ್ಕರೆ	[illegible]
ಸೆಂಟ್ರಲ ಬ್ಯಾಂಕ್	[illegible]
ಇಂಪೀರಿಯಲ್ ಬ್ಯಾಂಕ್(ಪೂರ್ಣ)	[illegible]
ಬ್ಯಾಂಕ ಅಫ್ ಇಂಡಿಯಾ	[illegible]

ಚಿನ್ನ ಬೆಳ್ಳಿ

ಚಿನಿವಾರ ಕಟ್ಟೆಯಲ್ಲಿ ಬೆಲೆಗಳು ಕಳೆದ ವಾರದ ಸ್ಥಿತಿಗಿಂತ ಸ್ವಲ್ಪ ಕೆಳಮಟ್ಟದಲ್ಲಿವೆ. ಇಂದಿನ ಕೊನೆಯ ದರಗಳು ಹೀಗಿದ್ದವು.

ಚಿನ್ನ	[illegible]
ಬೆಳ್ಳಿ	[illegible]
ಸಾವರಿನ್	[illegible]

ಅರಳಿ

ಅರಳಿಯ ವಾಯಿದೆಬೆಲೆಗಳು ಸರಕಾರ ನಿರ್ಧರಿಸಿದ ರೂ. ೬೨೦ ರ ಪರಮಾವಧಿಯನ್ನು ಮುಟ್ಟಿದ್ದರೂ ಪರಮಾವಧಿಯನ್ನು ಏರಿಸಲು ಸರಕಾರದವರು ನಿರಾಕರಿಸುವದರಿಂದ ಪೇಟೆಯಲ್ಲಿ ನಿರಾಶೆಯುಂಟಾಗಿದೆ.

ಇಂದಿನ ಬೆಲೆಗಳು ಹೀಗಿವೆ:

ಮೇ	[illegible]
ಜುಲೈ	[illegible]
ಸೆಪ್ಟೆಂಬರ	[illegible]

ಎಣ್ಣೆಕಾಳು

ಶೇಂಗಾ	[illegible]
ಅಗಸಿ	[illegible]
ಹೊಸ ಅಗಸಿ	[illegible]
ಅಗಸಿ ಎಣ್ಣೆ	[illegible]
ಔಡ್ಲ	[illegible]

ಹುಬ್ಬಳ್ಳಿ

ತಾ. [illegible]

ಜ. ಹತ್ತಿ ನಗಳ್ಕೆ		[illegible]
ಮುಂ. ಹತ್ತಿ		[illegible]
ಜ. ಅರಳಿ ,,		[illegible]
ಜ. ಹತ್ತಿಕಾಳು	[illegible]	[illegible]
ವಿ. ಹತ್ತಿಕಾಳು	,,	[illegible]
ಕುಸುಬಿ (ಬ. ಮಣಕ್ಕೆ)	[illegible]	[illegible]
ಅಗಸಿ	(ಚೀಲಕ್ಕೆ) [illegible]	[illegible]
ಔಡಲ	,,	[illegible]
ಜ. ಹೆಸರು	,,	[illegible]
ಕರಿ ಎಳ್ಳು	,,	[illegible]
ಬಿಳಿ ಎಳ್ಳು	,,	[illegible]
ಕಡಲೆ	,,	[illegible]
ಜ. ತೊಗರಿ	,,	[illegible]
ಹುರಳಿ	,,	[illegible]
ಕೆಂ. ಅಲಸಂದಿ	,,	[illegible]
ಬಿ. ಅಲಸಂದಿ	,,	[illegible]
ಶೇಂಗಾ (ಹೇರು)		[illegible]

ಸಾಂಗಲಿ ಪೇಟೆ

ಅರಿಸಿನ	[illegible]
ಮೆಣಸಿನಕಾಯಿ	[illegible]
ಶೇಂಗಾ	[illegible]
ಬೆಲ್ಲ	[illegible]

[illegible]

ಕರ್ಮವೀರ

[illegible] ಫಾಲ್ಗುಣ ಶುದ್ಧ ೧ ಸೋಮವಾರ

ಸರಕಾರಕ್ಕೆ ಸಹಾಯ ಸಲ್ಲಿಸಿರಿ

ಹಿಂದುಸ್ತಾನ ಸರಕಾರದ ಉಪ ಮುಖ್ಯ ಮಂತ್ರಿಗಳಾದ ಸರದಾರ ವಲ್ಲಭಭಾಯಿ ಪಟೇಲರು ಕಳೆದ ವಾರ ಮದರಾಸಿನಲ್ಲಿ ಎರಡು ದಿನ ಇದ್ದು ವಿವಿಧ ಸಂಘ ಸಂಸ್ಥೆಗಳನ್ನು ಸಂದರ್ಶಿಸಿ, ಮಾನಪತ್ರಗಳನ್ನು ಸ್ವೀಕರಿಸಿ, ಸಮಯೋಚಿತ ಸಲಹೆಯನ್ನು ಕೊಟ್ಟರು. ಸದ್ಯದ ವಿಷಮ ಪರಿಸ್ಥಿತಿಯಲ್ಲಿ ಹಿಂದುಸ್ತಾನದ ಸಮಸ್ಯೆಗಳೆಲ್ಲ ಪರಿಹಾರವಾಗಿ ದೇಶದಲ್ಲಿ ಶಾಂತಿ ಸಮೃದ್ಧಿಗಳು ನೆಲಸಬೇಕಾದರೆ ವ್ಯಾಪಾರಸ್ಥರು ಮತ್ತು ಕೂಲಿಕಾರರು, ಅಧಿಕಾರಿಗಳು ಮತ್ತು ಸಾಮಾನ್ಯ ಪ್ರಜೆಗಳು ಎಲ್ಲರೂ ತಮ್ಮ ತಮ್ಮ ಪಾಲಿನ ಕರ್ತವ್ಯವನ್ನು ಮಾಡುವದು ಅವಶ್ಯವಾಗಿದೆಯೆಂದು ಅವರು ಹೇಳಿದರು. ಸರಕಾರಕ್ಕೆ ಅವಶ್ಯವಾದ ಸಹಾಯವನ್ನು ಎಲ್ಲರೂ ಸಲ್ಲಿಸಿದರೇನೇ ಧ್ಯೇಯ ಸಾಧಿಸಿ ರಾಷ್ಟ್ರದ ಹೆಜ್ಜೆ ಮುಂದೆ ಬೀಳುವುದೆಂಬುದು ನಿರ್ವಿವಾದವಾಗಿದೆ. ಆಡಳಿತವನ್ನು ಸಮರ್ಥ ರೀತಿಯಿಂದ ಸಾಗಿಸಿಕೊಂಡು ಹೋಗಲು ಸರಕಾರದಲ್ಲಿ ಸಾಕಷ್ಟು ಜನರಿಲ್ಲದಿರುವಾಗ ವ್ಯಾಪಾರೋದ್ಯಮಗಳನ್ನು ರಾಷ್ಟ್ರೀಕರಿಸುವ ಪ್ರಶ್ನೆ ಸದ್ಯಕ್ಕೆ ಇಲ್ಲ ಎಂದೂ ಅವರು ಸ್ಪಷ್ಟಪಡಿಸಿದರು. ರಾಷ್ಟ್ರೀಕರಣ ಮಾಡಬೇಕೆಂದು ಹೇಳುವವರೆಲ್ಲ ಧುರೀಣತ್ವಕ್ಕೆ ಹಂಬಲಿಸುವವರು; ಅಂಥ ಧುರೀಣತ್ವ ತಮಗೆ ಬೇಕಾಗಿಲ್ಲ ಎಂದೂ ಅವರು ಹೇಳಿದರು. ಕೂಲಿಕಾರರಿಂದು ಯೋಗ್ಯ ಮಾರ್ಗದರ್ಶನ ಮಾಡುವಂಥ ಜನರ ಕೈಯಲ್ಲಿ ಉಳಿದಿಲ್ಲ. ಸರಕಾರವು ಬಂಡುವಲಗಾರರ ಸರಕಾರವೆಂದು ಹೇಳುವದು ಶುದ್ಧ ಅಪ್ರಾಮಾಣಿಕ ಅಪಪ್ರಚಾರವಾಗಿದೆ. ಕೂಲಿಕಾರರಿಗೆ ಅವರ ಪಾಲು ದೊರೆಯುವಂತೆ ನೋಡಿಕೊಳ್ಳುವದು ಸರಕಾರದ ಕರ್ತವ್ಯವಾಗಿದ್ದರೂ ಸರಕಾರವಾಗಲಿ, ಬಂಡವಲದಾರರಾಗಲಿ ಸ್ವತಃ ಕೂಲಿಕಾರರು ಕೂಡ ಸುರಕ್ಷಿತವೆನ್ನಿಸುವಂಥ ಪರಿಸ್ಥಿತಿ ಪ್ರಾಪ್ತವಾಗುವದಕ್ಕೆ ಅದೆಂದಿಗೂ ಅವಕಾಶ ಕೊಡಲಾರದೆಂದು ಅವರು ಸ್ಪಷ್ಟಪಡಿಸಿರು.


ನಿಯಂತ್ರಣಗಳನ್ನು ಮತ್ತೆ ಏಕೆ ಹೇರಬೇಕಾಯಿತೆಂಬುದನ್ನು ವಿಮರ್ಶಿಸುತ್ತ ಸರದಾರರು ಹೀಗೆ ಹೇಳಿದರು. ನಿಯಂತ್ರಣ ಹೇರಿದರೆ ನೀವು ಸರಕಾರವನ್ನು ದೂರುತ್ತೀರಿ. ಆದರೆ ನಿಯಂತ್ರಣವನ್ನು ತೆಗೆದು ಹಾಕಿದಾಗ ನೀವು ಏನು ಮಾಡಿದರೆಂಬುದನ್ನು ನಿಮ್ಮ ಸದಸದ್ವಿವೇಕ ಬುದ್ಧಿಗೆ ಸಾಕ್ಷಿಯಾಗಿ ಕೇಳಿಕೊಳ್ಳಿರಿ. ನಿಯಂತ್ರಣವೆಂದರೆ ಲಂಚಗುಳಿತನ ಮತ್ತು ಕಳ್ಳಪೇಟೆಗೆ ಮುಕ್ತದ್ವಾರ [illegible] ಸರಕಾರಕ್ಕೆ ಗೊತ್ತಿದೆ. ಆದರೆ [illegible] ಸಂದರ್ಭದಲ್ಲಿ ಸರಕಾರವು ಏನು ಮಾಡಬೇಕೆಂಬುದನ್ನು ನೀವೇ ವಿಚಾರಿಸಿರಿ ಎಂದು ಸರದಾರರು ಸವಾಲು ಹಾಕಿದರು. ನಿಯಂತ್ರಣವನ್ನು ತೆಗೆದುಹಾಕಿದಾಗ [illegible] ಸಹಾಯ ಮಾಡದೆ ಇದ್ದುದರಿಂದಲೇ ಮತ್ತೆ ನಿಯಂತ್ರಣ ಹೇರಬೇಕಾಗಿ ಬಂದಿತೆಂದೂ ಅವರು ಹೇಳಿದರು. ನಿಯಂತ್ರಣ ಕಾಲದಲ್ಲಿ ಎಲ್ಲೆಲ್ಲಿಯೂ ಕಳ್ಳಪೇಟೆ ನಡೆಯುತ್ತಿದ್ದರಿಂದ ಸರಕಾರದವರು ಮತ್ತೆ ನಿಯಂತ್ರಣ ಹೇರಬೇಕಾಯಿತು. ಆಹಾರ ಪದಾರ್ಥಗಳ ನಿಯಂತ್ರಣದ ಪ್ರಶ್ನೆಯೂ ಹೀಗೆಯೇ ಇದೆ. ಆಹಾರ ಪದಾರ್ಥಗಳ ಸೂರಕ್ಷತೆ ರಷ್ಟು ಕೊರತೆಯನ್ನು ನಾವು ಸರಿಪಡಿಸಿಕೊಳ್ಳಲಾರೆವೊ? ಆಹಾರ ಪದಾರ್ಥಗಳನ್ನು ಹಾಳು ಮಾಡದೆ ಯೋಗ್ಯ ರೀತಿಯಿಂದ ಅವನ್ನು ವ್ಯಯಿಸಿದರೆ ಎಲ್ಲವೂ ಸರಿಹೋಗುವದು. ಆದರೆ ನಮ್ಮ ಜನರಲ್ಲಿ ನೀತಿಯೇ ಇಲ್ಲದಂತಾದ್ದರಿಂದ ಈ ದುಃಸ್ಥಿತಿ ಬಂದೊದಗಿದೆ ಎಂದು ಸ್ಪಷ್ಟಪಡಿಸಿದರು.

ಇಂತಿನಂಥ ಅಧಿಕಾರ ಮುಗ್ಗಟ್ಟಿನ ಕಾಲದಲ್ಲಿ ಉದ್ದಿಮೆದಾರರು ಮತ್ತು ವ್ಯಾಪಾರಸ್ಥರು ಲಾಭದ ಧೋರಣವನ್ನು ಬದಿಗಿಟ್ಟು ಕೇವಲ ಸೇವಾಭಾವದಿಂದ ನಡೆಯಬೇಕೆಂದು ಸರದಾರರು ಬಿನ್ನವಿಸಿಕೊಂಡರು. ಜನಸೇವೆಯು ಹೊರತು ಸರಕಾರಕ್ಕೆ ಬೇರೆ ಯಾವ ಸ್ವಾರ್ಥವನ್ನು ಸಾಧಿಸುವುದಿದೆ? ಸರಕಾರ ಮಾಡುವದೆಲ್ಲ ನಿಮ್ಮೆಲ್ಲರ ಹಿತಕ್ಕಾಗಿಯೇ ಎಂದು ತಿಳಿದುಕೊಂಡು ಸಹಕರಿಸುವದು ಕರ್ತವ್ಯವಾಗಿದೆ. ಕಾಂಗ್ರೆಸ್ಸಿಗರೂ ಇಂದು ಲಾಭದ ಬೆನ್ನು ಹತ್ತಿರುವರು. ಜೇಲು ಮುಂತಾದವುಗಳಿಗೆ ಹೋಗಿ ಬಳಲಿದ ತಮಗೆ ದುಡ್ಡು ಗಳಿಸುವ ಸಮಯವಿದು ಎಂದು ಅವರು ತಿಳಿದುಕೊಂಡಿರುವರು. ಇದೊಂದು ದುಷ್ಪ್ರವೃತ್ತಿ. ಎಂದು ಮುಂತಾಗಿ ಸರದಾರರು ನುಡಿದರು. ಸರದಾರರು ಉಪದೇಶಿಸಿದಂತೆ ಆಯಾ ಜನರು ತಮ್ಮ ತಮ್ಮ ಪಾಲಿನ ಕರ್ತವ್ಯವನ್ನು ಪ್ರಾಮಾಣಿಕತೆಯಿಂದ ಮತ್ತು ನಿಃಸ್ವಾರ್ಥ ಭಾವನೆಯಿಂದ ಮಾಡಿದ್ದಾದರೆ ಇಷ್ಟೊಂದು ಶ್ರಮಪಟ್ಟು ಗಳಿಸಿದ ಸ್ವಾತಂತ್ರ್ಯದ ಸದುಪಯೋಗ ಮಾಡಿಕೊಂಡಂತಾಗುವದೆಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ.

ಕರ್ನಾಟಕ ಔದ್ಯೋಗಿಕ ಪರಿಷತ್ತು



ಶ್ರೀ ಭವಾನಜಿ ಅರ್ಜುನ ಖಿಮಜಿ
ಉದ್ಘಾಟಕರು



ಶ್ರೀ ಶಂಕರರಾವ ಕಿರ್ಲೋಸ್ಕರ
ಅಧ್ಯಕ್ಷರು

ವಾರದ ಸಿಂಹಾವಲೋಕನ

ಭಾಷಾನ್ವಯ ಪ್ರಾಂತರಚನೆ

ಮುಂಬಯಿ ಶಾಸನಸಭಾಸದಸ್ಯರಾದ ಶ್ರೀ ಪವಾರರು ಭಾಷಾನ್ವಯ ಪ್ರಾಂತರಚನೆಯ ಗೊತ್ತುವಳಿಯನ್ನು ಕಳೆದವಾರ ಮಂಡಿಸಿ ಪಾಸುಮಾಡಿಸಿಕೊಂಡರು. ಮುಂಬಯಿ ಸಹಿತ ಮಹಾರಾಷ್ಟ್ರ, ಕರ್ನಾಟಕ ಮತ್ತು ಗುಜರಾಥ ಪ್ರಾಂತಗಳು ಬೇಗನೆ ನಿರ್ಮಾಣವಾಗಬೇಕು ಮತ್ತು ಹೊಸ ಘಟನೆಯಲ್ಲಿ ಇದನ್ನು ಸೇರಿಸಬೇಕು ಎಂದು ಮುಂಬಯಿ ಸರಕಾರವು ಹಿಂದುಸ್ತಾನ ಸರಕಾರದ ಮುಖಾಂತರ ಘಟನಾಸಮಿತಿಗೆ ತಿಳಿಸಬೇಕೆಂದು ಈ ಸಭೆಯು ಮುಂಬಯಿ ಸರಕಾರಕ್ಕೆ ಬಿನ್ನವಿಸಿಕೊಳ್ಳುತ್ತದೆ ಎಂಬುದೇ ಶ್ರೀ ಪವಾರರು ತಂದಿದ್ದ ಗೊತ್ತುವಳಿಯ ಮುಖ್ಯಾಶಯವಿರುವುದು. ಈ ಗೊತ್ತುವಳಿಯಲ್ಲಿ ಕಾಂಗ್ರೆಸ್ಸಿಗರು ತಮಗೆ ಸರಿದೋರಿದಂತೆ ಮತಗಳನ್ನು ಹಾಕುವ ಸ್ವಾತಂತ್ರ್ಯ ಕೊಡಲಾಗಿತ್ತು. ಮಂತ್ರಿಗಳು, ಗುಜರಾಥದ ಪ್ರತಿನಿಧಿಗಳು ಹಿಂದೀ ವಣಿಕ ಸಂಘದ ಪ್ರತಿನಿಧಿಯು ತಟಸ್ಥರಾಗುಳಿದರು. ಗೊತ್ತುವಳಿಗೆ ಒಬ್ಬರು ಮಾತ್ರ ವಿರೋಧ ಪ್ರದರ್ಶಿಸಿದರು. ಗೊತ್ತುವಳಿಯ ಮೊದಲಿನ ಭಾಗವನ್ನು ಅಂದರೆ ಮುಂಬಯಿ ಸಹಿತ ಮಹಾರಾಷ್ಟ್ರ, ಕರ್ನಾಟಕ, ಗುಜರಾಥ ಪ್ರಾಂತಗಳನ್ನು ರಚಿಸಬೇಕು ಎಂಬುದರ ಬದಲು ಬರಿ ಕರ್ನಾಟಕ ಎಂಬ ಶಬ್ದವನ್ನು ಜೋಡಿಸಬೇಕು ಎಂದು ಶ್ರೀ ಶಿ. ಲ. ಕರಂದೀಕರರು ತಿದ್ದುಪಡಿ ಮಂಡಿಸಿದ್ದರು. ಬರಿ ಕರ್ನಾಟಕ ಪ್ರಾಂತದ ರಚನೆಯಾಗಬೇಕೆಂಬುದೆ ಅವರ ತಿದ್ದುಪಡಿಯ ಆಶಯವಾಗಿದ್ದಿತು. ಆದರೆ ಶಾಸನ ಸಭೆಯು ಇದಕ್ಕೆ ಒಪ್ಪಲಿಲ್ಲ. ಮೂರೂ ಪ್ರಾಂತಗಳ ರಚನೆಯಾಗಬೇಕೆಂಬುದಕ್ಕೇ ಅದು ಪುರಸ್ಕಾರವಿತ್ತಿತು. ಮಂತ್ರಿಗಳೂ ಈ ಗೊತ್ತುವಳಿಗೆ ಬೆಂಬಲ ಕೊಟ್ಟಿದ್ದರೆ ಹೆಚ್ಚು ಒಳ್ಳೆತಾಗುತ್ತಿದ್ದಿತು. ಮಹಾರಾಷ್ಟ್ರದಲ್ಲಿ ಮುಂಬಯಿಯನ್ನು ಸೇರಿಸುವದಕ್ಕೆ ಗುಜರಾಥ ಪ್ರತಿನಿಧಿಗಳ ಒಪ್ಪಿಗೆಯಿಲ್ಲದಿದ್ದರೆ ಸೀಮಾ ಸಮಿತಿಯು ಮುಂಬಯಿ ಪ್ರಶ್ನೆಯನ್ನು ಬಿಡಿಸಬೇಕು ಎಂದು ತಿದ್ದುಪಡಿ ತರಬೇಕಿದ್ದಿತು. ಅದನ್ನು ಬಿಟ್ಟು ತಟಸ್ಥ ಧೋರಣ, ವಹಿಸಿದ್ದು ಸರಿಯಾಗಲಿಲ್ಲೆಂದು ನಮ್ಮ ಅಭಿಪ್ರಾಯ. ಅದೇನೆ ಇದ್ದರೂ ಮುಂಬಯಿ ಶಾಸನ ಸಭೆಯಲ್ಲಿ ಸ್ವೀಕೃತವಾದ ಈ ಗೊತ್ತುವಳಿಗೆ ತ್ರಿಮೂರ್ತಿಗಳೂ ಹಿಂದುಸ್ತಾನ ಸರಕಾರವೂ ಘಟನಾಸಮಿತಿಯೂ ಹೆಚ್ಚು ಮಹತ್ವಕೊಟ್ಟು ಬೇಗ ಹೊಸ ಭಾಷಾನ್ವಯ ಪ್ರಾಂತ ರಚಿತವಾಗುವಂತೆ ಕ್ರಮ ಕೈಕೊಳ್ಳಬೇಕೆಂದು ಸೂಚಿಸುತ್ತೇವೆ.

ಮಧ್ಯಪ್ರಾಂತದಲ್ಲಿ ಸೀದಾ ಇಲ್ಲ

ಇಡೀ ಹಿಂದುಸ್ತಾನದಲ್ಲಿ ಮಧ್ಯಪ್ರಾಂತದಲ್ಲಿ ಸೀದಾ ಪದ್ಧತಿಯನ್ನು ಜಾರಿಯಲ್ಲಿ ತರಬಾರದೆಂದು ನಿರ್ಧರಿಸಲಾಗಿದೆ. ಈ ಸಂಬಂಧದಲ್ಲಿ ಆಹಾರ ಮಂತ್ರಿಗಳಾದ ಶ್ರೀ ಆರ್. ಕೆ. ಪಾಟೀಲರು ಪತ್ರಿಕಾ ಪ್ರತಿನಿಧಿಗಳೆದುರಿಗೆ ಕೆಲ ಮಹತ್ವದ ಮಾತುಗಳನ್ನು ಹೇಳಿದರು. ಪ್ರಾಂತವು ಸೀದಾ ಪದ್ಧತಿಯನ್ನು ಮತ್ತೆ ಪ್ರಾರಂಭಿಸುವದಿಲ್ಲ, ಕಳೆದ ವರುಷ ಅಂದರೆ ೧೯೪೬-೪೭ ರಲ್ಲಿಯಕ್ಕಿಂತ ಈ ವರುಷ ಬೆಳೆ ಕಡಮೆ ಬಂದಿದ್ದರೂ ಸೀದಾ ಪದ್ಧತಿಯನ್ನು ಅವಲಂಬಿಸದೆ ಜನತೆಗೆ ಸಾಕಷ್ಟು ಧಾನ್ಯ ಪೂರಯಿಸುವ ಯೋಜನೆಯನ್ನಿಟ್ಟುಕೊಳ್ಳಲಾಗಿದೆ. ಈ ವರುಷ ಭತ್ತ ಜೋಳಗಳ ಬೆಳೆ ಕೆಟ್ಟದ್ದು ಒಂದು ಲಕ್ಷ ಟನ್ನ ಉತ್ಪಾದನೆ ಕಡಮೆಯಾಗಬಹುದು. ಕೇಂದ್ರ ಸರಕಾರದಿಂದ ಸಹಾಯ ಪಡೆಯದೆ ಈ ಕೊರತೆಯನ್ನು ತುಂಬಿಕೊಂಡು ಪ್ರಾಂತದಲ್ಲಿಯ ಜನರಿಗೆಲ್ಲ ಆಹಾರಪದಾರ್ಥಗಳನ್ನು ಪೂರಯಿಸಬೇಕೆಂದು ನಿರ್ಧರಿಸಲಾಗಿದ್ದು, ಹಾಗೆ ಮಾಡುವ ವಿಶ್ವಾಸವೂ ನಮಗೆ ಇದೆ. ಜೋಳ ಕೊಟ್ಟರೆ ಭತ್ತ ಕೊಡುವದಾಗಿ ಹಿಂದುಸ್ತಾನ ಸರಕಾರಕ್ಕೆ ತಿಳಿಸಿದ್ದರಿಂದ ಅವರು ಅದಕ್ಕೆ ಒಪ್ಪಿಕೊಂಡು ೧೦ ಸಾವಿರ ಟನ್ನ ಜೋಳ ಮತ್ತು ಇತರ ಧಾನ್ಯ ಕಳಿಸಿ ಅಕ್ಕಿಯನ್ನು ಪಡೆಯುವದಾಗಿ ತಿಳಿಸಿದ್ದಾರೆ. ಹೆಚ್ಚು ಆಹಾರ ಬೆಳೆವ ಯೋಜನೆಗನುಸಾರ ಈ ವರುಷ ೬೦ ಸಾವಿರ ಎಕರೆ ಪಡಭೂಮಿಯಲ್ಲಿ ಸಾಗುವಳಿ ಮಾಡಲಾಗಿದೆ ಎಂದು ಮುಂತಾಗಿಯೂ ಆಹಾರ ಮಂತ್ರಿಗಳು ಅಪ್ಪಣೆ ಕೊಡಿಸಿದರು–ಮಧ್ಯಪ್ರಾಂತದ ಈ ಮುನ್ನಡೆಯು ನಿಜವಾಗಿ ಅಭಿನಂದನೀಯವಾಗಿದೆ. ಇಂದು ಸೀದಾ ಪದ್ಧತಿ ಜಾರಿಯಲ್ಲಿರುವ ನಮ್ಮ ಮುಂಬಯಿ ಪ್ರಾಂತದಲ್ಲಿನ ಅನುಭವಗಳು ಅತ್ಯಂತ ಕಟುವಾಗಿವೆ. ಸೀದಾ ಪದ್ಧತಿ ಜಾರಿಯಲ್ಲಿ ಬರುವ ಮೊದಲು ಅನೇಕ ದಿನ ಪೇಟೆಗಳಲ್ಲಿ ಕಾಳಿನ ವ್ಯಾಪಾರವನ್ನೆ ನಿಲ್ಲಿಸಿಬಿಟ್ಟಿದ್ದರಿಂದ ಅನೇಕ ಜನರು ಗೋಳಾಡುತಿರುವರು. ಅಲ್ಲದೆ ಒಳ್ಳೆ ಕಾಳುಗಳ ಬದಲು ಕೆಂಪು ಜೋಳ, ಹುಳಕ ಗೋದಿ, ಸ್ವಲ್ಪವೂ ಪಾಲಿಶ್ ಆಗದಿದ್ದ ಅಕ್ಕಿ ನಿರ್ದಿಷ್ಟ ಪ್ರಮಾಣದಲ್ಲಿ ಕೊಡಲಾಗುತ್ತಿದೆ. ಅದಕ್ಕಾಗಿ ಕಾರ್ಡು ಪಡೆಯಲು ದಿನವೂ ಸೀದಾ ಕಚೇರಿಗಳಿಗೆ ಎಡತಾಕಬೇಕಾಯಿತು. ಇದನ್ನೆಲ್ಲ ನೆನೆದರೆ ಮಧ್ಯಪ್ರಾಂತ ಸರಕಾರದ ಉಪಕ್ರಮವು ಮೇಲೆಂದು ಎನಿಸುತ್ತದೆ. ಅಲ್ಲಿನ ಅನುಭವದಿಂದಲಾದರೂ ಮುಂಬಯಿ ಸರಕಾರದವರು ಸೀದಾ ಪದ್ಧತಿಯನ್ನು ಬಿಟ್ಟುಗೊಟ್ಟರೆ ಲಂಚಗುಳಿತನ, ಕಳ್ಳಪೇಟೆ, ವಶೀಲಿಬಾಜಿ ಮೊದಲಾದವುಗಳಿಗೆ ಅರೆದಾಳ ಬಿದ್ದಂತಾಗುವದು.

ಸೂಕ್ತ ಸಲಹೆ

ಹಿಂದುಸ್ತಾನ ಸರಕಾರದ ಶಿಕ್ಷಣ ಮಂತ್ರಿಗಳಾದ ಮೌಲಾನಾ ಅಬುಲ್‌ಕಲಂ ಆಜಾದರು ಅಲೀಗಡ ವಿಶ್ವವಿದ್ಯಾಲಯದ ಪದವೀದಾನ ಸಮಾರಂಭದಲ್ಲಿ ಮಾತಾಡುತ್ತ ಕೆಲ ಮಹತ್ವದ ಮಾತುಗಳನ್ನು ಹೇಳಿರುವರು. ಜಾತ್ಯತೀತ ಪ್ರಜಾಪ್ರಭುತ್ವದಲ್ಲಿ ಜಾತೀಯ ಶಿಕ್ಷಣ ಸಂಸ್ಥೆಗೆ ಸ್ಥಾನವಿಲ್ಲ. ಜಾತಿ ಧರ್ಮ ಭೇದವಿಲ್ಲದೆ ಎಲ್ಲ ಪ್ರಜೆಗಳಿಗೂ ರಾಷ್ಟ್ರವು ಶಿಕ್ಷಣ ಕೊಡುವದು. ಒಂದೇ ಮಾದರಿಯ ಶಿಕ್ಷಣವನ್ನು ಎಲ್ಲ ಪ್ರಜೆಗಳಿಗೂ ಕೊಡುವದೆ ಸರಕಾರದ ಧೋರಣ. ಇಂಥ ಶಿಕ್ಷಣವು ರಾಷ್ಟ್ರೀಯ ವೃತ್ತಿಗೆ ಪೋಷಕವಾಗಿಯೂ ಬೌದ್ಧಿಕ ವಿಕಾಸಕ್ಕೆ ಪುಷ್ಟಿ ಕೊಡುವಂತಹದೂ ಆಗಿರುವದು. ಹೀಗೆ ಸಾಮಾನ್ಯ ಶಿಕ್ಷಣವನ್ನು ಎಲ್ಲರಿಗೂ ಕೊಡುವ ಯೋಜನೆಯಲ್ಲಿ ಸಹ ವಿಶೇಷ ಪದ್ಧತಿಯ ಶಿಕ್ಷಣ ಪಡೆಯಲು ಆಸಕ್ತಿಯುಳ್ಳ ಎಲ್ಲ ಜನರಿಗೂ ಅವಕಾಶ ಕೊಡುವದಾದರೆ ಅವುಗಳಿಗೆ ಸ್ಥಾನವಿದೆ ಎಂದು ಹೇಳಬಹುದು ಎಂದು ಹೇಳಿ ಕಾಲಮಾನ ಪರಿಸ್ಥಿತಿಗನುಸರಿಸಿ ಈ ವಿಶ್ವವಿದ್ಯಾಲಯವು ರಾಷ್ಟ್ರೀಯ ಶಿಕ್ಷಣ ಯೋಜನೆಯಲ್ಲಿ ತನ್ನ ಪಾತ್ರವನ್ನು ಯೋಗ್ಯ ರೀತಿಯಲ್ಲಿ ವಹಿಸುವದೆಂಬ ಆಸೆಯನ್ನೂ ವ್ಯಕ್ತಪಡಿಸಿದರು. ಹಿಂದುಸ್ತಾನದಲ್ಲಿ ವಾಸಿಸುವ ಪ್ರತಿಯೊಬ್ಬ ಮುಸಲ್ಮಾನನೂ ಹಿಂದುಗಳು ಕಲಿಯಲಿ, ಕಲಿಯದಿರಲಿ ದೇವನಾಗರಿ ಮತ್ತು ಉರ್ದು ಎರಡೂ ಲಿಪಿಗಳನ್ನೂ ಕಲಿಯಬೇಕು ಮತ್ತು ಹಿಂದೀ ನಾಗರಿಕರಿಗೆ ಶ್ರೇಷ್ಠವಾದ ಮಾರ್ಗವನ್ನು ಹಾಕಿಕೊಡಬೇಕು. ಸದ್ಯದ ಪರಿಸ್ಥಿತಿಯಲ್ಲಿ ಮೌಲಾನಾ ಸಾಹೇಬರ ಈ ಉಪದೇಶವು ಅತ್ಯಂತ ಸಮಂಜಸವೂ ಉಪಯುಕ್ತವೂ ಆಗಿದೆಂಬುದು ಸ್ಪಷ್ಟವಿದೆ. ಇದೇ ಸಮಯದಲ್ಲಿ ಮೌಲಾನಾಸಾಹೇಬರು ಅಲೀಗಡ ವಿಶ್ವವಿದ್ಯಾಲಯದ ಸಂಸ್ಥಾಪಕರಾದ ಡಾ. ಸಯ್ಯದ ಅಹಮ್ಮದ ಖಾನರ ಅಸಮಂಜಸ ಮತ್ತು ಸಂಕುಚಿತ ಧೋರಣದಮೂಲಕ ಹಿಂದೀಮುಸಲ್ಮಾನರನ್ನು ಅಡ್ಡ ದಾರಿಗೆ ಎಳೆದುದನ್ನು ಎತ್ತಿತೋರಿಸಿ ಅದರಿಂದ ಮುಸಲ್ಮಾನರು ಇಂದು ಇಷ್ಟೊಂದು ದುರ್ದಶೆಗೆ ಬರಬೇಕಾಯಿತೆಂದು ಅಭಿಪ್ರಾಯಪಟ್ಟರು. ಮೌಲಾನಾ ಸಾಹೇಬರ ಉಪದೇಶದ ಮರ್ಮವನ್ನು ಮುಸಲ್ಮಾನರೆಲ್ಲ ತಿಳಿದುಕೊಂಡು ಹಿಂದುಗಳೊಡನೆ ಸರ್ವ ವಿಧದಲ್ಲಿಯೂ ಕೂಡಿಕೊಂಡು ಹೋಗಿ ತಮ್ಮ ಮತ್ತು ಇಡೀ ರಾಷ್ಟ್ರದ ಅಭಿವೃದ್ಧಿಯನ್ನು ಸಾಧಿಸಬೇಕು.

ಸರದಾರರಲ್ಲಿ ಶಿಷ್ಟಮಂಡಳ

ಕರ್ನಾಟಕದ ಶಿಷ್ಟಮಂಡಲವು ಮದರಾಸಿಗೆ ಬಂದಿರುವ ಸರದಾರ ವಲ್ಲಭಭಾಯರನ್ನು ಇದೇ ೨೩ ನೇ ತಾರೀಕು ಅಪರಾಹ್ನ ಕಂಡು ಕರ್ನಾಟಕಸ್ಥರು ಸ್ವತಂತ್ರ ಪ್ರಾಂತವನ್ನು ಪಡೆಯುವದಕ್ಕೆ ಎಷ್ಟೊಂದು ಆತುರರಾಗಿರುವರೆಂಬುದನ್ನು ಅವರಿಗೆ ಮನವರಿಕೆ ಮಾಡಿಕೊಟ್ಟರು. ಮೈಸೂರಿನ ಜನರೂ ಇದಕ್ಕೆ ಅನುಕೂಲರಿರುವರೆಂಬುದನ್ನೂ ನಿವೇದಿಸಿ ಬೀರೂರಿನಲ್ಲಿ ಮೈಸೂರು ಕಾಂಗ್ರೆಸ್ಸು ಸ್ವೀಕರಿಸಿದ ನಿರ್ಣಯದ ಸಾಕ್ಷಿಯನ್ನು ಕೊಟ್ಟರು. ಪರಿಹರದ ನಿರ್ಣಯದ ಹಿನ್ನೆಲೆಯನ್ನೂ ಹೇಳಿದರು. ಸರದಾರರು ಎಲ್ಲವನ್ನೂ ಸಾವಧಾನದಿಂದ ಕೇಳಿಕೊಂಡರು. ಅನಂತರ ಬಡೋದೆಯು ಮುಂಬೈಯಲ್ಲಿ ಲೀನವಾದುದರ ಬಗ್ಗೆ ಚರ್ಚೆ ನಡೆದು ಮೈಸೂರೂ ಲೀನವಾಗಬಹುದೇ ಎಂಬ ಬಗ್ಗೆ ಮಾತುಕತೆ ನಡೆದವು. ಶಿಷ್ಟಮಂಡಳದವರು ವಿಲೀನೀಕರಣಕ್ಕೆ ಒಪ್ಪಿಗೆಯನ್ನು ತೋರಿಸಿದರು. ಆದಷ್ಟು ಬೇಗ ಮೈಸೂರನ್ನೊಳಗೊಂಡ ಕರ್ನಾಟಕ ಪ್ರಾಂತವನ್ನು ರಚಿಸಬೇಕೆಂದು ಶ್ರೀ ನಿಜಲಿಂಗಪ್ಪನವರ ನೇತೃತ್ವದಲ್ಲಿ ಹೋದ ಈ ಶಿಷ್ಟಮಂಡಳವು ಕೇಳಿಕೊಂಡಿತೆಂದು ತಿಳಿಯುತ್ತದೆ.

ಪ್ರತಿನಿಧಿಗಳ ಅರ್ಹತೆಗಳು

ಭಾರತದ ಭಾವೀ ರಾಜ್ಯಘಟನೆಯನ್ನು ಕುರಿತು ಘಟನಾ ಸಮಿತಿ ಎರಡು ಬಹಳ ಪರಿಣಾಮಕಾರಿಯಾದ ನಿರ್ಣಯಗಳನ್ನು ಮಾಡಿದೆ. ಅದು ಅಮೇರಿಕನ್ ಮಾದರಿಯ ಪ್ರಜಾತಂತ್ರವನ್ನು ಬಿಟ್ಟು ಉದ್ದೇಶಪೂರ್ವಕವಾಗಿ ಬ್ರಿಟಿಶ ಮಾದರಿಯುದನ್ನು ಆರಿಸಿಕೊಂಡಿದೆ. ಜನತಾ ಸಭೆಗೂ ಸಂಸ್ಥಾನ ಮಂಡಲಕ್ಕೂ (ಕೆಳಮನೆ ಮತ್ತು ಮೇಲ್ಮನೆ) ಪ್ರತ್ಯಕ್ಷ ಚುನಾವಣೆಯನ್ನೂ, ಪ್ರೌಢ ಮತದಾನ ಪದ್ಧತಿಯನ್ನೂ ಅದು ಅಂಗೀಕರಿಸಿದೆ. ಈ ಪ್ರಕಾರ, ಬ್ರಿಟನ್ನಿನಲ್ಲಿ ಹಲ ಶತಮಾನಗಳ ಹೋರಾಟದ ನಂತರ, ಮತ್ತು ಆ ಅವಧಿಯಲ್ಲಿ ಲಿಖಿತ ಘಟನೆಯಷ್ಟೆ ಮಹತ್ವದವಾಗಿ ರೂಪುಗೊಂಡ ಅನೇಕ ರೂಢಿ ಪರಂಪರೆಗಳೊಡನೆ, ಪ್ರಸ್ಥಾಪಿತವಾದ ರಾಜಕೀಯ ಮಟ್ಟವನ್ನು ನಾವು ಒಂದೇ ನೆಗೆತದಿಂದ ಮುಟ್ಟಿದಂತಾಗಿದೆ. ಹೊಸ ರಾಜ್ಯಘಟನೆಯ ಮೇರೆಗೆ ನಡೆಯಲಿರುವ ಚುನಾವಣೆಗಳಲ್ಲಿ ಈ ವರೆಗೆ ಜಗತ್ತಿನ ಇತಿಹಾಸದಲ್ಲಿ ಕಂಡು ಕೇಳರದಷ್ಟು ಸ್ತ್ರೀ ಪುರುಷರು ಭಾಗವಹಿಸುವರು. ಈ ಚುನಾವಣೆಗಳನ್ನು ನಡೆಸಲು ಬಹಳ ಪ್ರಚಂಡವಾದ ಸಂಘಟನೆ ಬೇಕಾಗುವದಲ್ಲದೆ, ಅದಕ್ಕೆ ತಗಲಬಹುದಾದ ವೆಚ್ಚವನ್ನು ಅಂದಾಜು ಮಾಡುವದು ಕೂಡ ಕಠಿನ. ಅಂಥ ಚುನಾವಣೆಗಳ ಫಲಿತಾಂಶವಾದರೂ ಅಷ್ಟೇ ದುರೂಹ್ಯವಾಗಿದೆ.

ಈ ಸಂದರ್ಭದಲ್ಲಿ ಸಹಜವಾಗಿ ಏಳುವ ಪ್ರಶ್ನೆ ಇದು: ಈ ಚುನಾವಣೆಯಿಂದ ಅತ್ಯುತ್ತಮ ಪರಿಣಾಮಗಳೇ ಫಲಿಸಬಹುದೆ? ಅಂದರೆ ಅತ್ಯಂತ ಉತ್ತಮವಾದ ಹಾಗು ಉಪಯುಕ್ತವಾದ ಕಾಯದೆಗಳನ್ನು ಮಾಡಲು ಮತ್ತು ದೇಶದ ಆಡಳಿತೆಯನ್ನು ಅತ್ಯುತ್ತಮವಾದ ರೀತಿಯಲ್ಲಿ ಸಾಗಿಸಿ ನಮ್ಮ ರಾಷ್ಟ್ರೀಯ ಸರಕಾರದಲ್ಲಿ ಜನರು ಇರಿಸಿದ ಘನತರವಾದ ಆಸೆಗಳನ್ನು ಸಾರ್ಥಕಗೊಳಿಸಲು ಅವಶ್ಯವುಳ್ಳ ನೈತಿಕ ಮತ್ತು ಬೌದ್ಧಿಕ ಸಾಮರ್ಥ್ಯಶಾಲಿಗಳೇ ಆರಿಸಲ್ಪಡಬಹುದೆ? ಎಲ್ಲ ಚುನಾವಣೆಗಳಲ್ಲಿಯೂ ಎರಡು ಪ್ರಾಮುಖ್ಯದ ಅಂಶಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳಬೇಕಾಗುವದು: ಮತದಾರರ ಸುಶಿಕ್ಷಿತತೆ ಮತ್ತು ಜಾಗರೂಕತೆಯೊಂದು, ಆರಿಸಲ್ಪಟ್ಟ ಪ್ರತಿನಿಧಿಗಳ ಜನಹಿತಾಕಾಂಕ್ಷೆ ಮತ್ತು ಕರ್ತೃತ್ವಶಕ್ತಿ ಇನ್ನೊಂದು. ಇಪ್ಪತ್ತೊಂದನೆ ವಯಸ್ಸನ್ನು ಮುಟ್ಟಿದ ಪ್ರತಿಯೊಬ್ಬ ನಾಗರಿಕನೂ- ನ್ಯಾಯಸ್ಥಾನದಲ್ಲಿ ಅವನು ಬುದ್ಧಿಭ್ರಮೆ ಹೊಂದಿದವನೆಂದಾಗಲಿ ದಿವಾಳಿಯೆಂದಾಗಲಿ ತೀರ್ಮಾನಿಸಲ್ಪಟ್ಟು, ಅಥವಾ ಕೆಲ ವಿಶಿಷ್ಟ ಅಪರಾಧಗಳಿಗಾಗಿ ಶಿಕ್ಷೆಗೊಳಗಾದ ಮೂಲಕ, ಮತದಾನಕ್ಕೆ ಅನರ್ಹನೆಂದು ಪರಿಗಣಿಸಲ್ಪಟ್ಟರದ ವಿನಾ- ಸುಯೋಗ್ಯ ಪ್ರತಿನಿಧಿಯನ್ನು ಆರಿಸಲು ಅವಶ್ಯವಾದ ಶಿಕ್ಷಣವನ್ನೂ ಬುದ್ಧಿಜಾಗ್ರತೆಯನ್ನೂ ಪಡೆದವನಾಗಿದ್ದಾನೆಂದು ಗೃಹೀತವಾಗಿಟ್ಟುಕೊಂಡು ಘಟನಾ ಸಮಿತಿ ಈಗ ತನ್ನ ತೀರ್ಮಾನವನ್ನು ಮಾಡಿದೆ. ಹೀಗೆ ಗೃಹೀತವಾಗಿಟ್ಟುಕೊಳ್ಳುವದು, ಅದೂ ಈಚೆಗೆ ಇಷ್ಟು ವಿಸ್ತಾರವಾದ ಪರಿಮಾಣದಲ್ಲಿ ಪ್ರಜಾತಂತ್ರಾತ್ಮಕ ಚುನಾವಣೆಗಳನ್ನು ನಡೆಸಿದ ಸಂಪ್ರದಾಯವಾಗಲಿ ಅನುಭವವಾಗಲಿ ನಮಗಿಲ್ಲದಿರುವಾಗ, ದೊಡ್ಡ ಸಾಹಸದ ಮಾತೇ ಸರಿ. ಮತದಾರ ಸಂಘಗಳು ಅಗಾಧವಾಗುವವು. ಸಂಸ್ಥಾನ ಮಂಡಲದ ಮತದಾರ ಸಂಘದಲ್ಲಿ ೭೫೦೦೦ ಜನರಿರಬಹುದು. ಪ್ರತಿಯೊಂದು ಸಂಘಕ್ಕೆ ಒಬ್ಬನೇ ಸದಸ್ಯನೆಂದು ಹಿಡಿದರೆ ಅವರಲ್ಲಿ ೪೦ ೫೦ ಸಾವಿರ ಜನರು ಮತದಾರರಾಗುವರು. ಜನತಾ ಸಭೆಯ ಮತದಾರ ಸಂಘಗಳಂತೂ ಇದಕ್ಕಿಂತ ೧೦ ಪಾಲು ದೊಡ್ಡದಾಗುವವು. ಮತದಾರನಿಗೆ ತನ್ನ ಪ್ರತಿನಿಧಿಯ ಪರಿಚಯ ಮಾಡಿಕೊಂಡು ಅವನ ಮೇಲೆ ನಿಯಂತ್ರಣವನ್ನಿಡಲು ಅಥವಾ ಪ್ರತಿನಿಧಿಗಾದರೂ ತನ್ನ ಮತದಾರರೊಡನೆ ಸಂಪರ್ಕವನ್ನಿಟ್ಟುಕೊಳ್ಳಲು ಸಾಧ್ಯವಾದೀತೆ? ಇಂಥ ಅವಸ್ಥೆಯಲ್ಲಿ ಮತದಾರನು ಹುರಿಯಾಳಿನ ಸರಿಯಾದ ಪರಿಚಯವಿಲ್ಲದೆ ಮತಕೊಡಬೇಕಾದ ಪ್ರಸಂಗವೇ ಹೆಚ್ಚು. ಇತರ ದೇಶಗಳಲ್ಲಿಯೂ ಹೀಗೆ ಇರಬಹುದೆಂದು ತೋರುತ್ತದೆ. ಮತ್ತು ಹುರಿಯಾಳು ಸ್ವಾರ್ಥಪರನೂ ನ್ಯಾಯಾನ್ಯಾಯ ವಿವೇಕಶೂನ್ಯನಾದ ದುಸ್ಸಾಹಸಿಯೂ ಆಗಿರದೆ ಯೋಗ್ಯನೂ ಪ್ರಾಮಾಣಿಕನೂ ಆಗಿದ್ದರೆ, ಮೇಲೆ ಹೇಳಿದ ಮಾತು ಒಂದು ದೊಡ್ಡ ಅಡಚಣೆಯೆನಿಸದು. ಆದರೆ ಹುರಿಯಾಳಿನ ಅರ್ಹತೆಗಳೇನಿರಬೇಕೆಂಬ ಬಗ್ಗೆ ಇನ್ನೂ ಘಟನಾ ಸಮಿತಿ ಯಾವ ನಿರ್ಣಯಕ್ಕೂ ಬಂದಿಲ್ಲ. ಘಟನೆಯ ಕರಡಿನಲ್ಲಾದರೂ ಈ ಕುರಿತು ಯಾವ ಉಲ್ಲೇಖವೂ ಇಲ್ಲ. ಇದನ್ನು ನಾವು ತುಂಬ ಗಂಭೀರವಾಗಿ ಆಲೋಚಿಸುವದು ಅವಶ್ಯವೂ ಯೋಗ್ಯವೂ ಆಗಿದೆ.

ಶಾಸನಸಭೆಗಳ ಕರ್ತವ್ಯ ಕಾಯದೆಗಳನ್ನು ಮಾಡುವದು. ನಾವೀಗ ಒಪ್ಪಿಕೊಂಡಿರುವ ಪದ್ಧತಿಯನ್ನಯ ಅವು ತಮ್ಮ ಪ್ರತಿನಿಧಿಗಳಾದ ಮಂತ್ರಿಗಳ ಮೂಲಕ ಆಡಳಿತೆಯನ್ನೂ ಸಾಗಿಸಿಕೊಂಡು ಹೋಗುವವು. ಮಂತ್ರಿಗಳು ಸಭೆಗಳ ವಿಶ್ವಾಸಕ್ಕೆ ಪಾತ್ರರಿದ್ದಷ್ಟು ಕಾಲ ಮಾತ್ರ ಅಧಿಕಾರದಲ್ಲಿರುವರು. ಮಂತ್ರಿಯ ಆಜ್ಞೆಗಳ ಮೇರೆಗೆ ಅಥವಾ ಅವನು ನಿರ್ದೇಶಿಸಿದ ಧೋರಣವನ್ನನುಸರಿಸಿ ಆಡಳಿತೆಯನ್ನು ನಡೆಸಿಕೊಂಡು ಹೋಗುವ ಸರಕಾರಿ ಅಧಿಕಾರಿ ಯೋಗ್ಯತಾಸಂಪನ್ನನೂ ಆ ವಿಶಿಷ್ಟ ಕಾರ್ಯವನ್ನು ನಿರ್ವಹಿಸಲು ಅವಶ್ಯವಾದ ವಿಶೇಷ ತರಬೇತಿಯನ್ನು ಹೊಂದಿದವನೂ ಇರುವನೆಂಬದು ಸರ್ವವಿದಿತ. ಉದಾಹರಣೆಗಾಗಿ ಪೋಲೀಸು ಅಧಿಕಾರಿಯೂ ಪೋಲೀಸ ಶಿಪಾಯಿಯೂ ಒಂದು ಬಗೆಯಲ್ಲಿ ತರಬೇತಿ ಹೊಂದಿದವರಾಗಿದ್ದರೆ, ಸರಕಾರದ ಆಯವ್ಯಯಗಳಿಗೆ ಸಂಬಂಧಪಟ್ಟ ಅಧಿಕಾರಿ ಲೆಕ್ಕಪತ್ರಗಳಲ್ಲಿ ಯೋಗ್ಯ ತರಬೇತಿ ಹೊಂದಿದವನಾಗಿರುವನು. ಅದೇ ಪ್ರಕಾರ ಇತರ ಶಾಖೆಗಳಿಗೆ ಸಂಬಂಧಿಸಿದ ಅಧಿಕಾರಿಗಳಿಗೆ ಅವರವರ ವಿಶಿಷ್ಟ ತರಬೇತಿಗಳಿವೆ. ಕಾಯದೆಗಳನ್ನು ಅಮಲಿನಲ್ಲಿ ತರುವ ಕರ್ತವ್ಯದಲ್ಲಿ ನಿಯುಕ್ತನಾದ ಅಧಿಕಾರಿಯೂ ಅವನಿಗೆ ಅದರ ನಿರ್ವಹಣದಲ್ಲಿ ನೆರವಾಗಲು ನೇಮಕ ಹೊಂದಿದ ಅಧಿಕಾರಿಯೂ ಇಬ್ಬರೂ ಉತ್ತಮ ಅರ್ಹತೆಗಳನ್ನು ಪಡೆದವರಾಗಿರಬೇಕು. ಹೀಗೆ, ಧೋರಣೆಗಳನ್ನು ಕಾರ್ಯರೂಪಕ್ಕೆ ತರುವ ಮತ್ತು ಆಜ್ಞೆಗಳನ್ನು ಪಾಲಿಸುವ, ಅಥವಾ ಕಾಯದೆಗಳನ್ನು ನಿರ್ವಹಿಸುವ ಅಧಿಕಾರಿಗಳಿಗೆ ಅವಶ್ಯಕ ಅರ್ಹತೆಗಳು ಇರಬೇಕೆಂದಾದರೆ, ಆ ಧೋರಣೆಗಳನ್ನು ಹಾಕಿಕೊಡುವ, ಆಜ್ಞೆಗಳನ್ನು ಹೊರಡಿಸುವ ಅಥವಾ ಕಾಯದೆಗಳನ್ನು ಮಾಡುವ ಪ್ರತಿನಿಧಿಗಳಿಗೆ ವಿಶಿಷ್ಟ ನೈತಿಕ ಮತ್ತು ಬೌದ್ಧಿಕ ಅರ್ಹತೆಗಳಿರಬೇಕೆಂದು ಘಟನೆಯಲ್ಲಿ ಉಲ್ಲೇಖಿಸದಿರುವದು ವಿಚಿತ್ರವೆನಿಸುವದಿಲ್ಲವೆ? ಇದೊಂದು ದೊಡ್ಡ ದೋಷ. ಅದನ್ನು ನಿವಾರಿಸದಿದ್ದರೆ ಗಂಭೀರ ಪರಿಣಾಮಗಳುಂಟಾಗಬಹುದು. ಅವನು ಜನಮತದಿಂದ ಆರಿಸಲ್ಪಡಬೇಕಾಗುವದೇನೋ ನಿಜ; ಆದರೆ ನ್ಯಾಯಾನ್ಯಾಯವಿಲ್ಲದ ಅರ್ಭಟದ ಮುಂದಾಳುಗಳು ನಿಜವಾದ ಜ್ಞಾನವಾಗಲಿ ಸಚ್ಚಾರಿತ್ರವಾಗಲಿ ಇಲ್ಲದಿದ್ದರೂ ತಮ್ಮ ವಾಗಾಡಂಬರದ ಬಲದಿಂದ ಮತದಾರರನ್ನು ಮೋಹಿಸಬಹುದು. ತತ್ವಗಳನ್ನು ಬಿಟ್ಟು ಕೇವಲ ಸಂಕುಚಿತ ಜಾತೀಯ, ಪಂಗಡದ ಅಥವಾ ವೈಯಕ್ತಿಕ ಸ್ವಾರ್ಥದ ತಳಹದಿಯ ಮೇಲೆ ಪಕ್ಷಗಳೂ ಗುಂಪುಗಳೂ ರೂಪುಗೊಳ್ಳುತ್ತಿರುವಾಗ ನಿಜವಾದ ಜನಹಿತಾಕಾಂಕ್ಷಿಗಳಾದ ವ್ಯಾಪಕ ಸಹಾನುಭೂತಿಯೂ ಇಡಿ ದೇಶದ ಅವಶ್ಯಕತೆಗಳ ಅಭಿಜ್ಞಾನವೂ ಉಳ್ಳ ಜನರು ಶಾಸನಸಭೆಗಳಲ್ಲಿರುವದು ಅತ್ಯಂತ ಅವಶ್ಯವಾಗುವದು. ಇದಕ್ಕೆ ಉಚ್ಚ ವರ್ಗದ ಬುದ್ಧಿಸಂಪತ್ತಿಯೂ ನೈತಿಕತೆಯೂ ಬೇಕಾಗುವದು. ಆ ಗುಣಗಳು ಚುನಾವಣೆಗೆ ನಿಲ್ಲುವ ಹುರಿಯಾಳಿನಲ್ಲಿರುವಂತೆ ನೋಡಿಕೊಳ್ಳಬೇಕು.

ಆದರೆ ಇದರಲ್ಲೊಂದು ತೊಡಕುಂಟು. ಇಂಥ ಅರ್ಹತೆಗಳನ್ನು ಎಲ್ಲರಿಗೂ ಸರಿಯಾಗಿ ತಿಳಿಯುವಂತೆ ಮಾತ್ರವಲ್ಲ, ವಿವಾದಗಳಿದ್ದರೆ ನ್ಯಾಯಸ್ಥಾನದಲ್ಲಿ ತೀರ್ಮಾನಿಸಲು ಸಾಧ್ಯವಾಗುವಂತೆ ಸ್ಪಷ್ಟ ರೂಪದಲ್ಲಿ ನಿರ್ದೇಶಿಸುವದು. ಕಷ್ಟದ ಕೆಲಸ. ಹುರಿಯಾಳಿನ ವಯಸ್ಸು ಸುಲಭವಾಗಿ ನಿರ್ಧರಿಸಬಹುದಾದ ಸಂಗತಿ. ಹೆಚ್ಚು ವಯಸ್ಸನ್ನು ಅರ್ಹತೆಗಳಲ್ಲಿ ಸೇರ್ಪಡಿಸಿದರೆ, ಶಾಸನ ಸಭಾಸದನಲ್ಲಿರಬೇಕಾದ ಲೋಕಾನುಭವ ಗುಣಕ್ಕೆ ಅಷ್ಟಿಷ್ಟು ಮಹತ್ವ ಕೊಟ್ಟಂತಾಗಬಹುದು. ಆದರೆ ವಯಸ್ಸೊಂದೇ ಸಾಲದೆಂಬದು ಸ್ಪಷ್ಟವೇ ಇದೆ. ಶಿಕ್ಷಣ ಸಂಪತ್ತಿಯನ್ನೂ ಕೆಲ ವಿಶಿಷ್ಟ ಮಾನಗಳಿಂದ ಗೊತ್ತುಪಡಿಸಬಹುದು. ಉದಾಹರಣೆಗಾಗಿ, ವಿಶ್ವವಿದ್ಯಾಲಯದ ಪದವಿ, ಅಥವಾ ಯಾವುದೊಂದು ಪರೀಕ್ಷೆಯಲ್ಲಿ ತೇರ್ಗಡೆಹೊಂದಿದ ಪ್ರಮಾಣ ಪತ್ರ ಅಥವಾ ಒಂದು ವಿಶಿಷ್ಟ ಸಂಸ್ಥೆಯಲ್ಲಿ ಶಿಕ್ಷಣಹೊಂದಿದ ಸಂಗತಿ. ಈ ನಿಯಮವನ್ನು ಹಾಕಿದರೆ ಕೆಲ ಅತ್ಯಂತ ಬುದ್ಧಿಶಾಲಿ ಗೃಹಸ್ಥರು ಅನರ್ಹರಾಗಬಹುದಷ್ಟೇ ಅಲ್ಲ, ಓದು ಬರಹ ಬಲ್ಲವರೇ ತೀರ ವಿರಳವಾಗಿರುವ ವರ್ತಮಾನ ಕಾಲದಲ್ಲಂತೂ ಬಹುಜನ ನಾಗರಿಕರಿಗೆ ಪ್ರವೇಶವಿಲ್ಲದಂತಾಗುವದು ಖಂಡಿತ. ಆದರೆ ಇದೆಲ್ಲಕ್ಕಿಂತಲೂ ಶಾಸನಸಭಾಸದನ ನೈತಿಕ ಮತ್ತು ಆಧ್ಯಾತ್ಮಿಕ ಅರ್ಹತೆಗಳ ನಿರ್ದೇಶವೇ ತೀರ ಕಠಿನ, ಮತ್ತು ಅದು ಕಠಿನವಿರುವದಷ್ಟೆ ಅವಶ್ಯವೂ ಆಗಿದೆ. ಪ್ರಾಮಾಣಿಕತೆ, ಜನಹಿತಾಕಾಂಕ್ಷೆಯೇ ಮೊದಲಾದ ಗುಣಗಳನ್ನು ಅಳೆಯುವದಾಗಲಿ ನಿರ್ಧರಿಸುವದಾಗಲಿ ಅಸಾಧ್ಯವೇ ಸೈ. ಅವು ಒಬ್ಬನಲ್ಲಿವೆಯೋ ಇಲ್ಲವೋ ಎಂದು ನಿರ್ಣಯಿಸಲು ಅವನ ಜೀವನವೂ ಹಿಂದಿನ ಚರ್ಯೆಗಳೂ ಮಾತ್ರ ಮಾನದಂಡವಾಗಿರಬಲ್ಲವು. ಅವು ಕೂಡ ತುಂಬ ದುಷ್ಕರವಾದ ಮಾನದಂಡಗಳೆ.

ಶಾಸನ ಸಭಾಸದರಿಗಿರಬೇಕಾದ ಅರ್ಹತೆಗಳನ್ನು ವಿಧಿಸುವದು ಸರ್ವಥಾ ಅವಶ್ಯವೆಂಬದನ್ನೂ ಹಾಗೆ ಮಾಡುವದಕ್ಕಿರುವ ಅಡೆತಡೆಗಳನ್ನೂ ಜನರ ಮುಂದಿರಿಸಿ ಗಂಭೀರ ಆಲೋಚನೆಯನ್ನು ಕೆರಳಿಸುವದಕ್ಕಾಗಿ ಈ ಪ್ರಶ್ನೆಯನ್ನು ಇಲ್ಲಿ ಎತ್ತಿದ್ದೇನೆ. ಡಾ. ಭಗವಾನದಾಸರು ಜೀವಮಾನವೆಲ್ಲ ಈ ಪ್ರಶ್ನೆಯನ್ನು ಚಿಂತಿಸಿದ್ದಾರೆ. ಅವರ ನಿರ್ದಿಷ್ಟ ವಿಚಾರಗಳು "Outline Scheme of Swaraj" ಎಂಬ ಪುಸ್ತಕದಲ್ಲಿ ರೇಖಿಸಲ್ಪಟ್ಟಿವೆ. ದೇಶಬಂಧು ಸಿ. ಆರ್. ದಾಸರು ಅವುಗಳನ್ನು ಅಂಗೀಕರಿಸಿದ್ದರು.

ಶ್ರೀಮತಿ ಅನಿಬೆಸಂಟರ ಪ್ರೇರಣೆಯಿಂದ ಸಿದ್ಧಗೊಳಿಸಲ್ಪಟ್ಟ "Commonwealth of India Bill" ನಲ್ಲಿಯೂ ಕೆಲ ಸ್ಪಷ್ಟ ಸೂಚನೆಗಳಿವೆ. "ಹರಿಜನ" ದ ಓದುಗರ ನೆರವಿಗಾಗಿ ಇವೆರಡನ್ನೂ ಪ್ರತ್ಯೇಕವಾಗಿ ಎತ್ತಿಕೊಡಲಾಗಿದೆ. ಇವುಗಳ ಆಧಾರದಿಂದ ನಾವು ಮುಂದುವರಿಯಬಹುದೆಂದು ತೋರುತ್ತದೆ.

೧೩-೨-೪೯ —ರಾಜೇಂದ್ರ ಪ್ರಸಾದ

ಡಾ. ಭಗವಾನದಾಸರ ಸಲಹೆಗಳು

ಮತದಾರರ ಅರ್ಹತೆ

೧. ಭಾರತದಲ್ಲಿ ಕಡೆಯ ಪಕ್ಷ ೭ ವರ್ಷ ಬಾಳಿದ ಪ್ರತಿಯೊಬ್ಬ ೨೫ ವರ್ಷ ವಯಸ್ಸಿನ ಗಂಡಸು ಮತ್ತು ೨೧ ವರ್ಷ ವಯಸ್ಸಿನ ಹೆಂಗಸು ಸ್ಥಳೀಯ ಪಂಚಾಯತಕ್ಕೆ ಮತ ಕೊಡಲು ಹಕ್ಕುಳ್ಳವರಾಗಬೇಕು.

೨. ಸ್ಥಳೀಯ ಪಂಚಾಯತದ ಸದಸ್ಯರು ಜಿಲ್ಹಾ ಪಂಚಾಯತಕ್ಕೆ ಮತ ಕೊಡತಕ್ಕದ್ದು.

೩. ಜಿಲ್ಹಾ ಪಂಚಾಯತದ ಸದಸ್ಯರು ಪ್ರಾಂತಿಕ ಪಂಚಾಯತಕ್ಕೆ ಮತ ಕೊಡಬೇಕು.

೪. ಪ್ರಾಂತಿಕ ಪಂಚಾಯತದವರು ಭಾರತ ಪಂಚಾಯತಕ್ಕೆ ಸದಸ್ಯರನ್ನಾಯ್ದು ಕಳಿಸಬೇಕು.

ಪ್ರತಿನಿಧಿಗಳ ಅರ್ಹತೆ

೫. ನಾಲ್ಕೂ ವರ್ಗಗಳ ಪಂಚಾಯತ ಸದಸ್ಯರು ದೇಶದ ಚಿರನಿವಾಸಿಗಳಾಗಿರಬೇಕು- ಅವರಲ್ಲೂ ಯಾವುದಾದರೂ ವಿಶಿಷ್ಟ ಕ್ಷೇತ್ರದ ಚಿರನಿವಾಸಿಗಳಾಗಿದ್ದರೆ ಮತ್ತೂ ಒಳ್ಳೆಯದು- ಅವರನ್ನು ಧರ್ಮ, ಜಾತಿ, ವರ್ಗ, ಬಣ್ಣ, ಕುಲ, ಲಿಂಗ ಭೇದವಿಲ್ಲದೆ ಆರಿಸಬೇಕು. ಅನಿವಾರ್ಯವಿದ್ದಲ್ಲಿ ಮಾತ್ರ ಧಾರ್ಮಿಕ ಅಥವಾ ಜಾತೀಯ ಪ್ರಾತಿನಿಧ್ಯ ಕೊಡಲು ಅವಕಾಶವಿರಬೇಕು.

೬. ಅಂಥ ಪ್ರತಿನಿಧಿಗಳು ಸಾಮಾನ್ಯವಾಗಿ ೪೦ ವರ್ಷ ವಯಸ್ಸಿಗೆ ಕಡಿಮೆಯಿರದವರಾಗಿರಬೇಕು; ಯಾವುದಾದರೊಂದು ಕ್ಷೇತ್ರದಲ್ಲಿ ಒಳ್ಳೆಯ ಕೆಲಸ ಮಾಡಿದವರಾಗಿರಬೇಕು; ಹಳ್ಳಿಯವರಿದ್ದರೆ ಕಡೆಯ ಪಕ್ಷ ಸಾಕ್ಷರರಿರಬೇಕು. ಪಟ್ಟಣಿಗರಿದ್ದರೆ ವಿದ್ಯಾವಂತರಾಗಿರಬೇಕು. ಮತ್ತು ಭಾರತದ ಮತ್ತು ಪ್ರಾಂತಿಕ ಪಂಚಾಯತಗಳ ಸದಸ್ಯರಾಗತಕ್ಕವರು ಅದೇ ಮೇರೆಗೆ ಇನ್ನು ಹೆಚ್ಚು ವಿದ್ಯಾವಂತರು ಅಥವಾ ತತ್ಸಮಾನವಾದ ತಜ್ಞತೆಯ ಅನುಭವವುಳ್ಳವರು ಎನಿಸಿರಬೇಕು. ಅವರು ಸ್ಪರ್ಧೆಯ ವ್ಯಾಪಾರ ವ್ಯವಹಾರದಿಂದ ಅಥವಾ ಇತರ ಹೊಟ್ಟೆ ಹೊರೆದುಕೊಳ್ಳುವ ಇಲ್ಲವೆ ಹಣ ಗಳಿಸುವ ವೃತ್ತಿಯಿಂದ ನಿವೃತ್ತರಾಗಿದ್ದು, ತಮ್ಮ ಉಳಿತಾಯದಿಂದ ಅಥವಾ ತಮ್ಮ ಕುಟುಂಬ ಇಲ್ಲವೆ ಗೆಳೆಯರ ನೆರವಿನಿಂದ ಬಾಳಲು ಶಕ್ತರಾದವರಾಗಿರಬೇಕು. ತಮ್ಮ ಎಲ್ಲ ವೇಳೆಯನ್ನು ರಾಷ್ಟ್ರದ ಕಾರ್ಯಕ್ಕಾಗಿ ವೇತನವಿಲ್ಲದೆ ವಿನಿಯೋಗಿಸಲು [illegible] ಆದರೆ ತಿರುಗಾಟದ ಮತ್ತು ಇತರ ಅಧಿಕಾರ [illegible] ಹೊರಗಿನ ಕಾರ್ಯಕಲಾಪಗಳ [illegible] ಕಾರ ಕೊಡಬೇಕು. ಬೇಕೆಂದರೆ, ಆ [illegible] ಅವರಿಗೆ ತಮ್ಮ ಕಾರ್ಯಾಲಯದ ಕಾರ್ಯ [illegible] ಮಾಡಲು ಅನುಕೂಲವಾಗುತ್ತದೆ. [illegible] ಆದರೆ ಪಂಚಾಯತದ ಸದಸ್ಯರಿಗೆ [illegible] ನೌಕರರಿಗಿಂತ ಹೆಚ್ಚಿನ ಮನ್ನಣೆ ಕೊಡಬೇ[illegible] ಅಂದರೆ ಆ ಮೂಲಕ ಅವರಿಗೆ ಸಾರ್ವ[illegible] ಸಮಾರಂಭಗಳಲ್ಲಿ ವಿಶೇಷ ಗೌರವ [illegible] ದಂತಾಗಬೇಕು.

೭. ಪ್ರತಿಯೊಂದು ಪಂಚಾಯತದ ಸದಸ್ಯ[illegible] ತಾವು ಆಡಳಿತೆ ಮಾಡಬೇಕಾಗಿರುವ [illegible] ಓಕ ಜೀವನದ ಮುಖ್ಯ ಶಾಖೆಗಳ ಅನುಭ[illegible] ವನ್ನು ಪಡೆದಿರಬೇಕು.

೮. ಯಾವ ವ್ಯಕ್ತಿಯೂ ತಾನೇ ತಾ[illegible] ಹುರಿಯಾಳಾಗಿ ನಿಲ್ಲಕೂಡದು; ಇಲ್ಲವೆ [illegible] ತಾನೇ ಮತ ಕೊಡಬೇಕೆಂದು ಪ್ರಚಾರ[illegible] ಕೂಡದು; ಆದರೆ ಮತದಾರರು ಕೇಳಿ[illegible] ಆಯ್ಕೆ ಹೊಂದಿದರೆ ತಾನು ಕಾರ್ಯ [illegible] ಹಣದ ಭಾರವನ್ನು ಹೊರುವೆನೆಂದು ಬಹಿರಂ[illegible] ವಾಗಿ ಸೂಚಿಸಬಹುದು.

ಡಾ. ಅನಿಬೆಸೆಂಟರ ಸಲಹೆಗಳು

ಪ್ರತಿನಿಧಿಗಳ ಅರ್ಹತೆ

(ಕ) ಹಳ್ಳಿಯ ಪಂಚಾಯತ: ಮತದಾ[illegible] ರಿಲ್ಲ. (ಖ) ತಾಲೂಕುಸಭೆ: ೨೫ ಮತ್ತು ಅ[illegible] ಕ್ಕಿಂತ ಹೆಚ್ಚು ವರ್ಷ ಮತದಾರರಾಗಿದ್ದ[illegible] ಅವರಿಗೆ ಪ್ರಾಥಮಿಕ ವಿದ್ಯಾಭ್ಯಾಸವಾಗಿ[illegible] ಬೇಕು. ಮತ್ತು ಅವರು ಒಂದು ಇಡಿ ಅ[illegible] ಕಾರಾವಧಿ ಕೆಲಸಮಾಡಿದ ಗ್ರಾಮ ಪಂಚಾ[illegible] ಯತಗಳ ಹಿಂದಿನ ಸದಸ್ಯರಾಗಿರಬೇಕು.

(ಗ) ಜಿಲ್ಹಾ ಸಮಿತಿ (ಹಳ್ಳಿಯ) ಅಥ[illegible] ನಗರ ಸಭೆ (ಪಟ್ಟಣದ): ೨೫ ಮತ್ತು ಅ[illegible] ಕ್ಕಿಂತ ಹೆಚ್ಚು ವರ್ಷ ವಯಸ್ಸಿನ ಮತದಾರರು [illegible] ಅವರಿಗೆ ಲೋಅರ್ ಸೆಕಂಡರಿ ಅಥವಾ [illegible] ಮಿಡ್ಲ್ ಸ್ಕೂಲ್ ವಿದ್ಯಾಭ್ಯಾಸವಾಗಿರಬೇಕು. ಅಲ್ಲದೆ ಅವರು ತಾಲೂಕು ಸಭೆ ಅಥವಾ ಪಾ[illegible] ಪಂಚಾಯತಗಳಲ್ಲಿ ಒಂದು ಇಡಿ ಅಧಿಕಾರಾ[illegible] ವಧಿ ದುಡಿದವರಾಗಿರಬೇಕು.

(ಘ) ಶಾಸನ ಸಭೆಯ ಮೇಲ್ಮನೆ: [illegible] ಮತ್ತು ಅದಕ್ಕಿಂತ ಹೆಚ್ಚು ವರ್ಷ ವಯಸ್ಸಿ[illegible] ಮತದಾರರು. ಅವರಿಗೆ ಈ ಕೆಳಗಿನ ಯಾ[illegible] ದಾದರೊಂದು ಅರ್ಹತೆಯಿರಬೇಕು: (೧[illegible] ಹೈಸ್ಕೂಲು ಶಿಕ್ಷಣ ಮುಗಿದಿರಬೇಕು. ಅಥ[illegible] ಅದಕ್ಕೆ ಸಮವಾದ ಸಾಮಾನ್ಯ ಇಲ್ಲ[illegible] ತಾಂತ್ರಿಕ ತರಬೇತನ್ನು ಅವರು ಪಡೆದಿರಬೇಕು. (೨) ಕಡೆಯ ಪಕ್ಷ ಒಂದು ಇಡಿ ಅಧಿಕಾರಾವ[illegible] ಮುಗಿದ ಜಿಲ್ಹಾ ಸಮಿತಿ ಅಥವಾ ನಗರಸಭೆಯ [illegible] ಹಿಂದಿನ ಸದಸ್ಯರಾಗಿರಬೇಕು. ([illegible] ಚೇಂಬರ್ಸ್ ಅಫ್ ಕಾಮರ್ಸ, ಜಮೀನ[illegible] ದಾರರ ಸಂಘ, ಔದ್ಯಮಿಕ ಸಂಘ, ಮಜೂ[illegible] ಸಂಘ ಅಥವಾ ಶಾಸನದಿಂದ ಮನ್ನಿಸಲ್ಪಟ್ಟ[illegible] ಅಂಥ ಇನ್ನಿತರ ಸಂಸ್ಥೆಗಳ ಸದಸ್ಯರು.

(ಙ) ಶಾಸನಸಭೆಯ ಕೆಳಮನೆ: ೨೫ ಮತ್ತು [illegible] ಅದಕ್ಕಿಂತ ಹೆಚ್ಚು ವರ್ಷ ವಯಸ್ಸಿನ [illegible] ಮತದಾರರು.

(ಚ) ಸಿನೆಟ್: ಸಿನೆಟಿನ ಮತದಾರರ [illegible] ಯಲ್ಲಿ ಸೇರಿಸಿಕೊಳ್ಳಬೇಕಾದ ವ್ಯಕ್ತಿ[illegible] ಶಾಸನ ಸಭೆಯ ಕೆಳಮನೆಗೆ ಸದಸ್ಯರಾಗಲು [illegible] ಅರ್ಹನೆನಿಸಿದವನೂ ಪ್ರಸಿದ್ಧ ಸಾರ್ವಜನಿ[illegible] ಸೇವೆ ಮಾಡಿದವನೂ ೩೦ ವರ್ಷ ವಯ[illegible] ಸ್ಸನ್ನು ಮೀರಿದವನು ಆಗಿರಬೇಕು.

(ಟಿಪ್ಪಣಿ: ಡಾ. ಭಗವಾನದಾಸರು ಅಪ್ರ[illegible] ತ್ಯಕ್ಷ ಆಯ್ಕೆಯ ಪಕ್ಷ[illegible]. ಘಟನಾ ಸಮಿತಿ[illegible] ಪ್ರತ್ಯಕ್ಷ ಆಯ್ಕೆಯ ಬಗ್ಗೆ ಅನುಕೂಲವಾ[illegible] ಆಗಲೆ ತೀರ್ಪು ಕೊಟ್ಟಿರುವಾಗ ಅವರ ಯೋಜ[illegible] ನೆಯಲ್ಲಿಯ ೧ ರಿಂದ ೪ ರ ವರೆಗಿನ ಅಂ[illegible] ಗಳನ್ನು ವಿವೇಚಿಸುವ ಅಗತ್ಯವಿಲ್ಲ. [illegible])

ಅಲ್ಪಸಂಖ್ಯಾತರು ಎಂದರ್ಥೇನು? ಈ ಅ[illegible] ತ್ತಿನಲ್ಲಿ ಧೀರರೆಂದು ಹೆಸರಾದ ಆ [illegible] ಜನರು ಅಲ್ಪಸಂಖ್ಯಾತರೇ. ಇಂದು [illegible] ಅನುಭವಿಸುತ್ತಿರುವ ಸಾಮಾಜಿಕ, ರಾಜಕೀಯ[illegible] ಅಥವಾ ಧಾರ್ಮಿಕ ಹಕ್ಕು ಬಾಧ್ಯತೆಗಳಲ್ಲಿ ಅ[illegible] ಅಲ್ಪ ಸಂಖ್ಯಾತರು ತಮ್ಮ ಧೈರ್ಯದ[illegible] ತಪ್ಪೇರುಗಳಿಂದ, ಕ್ಲೇಶಾನುಭವಗಳಿಂದ [illegible] ಸಾಧಿಸಿಕೊಡದುದು ಒಂದೂ ಇಲ್ಲ. ಪ್ರ[illegible] ಯೊಂದು ನೈತಿಕ ಹೋರಾಟದಲ್ಲಿ ಅಗ್ರ[illegible] ರಾದವರು ಅಲ್ಪ ಸಂಖ್ಯಾತರ ಜಗತ್ತಿನ [illegible] ಹಾಸದಲ್ಲಿ ಸಾಧಿಸಲ್ಪಟ್ಟ ಉದಾತ್ತ [illegible] ಲ್ಲವೂ ಅಲ್ಪ ಸಂಖ್ಯಾತರಿಂದಲೇ ಸಾಧಿಸಲ್ಪ[illegible] ಟ್ಟವು.

— [illegible]

ಕಾಂಗ್ರೆಸ್ಸು ಮತ್ತು ರಚನಾತ್ಮಕ ಕಾರ್ಯಕರ್ತರು

(೩)

ಗಾಂಧೀಜಿಯ ಬಯಕೆಯಂತೆ ಕಾಂಗ್ರೆಸ್ಸನ್ನು ರಚನಾತ್ಮಕ ಸಂಸ್ಥೆಯನ್ನಾಗಿ ಪರಿವರ್ತಿಸಲು ಕಾಂಗ್ರೆಸ್ ಧುರೀಣರು ನಿರಾಕರಿಸಿ ಅವರನ್ನು ವಂಚಿಸಿದರು ಎಂಬ ವಿಷಯವನ್ನು ವಿಚಾರಿಸುವಾ. ಈ ಆರೋಪವು ನ್ಯಾಯ್ಯವಾಗಿದೆಯೆ? ರಾಜಕೀಯ ವಿರೋಧಿಗಳು ಅಷ್ಟೇ ಅಲ್ಲ; ಗೆಳೆಯರು ಕೂಡ ಕಾಂಗ್ರೆಸ್ ಧುರೀಣರನ್ನು ಮನಸಾರೆ ಟೀಕಿಸುತ್ತಿರುವರು. ದೊಡ್ಡ ಬರುವಷ್ಟು ಟೀಕಿಸುತ್ತಿರುವರು. ಅದರಲ್ಲಿಯೂ ರಚನಾತ್ಮಕ ಕಾರ್ಯಕರ್ತರು ಕೂಡ ಈ ಬಗೆಯ ಟೀಕೆಯ ಸುರಿಮಳೆ ನಡೆಸಿರುವದು ಅತ್ಯಂತ ಆಶ್ಚರ್ಯಕರವಾಗಿದೆ. ಸದ್ಯದ ಕಾಂಗ್ರೆಸ್ಸಿನಿಂದ ಅವರು ತೀವ್ರ ಅಸಮಾಧಾನ ಹೊಂದಿರುವರು. ಕಾಂಗ್ರೆಸ್ಸನ್ನು ಲೋಕ ಸೇವಕ ಸಂಘವನ್ನಾಗಿ ಮಾರ್ಪಡಿಸದೆ ಇದ್ದುದಕ್ಕೆ ಅಷ್ಟೊಂದು ಅಸಮಾಧಾನ ಅವರಿಗೆ ಆಗಿಲ್ಲ; ಆದರೆ ತಮ್ಮ ಅಪೇಕ್ಷೆಗೆ ತಕ್ಕಂತೆ ರಚನಾತ್ಮಕ ಕಾರ್ಯವನ್ನು ಮಾಡದಿದ್ದುದಕ್ಕೆ ಇಲ್ಲವೆ ಅದಕ್ಕೆ ಸಹಾಯ ಸಲ್ಲಿಸದಿದ್ದುದಕ್ಕೆ ಎಂದು ನನ್ನ ನಮ್ರವಾದ ಅಭಿಪ್ರಾಯವಾಗಿದೆ. ವಿರೋಧಿಗಳ ಇಲ್ಲವೆ ವೈರಿಗಳ ಬುದ್ಧಿಪೂರ್ವಕವಾದ ಅಪಪ್ರಚಾರವನ್ನು ಹೋಗಲಾಡಿಸಲು ಯಾರೂ ಅಷ್ಟೊಂದು ಗಮನ ಕೊಡಲಾರರು. ಆದರೆ ಗೆಳೆಯರು ಮತ್ತು ಸಹಕಾರೀ ಕಾರ್ಯಕರ್ತರಲ್ಲಿ ಉಂಟಾದ ತಪ್ಪು ತಿಳುವಳಿಕೆಯನ್ನು ಹೋಗಲಾಡಿಸಲು ಯತ್ನಿಸುವದು ಅತ್ಯವಶ್ಯವಾಗಿದೆ. ವಿಶೇಷವಾಗಿ ಪರಿಸ್ಥಿತಿಯನ್ನು ಚೆನ್ನಾಗಿ ತಿಳಿದುಕೊಳ್ಳದಿದ್ದುದರಿಂದ ಉಂಟಾದ ತಪ್ಪು ತಿಳುವಳಿಕೆ, ತತ್ಪರಿಣಾಮವಾಗಿ ಉಂಟಾದ ಅಸಮಾಧಾನ ಇವುಗಳನ್ನು ಹೋಗಲಾಡಿಸಲು ಪ್ರಯತ್ನಿಸಬೇಕಾಗುವದು.

ಹಿಂದುಸ್ತಾನವನ್ನು ಪರದಾಸ್ಯದಿಂದ ಮುಕ್ತ ಮಾಡುವ ಕಾಂಗ್ರೆಸ್ಸಿನ ಚಿರಸ್ಮರಣೀಯವಾದ ಪ್ರಯತ್ನವು ೧೯೪೭ ನೇ ಇಸ್ವಿಯ ಅಗಸ್ಟ ೧೫ ಕ್ಕೆ ಫಲಕಾರಿಯಾಯಿತು. ಅಂದು ಅದು ಅರ್ಧಮರ್ಧ ಸ್ವತಂತ್ರವಾಯಿತು. ಆದರೆ ಹಾಗೆ ಹೇಳಿದಾಕ್ಷಣ ಅದು ಮಹಾಕಾರ್ಯವನ್ನು ಸಾಧಿಸಿತು ಎಂದು ಹೇಳಿದಂತಾಗಲಿಲ್ಲ; ಏಕೆಂದರೆ ಹಿಂದುಸ್ತಾನವು ನೈತಿಕ, ಸಾಮಾಜಿಕ ಮತ್ತು ಆರ್ಥಿಕ ಸ್ವಾತಂತ್ರ್ಯವನ್ನು ಪಡೆಯುವರೆಗೆ ಅದು ಗಳಿಸಿದ ರಾಜಕೀಯ ಸ್ವಾತಂತ್ರ್ಯವು ಜನತೆಗೆ ಅಷ್ಟೊಂದು ಪ್ರಯೋಜನಕಾರಿಯಾಗದು. ಈ ಹೊಸ ಧ್ಯೇಯಸಾಧನೆಗಾಗಿ ಕಾಂಗ್ರೆಸ್ಸು ಹಾಗೆಯೆ ಮುಂದೆ ಕಾರ್ಯ ಮಾಡುತ್ತ ಸಾಗಬೇಕೊ ಇಲ್ಲವೆ ಮತ್ತೊಂದು ಸಂಸ್ಥೆಯು ಆ ಕಾರ್ಯವನ್ನು ಮಾಡಬೇಕೊ ಎಂಬ ಪ್ರಶ್ನೆ ಆಗ ಉದ್ಭವಿಸಿತು. ಕಾಂಗ್ರೆಸ್ಸು ವಿಸರ್ಜನ ಹೊಂದಬೇಕು ಮತ್ತು ಈಗ ಅಸ್ತಿತ್ವದಲ್ಲಿ ಇದ್ದ ಇಲ್ಲವೆ ಹೊಸ ರಾಜಕೀಯ ಪಕ್ಷಗಳಿಗೆ ಇಲ್ಲವೆ ಸಂಸ್ಥೆಗಳಿಗೆ ಈ ಕಾರ್ಯವನ್ನು ಒಪ್ಪಿಸಿಕೊಡಬೇಕು ಎಂದು ಕೆಲವರು ಪ್ರತಿಪಾದಿಸಿದರು. ಸದ್ಯದ ಕಾಂಗ್ರೆಸ್ಸು ವಿಸರ್ಜನೆ ಹೊಂದಿ ಲೋಕಸೇವಕ ಸಂಘವಾಗಿ ಹೊರಹೊಮ್ಮಬೇಕು ಎಂದು ಗಾಂಧೀಜಿಯು ಸ್ವತಃ ಅಭಿಪ್ರಾಯಪಟ್ಟರು. ಭಾವೀ ಕಾಂಗ್ರೆಸ್ಸು ಅರ್ಥಾತ್ ಲೋಕಸೇವಕ ಸಂಘವು ಯಾವದೇ ಬಗೆಯ ರಾಜಕೀಯ ಇಲ್ಲವೆ ಪಾರ್ಲಮೆಂಟರಿ ಚಟುವಟಿಕೆಗಳನ್ನು ನಡೆಸಬಾರದು ಅಲ್ಲದೆ ಬೇರೆ ಯಾವದೇ ರಾಜಕೀಯ ಪಕ್ಷಗಳ ಅಥವಾ ಜಾತೀಯ ಸಂಸ್ಥೆಗಳ ಕೂಡ ಅನಾರೋಗ್ಯಕರವಾದ ಸ್ಪರ್ಧೆಯನ್ನು ನಡೆಸಬಾರದು ಎಂಬುದೆ ಹಿಂದಿನ ಮತ್ತು ಮುಂದಿನ ಕಾಂಗ್ರೆಸ ಸಂಸ್ಥೆಯಲ್ಲಿದ್ದ ಮಹತ್ವದ ಭೇದವು. ಕಾಂಗ್ರೆಸ ಧುರೀಣರು ಇವೆರಡೂ ವಿಕಲ್ಪಗಳನ್ನು ಅನುಸರಿಸಲಿಲ್ಲ. ಆದರೆ ಮೂರನೇ ಮಾರ್ಗವನ್ನು ಅಂದರೆ ಹಳೆಯ ಕಾಂಗ್ರೆಸ್ಸಿನಲ್ಲಿಯೆ ನವಚೇತನವನ್ನು ತುಂಬುವುದಕ್ಕಾಗಿ ಅದರ ಹೊಸ ಧ್ಯೇಯ, ಕಾರ್ಯಕ್ರಮ ಮತ್ತು ಹೊಸ ಘಟನೆಯನ್ನು ಜಾರಿಯಲ್ಲಿ ತರಬೇಕೆಂದು ಬಯಸಿದರು. ಇದರಿಂದ ಜನಸಾಮಾನ್ಯನು ಕೂಡ ಅಭಿವೃದ್ಧಿಹೊಂದಲು ಸಂಪೂರ್ಣ ಅವಕಾಶ ಸಿಕ್ಕುವಂಥ ಹೊಸ ಸಮಾಜ ರಚನೆಯನ್ನು ಮಾಡುವ ಮಹತ್ಕಾರ್ಯವನ್ನು ಸಾಧಿಸಲು ಅದನ್ನು ಶಕ್ತವನ್ನಾಗಿ ಮಾಡಬಲ್ಲೆವೆಂದು ಅವರ ಅಭಿಪ್ರಾಯವಾಗಿತ್ತು. ಗಾಂಧೀಜಿಯವರಿಂದಲೆ ಸ್ಫೂರ್ತಿ ಹೊಂದಿ ಸಾರ್ವಜನಿಕ ಸೇವೆಯಲ್ಲಿ ಅವರಿಂದಲೆ ಪ್ರವೃತ್ತರಾದ ಸದ್ಯದ ಕಾಂಗ್ರೆಸ ಧುರೀಣರು ಗಾಂಧೀಜಿಯ ಅಮೋಘವಾದ ವಿವೇಕದಲ್ಲಿ ವಿಶ್ವಾಸವಿಟ್ಟು ಬಹುತರವಾಗಿ ಅವರನ್ನು ಅನುಸರಿಸುತ್ತಿದ್ದುದುಂಟು; ಅಂಥವರಿಗೆ ಸದ್ಯದ ಪರಿಸ್ಥಿತಿಯಲ್ಲಿ ಹೀಗೆ ಮಾಡುವದು' ಸರಿಯೆಂದೆನಿಸಿರದಿದ್ದರೆ ಅದಕ್ಕೆ ಪ್ರಬಲವಾದ ಕಾರಣಗಳು ಇರಲಿಕ್ಕೆ ಬೇಕೆಂಬುದು ನಿಶ್ಚಿತ.

ಕಾಂಗ್ರೆಸ್ಸನ್ನು ವಿಸರ್ಜಿಸಿದ್ದರೆ, ಇಲ್ಲವೆ ಅದನ್ನು ರಚನಾತ್ಮಕ ಸಂಸ್ಥೆಯನ್ನಾಗಿ ಮಾರ್ಪಡಿಸಿದ್ದರೆ ಸ್ವಾಭಾವಿಕವಾಗಿ ಮತ್ತೊಂದು ರಾಜಕೀಯ ಸಂಸ್ಥೆಯು ಅದರ ಸ್ಥಾನವನ್ನು ಆಕ್ರಮಿಸಲಿಕ್ಕೇ ಬೇಕಾಗುತ್ತಿದ್ದಿತು. ಆ ಸ್ಥಾನವೇನು ತೆರವು ಉಳಿಯಲಾಗದು. ಹಾಗಾದರೆ ದೇಶದಲ್ಲೆಲ್ಲ ಅರಾಜಕತೆಯುಂಟಾಗಿ ಹಾನಿಯಾಗಬಹುದು. ಆದರೆ ಹಾಗೆ ಬಯಸಿದ್ದರೂ ಕಾಂಗ್ರೆಸ್ಸಿಗೆ ಅದನ್ನು ಮಾಡುವದು ಶಕ್ಯವಿದ್ದಿತೋ? ದೇಶದ ಆಡಳಿತ ಭಾರವನ್ನು ಅದು ಯಾರಿಗೆ ಒಪ್ಪಿಸಿಕೊಡತಕ್ಕದ್ದು? ಹಿಂದುಸ್ತಾನದ ಜನತೆಯ ಪರವಾಗಿ ಕಾಂಗ್ರೆಸ್ಸು ಈ ಭಾರವನ್ನು ವಹಿಸಿಕೊಂಡದ್ದು. ಅದು ಅದರ ಪವಿತ್ರ ಇಡುಗುಂಟು. ಏಕೆಂದರೆ ೧೯೪೭ ನೇ ಇಸ್ವಿ ಅಗಸ್ಟ ೧೫ ಕ್ಕೆ ಕಾಂಗ್ರೆಸ್ಸಿಗೇ ಅಧಿಕಾರವನ್ನು ಒಪ್ಪಿಸಿ ಕೊಡಲಾಯಿತು. ಕಾಂಗ್ರೆಸ್ಸೇ ಕೇಂದ್ರದಲ್ಲಿ ಮತ್ತು ಪ್ರಾಂತಗಳಲ್ಲಿ ಅಧಿಕಾರ ಸೂತ್ರಗಳನ್ನು ವಹಿಸಿಕೊಂಡಿದ್ದಿತು. ಕಾಂಗ್ರೆಸ್ಸು ಘೋಷಿಸಿದಂತೆ ಸ್ವರಾಜ್ಯದತ್ತ ಸಾಗಿಸಬಲ್ಲದು ಎಂದು ನಂಬಿ ಜನರು ಸ್ವಾತಂತ್ರ್ಯ ಹೋರಾಟದಲ್ಲಿ ಸ್ವಾರ್ಥತ್ಯಾಗ ಮಾಡಿ ಕಷ್ಟನಷ್ಟಗಳನ್ನು ಅನುಭವಿಸಿದರು. ಈ ಸಂಬಂಧದಲ್ಲಿ ಕಾಂಗ್ರೆಸ್ಸು ಜನತೆಗೆ ವಚನ ಕೊಟ್ಟದ್ದಿತು. ಅದುದರಿಂದ ಕಾಂಗ್ರೆಸ್ಸು ಅವೆಲ್ಲ ವಚನಗಳಂತೆ ನಡೆಯಲು ಪ್ರಾಮಾಣಿಕವಾಗಿ ಪ್ರಯತ್ನಿಸದೆ ಒಮ್ಮೆಲೆ ಹಿಂದೀ ರಂಗಭೂಮಿಯಿಂದ ನಿವೃತ್ತರಾದರೆ ಇಲ್ಲವೆ ತನ್ನ ರಾಜಕೀಯ ಚಟುವಟಿಕೆಗಳನ್ನು ಬಿಟ್ಟುಗೊಟ್ಟು ಕೇವಲ ರಚನಾತ್ಮಕ ಚಟುವಟಿಕೆಗಳಲ್ಲಿ ತೊಡಗಿದರೆ ವಿಪರೀತ ಮೋಸ ಮಾಡಿದಂತಾಗುತ್ತಿದ್ದಿತು. ಎಷ್ಟೇ ಲೋಪದೋಷಗಳಿದ್ದರೂ ಕಾಂಗ್ರೆಸ್ಸೇ ಬಹುಸಂಖ್ಯ ಭಾರತೀಯರ ಮನ್ನಣೆಗೆ ಪಾತ್ರವಾದ ಸಂಸ್ಥೆಯಾಗಿದೆ. ಅದರ ಆಜ್ಞೆಗಳನ್ನೆ ಬಹುಸಂಖ್ಯ ಭಾರತೀಯರು ಶಿರಸಾವಹಿಸಿ ಪಾಲಿಸುತಿರುವರು. ಅದುದರಿಂದಲೆ ಜನತೆಯನ್ನು ಸಂಘಟಿಸಿ ಎಲ್ಲರಲ್ಲಿಯೂ ಐಕ್ಯವನ್ನುಂಟುಮಾಡಲು ಅದೊಂದೆ ಸಮರ್ಥವಾದ ಸಂಸ್ಥೆಯಾಗಿದ್ದಿತು. ರಾಷ್ಟ್ರೈಕ್ಯದ ಪ್ರತೀಕವಾಗಿದೆ ಕಾಂಗ್ರೆಸ್ಸು. ೧೯೪೭ ನೇ ಅಗಸ್ಟ ೧೫ ಕ್ಕಿಂತ ಮತ್ತು ಅನಂತರ ಮೊದಲು ಹಿಂದುಸ್ತಾನವು ಎದುರಿಸಬೇಕಾಗಿ ಬಂದ, ಜಗತ್ತಿನ ಇತಿಹಾಸದಲ್ಲಿಯೇ ಅಪೂರ್ವವಾದ ದುರಂತಗಳ ಈ ವಿಷಮ ಪರಿಸ್ಥಿತಿಯಲ್ಲಿ ಆತ್ಯಂತಿಕ ರಾಷ್ಟ್ರೈಕ್ಯವು ಅತ್ಯವಶ್ಯವಾಗಿದೆ. ಈ ರೀತಿಯಾಗಿ ಕಾಂಗ್ರೆಸ್ಸು ತನ್ನ ರಾಜಕೀಯ ಧುರೀಣತ್ವವನ್ನು ಮತ್ತು ಹೊಣೆಗಾರಿಕೆಯನ್ನು ಬಿಟ್ಟು ಕೊಡಲಾರದಾಯಿತು. ಹಾಗೆ ಮಾಡುವದೆಂದರೆ ನಡುನೀರಿನಲ್ಲಿ ಹಡಗವನ್ನು ಮುಳುಗಿಸಿಬಿಟ್ಟಂತೆ ಆಗುತಿದ್ದಿತು.

ಗಾಂಧೀಜಿ ಬಯಸಿದಂತೆ ಕಾಂಗ್ರೆಸ್ಸು ರಚನಾತ್ಮಕ ಸಂಸ್ಥೆಯಾಗಿ ಪರಿಣಮಿಸಿತ್ತೆಂದು ಕ್ಷಣಹೊತ್ತು ಕಲ್ಪಿಸುವಾ. ಪರಿಣಾಮವೇನಾಗುತಿದ್ದಿತು? ನೂರಕ್ಕೆ ತೊಂಬತ್ತು ತೊಂಬತ್ತೊಂದರಷ್ಟು ಕಾಂಗ್ರೆಸ್ಸಿಗರಿಗೆ ಈ ಹೊಸ ಸಂಸ್ಥೆಯಲ್ಲಿ ಸ್ಥಾನ ಸಿಕ್ಕುತಿರಲಿಲ್ಲ ಮತ್ತು ಇಂದು ಕೇಂದ್ರದಲ್ಲಿ ಮತ್ತು ಪ್ರಾಂತೀಯ ಸರಕಾರಗಳಲ್ಲಿ ಅಧಿಕಾರಸ್ಥಾನದಲ್ಲಿದ್ದುಕೊಂಡು ಆಡಳಿತ ನಡೆಸುವಂಥ ಪವಿತ್ರ ಹೊಣೆಯು ಯಾರ ಮೇಲೆ ಬಿದ್ದಿದೆಯೊ ಅಂಥ ಕಾಂಗ್ರೆಸ್ ಪರಿಷ್ಕರಲ್ಲಿ ಬಹುತರ ಎಲ್ಲರೂ ಉರುಳಿ ಹೊಸ ರಾಜಕೀಯ ಪಕ್ಷವನ್ನು ತೆರೆಯುವ ಪ್ರಸಂಗ ಅವರಿಗೆ ಬರುತಿದ್ದಿತು. ಏಕೆಂದರೆ ಪಂಡಿತ ಜವಾಹರಲಾಲ ಮತ್ತು ಸರದಾರ ವಲ್ಲಭಭಾಯಿ ಪಟೇಲರಂಥವರು ತಮ್ಮ ಕರ್ತವ್ಯವನ್ನು ಬಿಟ್ಟುಕೊಡುವದು ಶಕ್ಯವಾಗುತಿರಲಿಲ್ಲ. ಈ ವಿಷಯಗಳಲ್ಲಿ ನಮಗೆ ಸಲಹೆ ಸೂಚನೆಗಳನ್ನು ಕೊಡಲು ಗಾಂಧೀಜಿ ಇಂದು ಜೀವಂತ ಇದ್ದರೆ ಅವರಿಗೆ ಇದ್ದ ಸ್ಥಾನದಲ್ಲಿಯೇ ಉಳಿಯಲು ಕೇಳಿಕೊಳ್ಳುತಿದ್ದರೆಂಬುದು ನಿಶ್ಚಿತ. ಇದು ಅನಿವಾರ್ಯವಾಗುತಿದ್ದಿತು. ಏಕೆಂದರೆ ಕಾಂಗ್ರೆಸ್ಸು ಪ್ರಾರಂಭದಿಂದಲೆ ರಾಜಕೀಯ ಸಂಸ್ಥೆಯಾಗಿದೆ. ೧೯೨೦ ರಲ್ಲಿ ಗಾಂಧೀಜಿಯ ಧುರೀಣತ್ವದಲ್ಲಿ ಅದು ಕ್ರಾಂತಿಕಾರಕ ಸಂಸ್ಥೆಯಾಗಿ ಪರಿಣಮಿಸಿತು. ಮತ್ತು ರಚನಾತ್ಮಕ ಕಾರ್ಯದಲ್ಲಿ ಅದರ ಅಹಿಂಸಾತ್ಮಕ ಶಕ್ತಿಯಿದ್ದಿತೆಂಬುದು ನಿಃಸಂದೇಹವಾಗಿದೆ. ಪರಕೀಯ ಸತ್ತೆಯ ವಿರುದ್ಧ ಅಹಿಂಸಾತ್ಮಕ ಹೋರಾಟವನ್ನು ನಡೆಸಲು ಪಾರ್ಲಮೆಂಟರಿ ಚಟುವಟಿಕೆಗಳನ್ನು ಹಿಂದುಗಡೆ ಅದರ ಕಾರ್ಯಕ್ರಮದಲ್ಲಿ ಸೇರಿಸಲಾಯಿತು. ಗಾಂಧೀಜಿ ಸ್ವತಃ ಹೇಳಿದಂತೆ, ಈ ಪಾರ್ಲಮೆಂಟರಿ ಪ್ರವೃತ್ತಿಯು ಕಾಂಗ್ರೆಸ್ಸಿಗರಲ್ಲಿಉಳಿಯುತಿಷ್ಟೇ ಅಲ್ಲಗಾಂಧೀಜಿ ಪ್ರಾರಂಭಿಸಿದ ಅಹಿಂಸಾತ್ಮಕ ಕ್ರಾಂತಿಯಲ್ಲಿಯೂ ಮಹತ್ವದ ಭಾಗವಾಗಿ ಪರಿಣಮಿಸಿತು. ಈ ಪಾರ್ಲಮೆಂಟರಿ ಚಟುವಟಿಕೆಗಳು ಬಹುಸಂಖ್ಯ ಕಾಂಗ್ರೆಸ್ಸಿಗರನ್ನು ಆಕರ್ಷಿಸಿತು.

೧೯೨೦ ರಲ್ಲಿ ಕಾಂಗ್ರೆಸ್ಸು ಗಾಂಧೀಜಿಯ ಅಹಿಂಸಾತ್ಮಕ ಅಸಹಕಾರ ಮತ್ತು ಸತ್ಯಾಗ್ರಹವನ್ನು ಸ್ವೀಕರಿಸಿದ್ದುದು ಅಂದು ಕೇವಲ ರಾಜಕೀಯ ಸ್ವಾತಂತ್ರ್ಯ ಸಾಧನೆಗಾಗಿ, ಗಾಂಧೀಜಿಯವರ ಜೀವನ ಮಾರ್ಗದ ಇಲ್ಲವೆ ನವಸಮಾಜ ರಚನೆಯ ಮೂಲಭೂತ ತತ್ವವೆಂದು ಅಲ್ಲ ಎಂಬುದನ್ನು ಯಾವಾಗಲೂ ಮರೆಯಲಾಗುತಿದೆ. ಬಹುಸಂಖ್ಯ ಕಾಂಗ್ರೆಸ್ಸಿಗರಿಗೆ ಗಾಂಧೀಜಿ ಮುಖ್ಯವಾಗಿ ರಾಜಕೀಯ ಧುರೀಣರಾಗಿದ್ದರಲ್ಲದೆ ನೈತಿಕ ಗುರುಗಳಾಗಿರಲಿಲ್ಲ. ಅವರ ಕಾರ್ಯಕ್ರಮದಲ್ಲಿಯ ನೈತಿಕ ಮತ್ತು ಶುದ್ಧೀಕರಣದ ಭಾಗವನ್ನು ಬಹುಸಂಖ್ಯ ಕಾಂಗ್ರೆಸ್ಸಿಗರು ಅವರೊಬ್ಬ ಧುರೀಣರೆಂದು ಸ್ವೀಕರಿಸಿದರೆ ಹೊರತು ಅದೊಂದು ಉಚ್ಚ ನೈತಿಕ ಮತ್ತು ಆಧ್ಯಾತ್ಮಿಕ ನಿಯಮವೆಂದಾಗಲಿ ಇಲ್ಲವೆ ಅಂತಃಶ್ರದ್ಧೆಯ ಮೂಲಕವಾಗಲಿ ಸ್ವೀಕರಿಸಲಿಲ್ಲ. ಬೇರೆಯವರಿಗಿಂತ ಗಾಂಧೀಜಿಯವರಿಗೆ ಇದು ಹೆಚ್ಚು ಚೆನ್ನಾಗಿ ಗೊತ್ತಿದ್ದಿತು. ಸರಕಾರೀ ಅಧಿಕಾರ ಮತ್ತು ರಚನಾತ್ಮಕ ಕಾರ್ಯದ ಮುಖಾಂತರ ಜನಸೇವೆಯ ಸಂಬಂಧದಲ್ಲಿ ಬಹುಸಂಖ್ಯ ಕಾಂಗ್ರೆಸ್ಸಿಗರು ಸದ್ಯದಲ್ಲಿ ತಾಳಿದ ಧೋರಣದಿಂದ ಈ ಹೇಳಿಕೆಯ ಸತ್ಯತೆಯು ನಮಗೆ ಕಂಡುಬರುವದು. ಇಂದು ಅವರು ಸೇವೆಗಿಂತ ಅಧಿಕಾರದಲ್ಲಿಯೇ ಹೆಚ್ಚು ಶ್ರದ್ಧೆಯಿಟ್ಟದ್ದನ್ನು ನೋಡುವದು ವಿಷಾದಕರವಾಗಿದೆ.

ಸ್ವರಾಜ್ಯಸಾಧನೆಯ ಕಾರ್ಯಕ್ರಮದ ಒಂದು ಭಾಗವೆಂದು ಕಾಂಗ್ರೆಸ್ಸು ರಚನಾತ್ಮಕ ಕಾರ್ಯಕ್ರಮವನ್ನು ಕೈಕೊಳ್ಳಲಿಲ್ಲ ಎಂದು ಇದರ ಅರ್ಥವಲ್ಲ. ತದ್ವಿರುದ್ಧವಾಗಿ ಪರಕೀಯ ಸರಕಾರದ ಗೂಡ ಅಹಿಂಸಾತ್ಮಕ ಹೋರಾಟ ನಡೆಸಲು ಅವಶ್ಯಕವಾದ ಶಕ್ತಿ ಸಾಮರ್ಥ್ಯಗಳು ಈ ರಚನಾತ್ಮಕ ಕಾರ್ಯದಿಂದಲೇ ಬಂದವು. ಪಂಡಿತಜಿಯವರು ಹೇಳಿದಂತೆ ಖಾದಿಯು ಸ್ವಾತಂತ್ರ್ಯದ ಪರಿವೇಷವಾಗಿದ್ದರೆ ಮತ್ತು ಇಂದು ಅಸ್ಪೃಶ್ಯತೆಯು ಕಾಯಿದೆಯನ್ವಯ ಅಪರಾಧವಾಗಿ ಪರಿಣಮಿಸಿದ್ದರೆ, ಅದಕ್ಕೆಲ್ಲ ಕಾಂಗ್ರೆಸ್ಸು ಗಾಂಧೀಜಿಯ ರಚನಾತ್ಮಕ ಕಾರ್ಯಕ್ರಮಕ್ಕೆ ತನ್ನ ಎಲ್ಲ ಬಗೆಯ ನೈತಿಕ ಮತ್ತು ಭೌತಿಕ ಬೆಂಬಲವನ್ನು ಕೊಟ್ಟದ್ದೆ ಕಾರಣವಾಗಿದೆ.

ಇದೆಲ್ಲ ನಿಜ; ಆದರೂ ಕಾಂಗ್ರೆಸ್ಸಿಗರ ಶಕ್ತಿ ಮತ್ತು ವೇಳೆಯ ಬಹುಭಾಗವು ವಿದೇಶೀ ಪ್ರಭುತ್ವದೊಡನೆ ಹೋರಾಡುವುದರಲ್ಲಿ ಅಥವಾ ಕೇಂದ್ರ ಇಲ್ಲವೆ ಪ್ರಾಂತಿಕ ಶಾಸನಸಭೆಗಳಲ್ಲಿ ಕೆಲಸ ಮಾಡುವುದರಲ್ಲಿ ಕಳೆಯಿತು. ಕೇವಲ ರಚನಾತ್ಮಕ ಕಾರ್ಯಗಳಲ್ಲಿ ಮಗ್ನವಾಗಲು ಕಾಂಗ್ರೆಸ್ಸಿಗೆ ಸಾಧ್ಯವಿದ್ದಿಲ್ಲ. ಅದರ ಹಾದಿಯಲ್ಲಿ ಅನೇಕ ಎಡರುತೊಡರುಗಳಿದ್ದವು. ರಚನಾತ್ಮಕ ಕಾರ್ಯವನ್ನು ಯಶಸ್ವಿಯಾಗಿ ಮಾಡಬೇಕಾದರೆ ಕೆಲವುಟ್ಟಿನ ಶ್ರದ್ಧೆ ಅಥವಾ ನಿಷ್ಠೆ, ವಿವರಗಳತ್ತ ಲಕ್ಷ ಮತ್ತು ಹಿಡಿದ ಕೆಲಸವನ್ನು ಮುಂಬರಿಸುವ ಬುದ್ಧಿ ಇರುವುದು ಮುಖ್ಯವಾದುದು. ಕಾಂಗ್ರೆಸ್ಸು ಹೋರಾಡುವ ಸಂಸ್ಥೆಯಾದುದರಿಂದ ಅದಕ್ಕೆ ಸಾಕಷ್ಟು ಪ್ರಮಾಣದಲ್ಲಿ ಈ ಗುಣಗಳಿದ್ದಿಲ್ಲ. ಗಾಂಧಿಯವರಿಗೆ ಇದು ಗೊತ್ತು. ಆದರಿಂದಲೇ ಅವರು ಕಾಂಗ್ರೆಸ್ಸಿನ ಆಶ್ರಯದಲ್ಲಿ ತಮ್ಮ ರಚನಾತ್ಮಕ ಕಾರ್ಯಕ್ರಮದ ವಿವಿಧ ಅಂಶಗಳನ್ನು ಆಚರಣೆಗೆ ತರಲು ಸ್ವಾಯತ್ತ ಸಮಿತಿಗಳನ್ನು ರಚಿಸಿದರು. ಕಾಂಗ್ರೆಸ್ಸಿನ ಠರಾವುಗಳ ಆಧಾರದಿಂದ ಅ. ಭಾ. ಗ್ರಾಮೋದ್ಯೋಗ ಸಂಘ ಮತ್ತು ಹಿಂದುಸ್ತಾನಿ ತಾಲಿಮಿ ಸಂಘಗಳು ರಚಿತವಾದವು. ರಾಷ್ಟ್ರೀಯ ಪುನರುದ್ಧಾರಕ್ಕಾಗಿ ಜಾತಿ ಪಕ್ಷಾದಿ ಭೇದವಿಲ್ಲದೆ ಎಲ್ಲರ ರಚನಾತ್ಮಕ ಕೌಶಲವನ್ನೂ ಬಳಸಿಕೊಳ್ಳಬಹುದೆಂದು ಗಾಂಧಿಯವರು ಅವನ್ನು ರಾಜಕೀಯ ಮತ್ತು ಜಾತೀಯ ಆವರಣಗಳಿಂದ ಹೊರಗಿಡಲು ಬಯಸಿದರು. ಈ ರಚನಾತ್ಮಕ ಸಂಘಗಳನ್ನು ಕಾಂಗ್ರೆಸ್ಸಿನ ದೈನಂದಿನ ಕಾರ್ಯಗಳಲ್ಲಿಯೂ ಬ್ರಿಟಿಶ ಸರಕಾರದೊಡನೆ ನಡೆಸಿದ ಹೋರಾಟದಲ್ಲಿಯೂ ತೊಡಗಿಸಕೂಡದೆಂಬುದೇ ಅವರ ಧೋರಣವಾಗಿತ್ತು. ಕಾಂಗ್ರೆಸ್ಸು ಮುಖ್ಯವಾಗಿ ಈ ಸಂಘಗಳನ್ನೇ ಆಧರಿಸಿ ನಿಂತಿರಲಾಗಿ ಅವು ಅದು ಪ್ರಾರಂಭಿಸಿದ ವಿವಿಧ ಹೋರಾಟಗಳಲ್ಲಿ ಪ್ರತ್ಯಕ್ಷವಾಗಿ ಭಾಗವಹಿಸಲೇ ಇಲ್ಲ. ಹೋರಾಟದ ಅದ್ಭುತವಾದ ಅಹಿಂಸಾತಂತ್ರದಿಂದಲೇ ಇದು ಸಾಧ್ಯವಾಯಿತು. ಈ ಸಂಘಗಳಲ್ಲಿ ಕೆಲಸಮಾಡುತ್ತಿದ್ದವರಲ್ಲದೆ ತಮ್ಮದೇ ಆದ ಮೂಲಧನದಿಂದ ಗಾಂಧಿಯವರ ಸ್ಫೂರ್ತಿ ಮತ್ತು ಮಾರ್ಗದರ್ಶನಗಳಲ್ಲಿ ಸ್ವತಂತ್ರವಾಗಿ ರಚನಾತ್ಮಕ ಕಾರ್ಯಗಳನ್ನು ಮಾಡಿದ ಇತರರೂ ಇದ್ದಾರೆ. ಅವರು ರಾಜಕೀಯ ಸುಳಿಯಲ್ಲಿ ಎಂದೂ ಸಿಕ್ಕಿಕೊಳ್ಳಬಾರದೆಂದು, ಗಾಂಧಿಯವರು ಯಾವಾಗಲೂ ಬಯಸುತ್ತಿದ್ದರು ಮತ್ತು ಅವರು ಅಂಥ ಅಪೇಕ್ಷೆಯನ್ನು ವ್ಯಕ್ತಮಾಡಿದಾಗ ಹಾಗೆ ಮಾಡದಂತೆ ಅವರಿಗೆ ಬಲವಾಗಿ ಉಪದೇಶಿಸಲು ಪ್ರಯತ್ನಿಸುತ್ತಿದ್ದರು. ಅದರಿಂದಲೇ ಕೆಲ ಅತ್ಯುತ್ತಮರೆನಿಸುವ ರಚನಾತ್ಮಕ ಕಾರ್ಯಕರ್ತರು ಇಂದು ಕಾಂಗ್ರೆಸ್ಸಿನ ಹೊರಗಿದ್ದಾರೆ.

-ಶಂಕರರಾವದೇವ

ಯಂತ್ರೀಕೃತ ಒಕ್ಕಲತನ

ನನ್ನ ಆಸ್ಟ್ರೇಲಿಯನ್ ಗೆಳೆಯರೊಬ್ಬರು ನನಗೆ ಕೈಗಡ ಕೊಟ್ಟ ತಾ. ೧೯-೯-೪೮ ರ "ಹರಿಜನ"ದಲ್ಲಿ "ಹಾಗಾದರೆ ಟ್ರಾಕ್ಟರುಗಳೇಕೆ?" ಎಂಬ ಶ್ರೀ ಡಿ. ಕೆ. ಗುಪ್ತರ ಲೇಖವನ್ನು ಓದಿದೆ. ಟ್ರಾಕ್ಟರುಗಳ ಸಹಾಯವಿಲ್ಲದೆಯೂ ಭಾರತದ ಒಕ್ಕಲತನವನ್ನು ಸುಲಭವಾಗಿ ಯಂತ್ರೀಕೃತ ಮಾಡಬಹುದೆಂದು ಶ್ರೀ ಡಿ. ಕೆ. ಗುಪ್ತರಿಗೆ ಅರಿವಾಗಿಲ್ಲವೋ ಏನೊ. ತವೆನೇಗಿಲು (ಡಿಸ್ಕ್ ಪ್ಲೋ), ಕೊಯ್ಯುವ ಒಕ್ಕುವ ಮತ್ತು ಸೂಡುವ ಸಂಯುಕ್ತ ಯಂತ್ರವೇ ಮೊದಲಾದವುಗಳೇ ವಿವಿಧ ದೇಶಗಳ ಕೃಷಿಯ ಅಭಿವೃದ್ಧಿಯಲ್ಲಿ ಮುಖ್ಯ ಪಾತ್ರವಹಿಸುತ್ತಿವೆ. ಟ್ರಾಕ್ಟರಿನ ಬದಲಾಗಿ ಎತ್ತು ಕುದುರೆಗಳ ಸಾಲುಗಳನ್ನೆ ಉಪಯೋಗಿಸಿದರೂ ಹಾನಿಯಿಲ್ಲ. ನಾವು ಪೆಟ್ರೋಲ್ ಮೊದಲಾದವುಗಳ ತೀವ್ರ ಕೊರತೆಗೆ ಗುರಿಯಾಗಿದ್ದೇವೆಂಬದೊಂದೇ ಕಾರಣದಿಂದ ಇಂಥ ಯಂತ್ರಗಳ ಉಪಯೋಗವನ್ನು ಕಡೆಗಣಿಸಿ ಬಿಡುವದು ಹಿತಕರವಲ್ಲ. ಏಕೆಂದರೆ ಇವುಗಳಿಗೆ ಬೇಕಾಗುವದು ಸ್ವಲ್ಪ ಕಿಲೆಣ್ಣೆ ಮಾತ್ರ. ಹಳೆ ಓಬಿರಾಯನ ಕಾಲದ ಪದ್ಧತಿಗಳನ್ನು ಬಿಟ್ಟು ಕೃಷಿಗೆ ಅಧುನಿಕ ಯಂತ್ರೀಕೃತ ಪದ್ಧತಿಯನ್ನು ಉಪಯೋಗಿಸುವ ಕಾಲ ಬಂದಿದೆ.

ಈ ವಿಚಾರದ ಪೂರ್ವಾಪರಗಳೆಲ್ಲವನ್ನು ವಿಚಾರಿಸಿಯೆ ನಾನೀ ನಿರ್ಣಯಕ್ಕೆ ಬಂದಿದ್ದೇನೆ. ಕೆಲವರಿಟ್ಟುಕೊಂಡ ತಪ್ಪು ತಿಳಿವಳಿಕೆಗಳನ್ನೂ ಟ್ರಾಕ್ಟರಿಗೆ ಅವರು ಕೊಡುವ ಅತಿರೇಕ ಮಹತ್ವವನ್ನೂ ನಿವಾರಿಸಲು ಇದು ಸಹಾಯವಾಗಬಹುದು.

ಡೂವೆನ್ (ಆಸ್ಟ್ರೇಲಿಯಾ) ಎಸ್. ಸಿ. ದಾಸ

ಮುಂಬಯಿ ಸರಕಾರದ ಕೊರತೆಯ ಅಂದಾಜ ಪತ್ರಿಕೆ

ಮುಂಬಯಿ ಸರಕಾರದ ಅರ್ಥಸಚಿವ ಮಾನ್ಯ ವೈಕುಂಠಲಾಲ ಮೆಹತಾ ಇವರು ೨೪ ನೇ ತಾರೀಕು ಅಂದಾಜ ಪತ್ರಿಕೆಯನ್ನು ಮಂಡಿಸಿದರು. ೧೯೪೯-೫೦ ನೇ ಇಸ್ವಿಯ ಈ ಅಂದಾಜ ಪತ್ರಿಕೆಯಲ್ಲಿ ೫೮೪೪೮೦೦೦ ರೂಪಾಯಿ ಕೊರತೆಯಿದೆ. ಇದನ್ನು ಸರಿಪಡಿಸಿಕೊಳ್ಳಲು ನಿರ್ಯಾತ ಸರಕುಗಳ ಮೇಲೆ ರೂಪಾಯಿಗೆ ಮೂರು ಪೈಯಂತೆ ಕರಕೂಡಿಸಲಾಗುವದು. ಬಂಗಾರ ಬೆಳ್ಳಿ ವ್ಯವಹಾರದ ಮೇಲೆ ಸ್ಟ್ಯಾಂಪ ಕರ, ಪತ್ರಿಕೆಗಳ ಜಾಹೀರಾತ ಮೇಲೆ ರೂಪಾಯಿಗೆ ಒಂದಾಣೆಯಂತೆ ಕರ ಮತ್ತು ವಿದ್ಯುಚ್ಛಕ್ತಿಯ ಉಪಯೋಗದ ಮೇಲೆ ಹೆಚ್ಚಿನ ಕರ ಹೀಗೆ ಕರ ಹೇರಿ ೪ ಕೋಟಿ ೧೦ ಲಕ್ಷ ರೂ ಉತ್ಪನ್ನ ಹೆಚ್ಚಿಸಿಕೊಂಡು ೧೧೫೩೦೦೦ ರೂ. ಉಳಿತಾಯವಾಗುವದು.

ನಿಮ್ಮ ಪದಕ ಪದವಿ ಬಿರುದು ಬಾವಲಿಗಳನ್ನು ದೇವರ ಪರೀಕ್ಷಿಸಿ ನೋಡುವದಿಲ್ಲ. ಅವನು ನೋಡುವದು ನಿಮ್ಮ ಮೈಮೇಲಿನ ಗಾಯದ ಕಲೆಗಳನ್ನು.

-ಎಲ್ಬರ್ಟ ಹ್ಯುಬರ್ಡ

ರೂಪರಂಗ

ಸಿನೆಮದಲ್ಲಿ ಶಿಶುಹತ್ಯೆ

ಸಿನೆಮ ತಯಾರಿಸುವ ಸ್ಟೂಡಿಯೋ ಅಥವಾ ಚಿತ್ರಾಲಯಗಳಲ್ಲಿ ನಡೆದ ಕೆಲ ಅಂಶಗಳು ಚಿತ್ರ ಪರಿಪೂರ್ಣವಾಗಿ ಪರದೆಯ ಮೇಲೆ ಬಿದ್ದಾಗ ಅದರಲ್ಲಿ ಕಾಣಿಸುವುದಿಲ್ಲ. ಆ ಅಂಶಗಳು ನಡೆಯುವುದು ಪರದೆಯ ಮರೆಯಲ್ಲಿ ಎಂಬುದನ್ನು "ಫಿಲ್ಮಿಂಡಿಯ"ದ ಸಂಪಾದಕರು ಬಯಲಿಗೆಳೆದಿದ್ದಾರೆ.

ನಿರ್ಮಾಪಕರು ಬಂಡವಾಲಸ್ಥರು. ತಮಗೆ ಬೇಕಾದವರನ್ನು ಬೇಕಾದಷ್ಟು ಸಂಬಳ ಕೊಟ್ಟು ಬೇಕಾದ ಕೆಲಸಕ್ಕೆ ಇಟ್ಟುಕೊಳ್ಳಬಲ್ಲರು. ಆದುದರಿಂದ ಎಂಥ ಶ್ರೇಷ್ಠ ನಟನಟಿಯರಿದ್ದರೂ ಅವರು ಅವರಿಗೆ ಅನಿವಾರ್ಯರಲ್ಲ. ಹೀಗಿರುವಾಗ ಚಿಲ್ಲರೆಯವರ ಮಾತೇಷ್ಟರದು? "ಎತ್ತುಗಳು ಸತ್ತರೆ ಬೇರೆಯವನ್ನು ಕೊಳ್ಳುವೆ. ಗಾಡಿ ಹಾಳಾದರೆ ಬೇರೆಯದನ್ನು ಮಾಡಿಸುತ್ತೇನೆ. ನೀನು ಸತ್ತರೆ ನಿಮ್ಮಪ್ಪ ಬರುತ್ತಾನೆ ಸಂಬಳ ಕೊಟ್ಟರೆ" ಎಂದು ತನ್ನ ಗಾಡಿಯವನಿಗೆ ಗಾಡಿಯನ್ನು ಗೋಡೆಯ ಮೇಲೆ ಹಾಯಿಸೆಂದು ಅಜ್ಞಾಪಿಸಿದ ಶಕಾರನ ದರ್ಪ ಕೆಲವು ನಿರ್ಮಾಪಕರಿಗಿರುತ್ತದೆ. ಅದರಿಂದಲೇ ಅವರು ಕಥಾಸಂದರ್ಭದಲ್ಲಿ ಶಿಶು ಬೇಕೆನಿಸಿದರೆ ಅಚೀಚಿನ ಕೂಲಿಕುಂಬಳಿಯ ಹೆಂಗಸರಿಗೆ ೫-೧೦ ರೂಪಾಯಿಗಳನ್ನಿತ್ತು ಅವರ ಕಂದರನ್ನು ತಂದು ಚಿತ್ರನಿರ್ಮಿತಿಗೆ ಬಳಸಿಕೊಳ್ಳುತ್ತಾರೆ. ಹಾಗೆ ಬಳಸಿಕೊಳ್ಳುವಾಗ "ಮಾತೃದೇವೋಭವ" ಪ್ರಶಂಸೆಗೆ ಕೃತಯುಗದಲ್ಲಿ ಪಾತ್ರರಾಗಿದ್ದ ಲಿಂಗಕ್ಕೆ ಸೇರಿದ ನಟಿಯರ ಮತ್ತು ಇತರರ ಅಜಾಗ್ರತೆಯಿಂದ ಅದಕ್ಕೆ ಎಷ್ಟೋ ವೇಳೆ ಮರಣಾಂತಿಕ ಅಪಘಾತಗಳು ಸಂಭವಿಸುತ್ತವೆ. ಅಗ ಡಾಕ್ಟರರಿಂದ ಅದು ಸ್ವಾಭಾವಿಕ ಮರಣವೆಂದು ಹೇಳಿಕೆಯನ್ನು ಬರೆಸಿಕೊಂಡು ಅವುಗಳ ತಾಯ್ತಂದೆಯರಿಗೆ ಅಲ್ಪಸ್ವಲ್ಪ ಕಾಸು ಕೊಟ್ಟು ಕಳಿಸಿಬಿಟ್ಟರೆ ಕೆಲಸ ಮುಗಿಯಿತು. ಇಂಥ ಸಂಗತಿಗಳು ಗುಪ್ತವಾಗಿ ಪ್ರತಿನಿತ್ಯವೂ ಒಂದಲ್ಲ ಒಂದು ಕಡೆ ನಡೆಯುತ್ತಿದೆ ಎಂಬುದು ತಂತಮ್ಮ ನಿವೃತ್ತಿಗಾಗಿ ಹೋಗುವ ಸಿನೆಮ ಪ್ರೇಕ್ಷಕರಿಗೇನು ಗೊತ್ತು? ಈ ಮಕ್ಕಳನ್ನು ಹೆತ್ತ ಹೊಟ್ಟೆಗಳ ದನಿ ತೀರ ಕ್ಷೀಣವಾದದ್ದಿರುವುದರಿಂದ ಅದು ನ್ಯಾಯಾಲಯ, ಸರಕಾರ ಮತ್ತು ಜನತೆಯ ಕಿವಿಗಳಿಗೆ ಮುಟ್ಟುವುದು ಅಸಾಧ್ಯ.

ಆದರೆ ಈ ಶಿಶುಗಳ ಸಾವು ಯಾವಾಗಲೂ ಆಕಸ್ಮಿಕವೆಂಬುದಾದರೂ ನಿಜವೇ? ನಿಜವಾಗದು. ಅದಕ್ಕೆ ಸಾಮಾನ್ಯ ಕಾರಣಗಳು ಕೆಳಗಿವೆ:

(೧) ಬಡವಾದ ಕಾಹಿಲೆಯುಳ್ಳ ಮತ್ತು ಅಪುಷ್ಟ ಮಕ್ಕಳನ್ನೇ ಹೆಚ್ಚು ಪಕ್ಷ (ಸುಲಭ ಸಾಧ್ಯವೆಂದು) ತರುವುದರಿಂದ ಅವಕ್ಕೆ ಸಿನೆಮ ಕೆಲಸದ ಶ್ರಮವನ್ನು ಸಹಿಸಲು ಸಾಧ್ಯವಾಗುವುದಿಲ್ಲ.

(೨) ದುರ್ಬಲವಾದ ಮಕ್ಕಳಿಗೆ ಚಿತ್ರಗ್ರಹಣಕ್ಕೆ ಉಪಯೋಗಿಸುವ ಪ್ರಖರವಾದ ವಿದ್ಯುದ್ದೀಪಗಳ (ಸುಮಾರು ೧೦,೦೦೦ ಕ್ಯಾಂಡಲ್ ಪವರಿನ) ಪ್ರಭೆಯನ್ನು ತಡೆದುಕೊಳ್ಳಲು ಅಶಕ್ಯವಾಗುತ್ತದೆ.

(೩) ಅಳುವ ಮಕ್ಕಳು ಸಿನೆಮದ ಮಾತುಕತೆಗಳಿಗೆ ವಿಘ್ನಕಾರಿಗಳೆನಿಸುವುದರಿಂದ ಅವನ್ನು ಗ್ರಾಹ್ಯವನ್ನಾಗಿ ಮಾಡಲು ಬಡತಾಯಂದಿರು ಅವಕ್ಕೆ ಚೆನ್ನಾಗಿ ಅಫೀಮು ತಿನ್ನಿಸಿ ಬಿಡುತ್ತಾರೆ. ಇದರಿಂದ ಎಷ್ಟೋ ವೇಳೆ ಅವು ದೀರ್ಘನಿದ್ರೆ ಹಿಡಿಯುತ್ತವೆ. ಬಡತನದ ಹೆಂಡತಿ ಅಜ್ಞಾನವೆಂದ ಮೇಲೆ ಅವು ಒಂದನ್ನೊಂದು ಬಿಟ್ಟಿರಬಲ್ಲವೇ?

(೪) ಕೈಯಿಂದ ಕೈಗೆ ಯದ್ವಾತದ್ವಾ ಎತ್ತಿ, ಇಳಿಸಿ ಮಾಡುವುದರಿಂದ ಸಂಜೆಯೊಳಗೆ ಮಕ್ಕಳು ದಣಿದು ಬಾಡಿ ಬಸವಳಿದು ಹೋಗುತ್ತವೆ.

(೫) ಯಾವಾಗಲೂ ಮಕ್ಕಳಿಗೆ ಒಳ್ಳೆಯ ಗಾಳಿ ಬೇಕಾಗುವುದು. ಆದರೆ ಚಿತ್ರಾಲಯಗಳಲ್ಲೆಲ್ಲ ಸಾಮಾನ್ಯವಾಗಿ ವಾಯುವಿಗೆ ದಿಗ್ಬಂಧನ ಹಾಕಿರುತ್ತದೆ. ಆದುದರಿಂದ ಅಲ್ಲಿಯ ಕೆಟ್ಟ ವಾತಾವರಣ ಮಕ್ಕಳನ್ನು ಅನಾರೋಗ್ಯಕ್ಕೆ ಗುರಿಪಡಿಸುವುದು.

(೬) ಮಕ್ಕಳ ಆರೋಗ್ಯ ನಿರೀಕ್ಷಣೆಗಾಗಿ ಯಾವ ಚಿತ್ರಾಲಯದಲ್ಲಿಯೂ ಡಾಕ್ಟರು ಅಥವಾ ನರ್ಸಮ್ಮಂದಿರನ್ನು ಇಟ್ಟಿರುವುದಿಲ್ಲ. ಬಡವರಿಗೆ ವಿಧಿಯೇ ನರ್ಸಮ್ಮ, ಯಮನೇ ವೈದ್ಯರಾಜ. ಈ ಬಗ್ಗೆ ಸಿನೆಮ ನಿರ್ಮಾತೃಗಳು ಸಂಪೂರ್ಣ ಅಲಕ್ಷ್ಯ ಮಾಡುತ್ತಾರೆ.

ಮೇಲಿನ ಕಾರಣಗಳನ್ನು ನಿವಾರಿಸುವುದು ಅಸಾಧ್ಯವಲ್ಲ. ಹಾಗೆ ನಿರ್ಮಾತೃಗಳಿಂದ ಪರಿಹಾರ ಮಾಡಿಸಲು ಸರಕಾರ ಸೊಂಟಕಟ್ಟಿ ನಿಲ್ಲಬೇಕು. ಏಕೆಂದರೆ, ಕವಿತೆಯೊಂದರಲ್ಲಿ

"ಕೋಳಿಯ ಕೊಯ್ವರಿ ಕೇಳುವರುಂಟೆ,
ಕುರಿಯನು ಕಡಿದರೆ ಕರಳುವರುಂಟೆ,
ಗುಬ್ಬಿ ಪೂನವನ ಕೊಯ್ದರು ಕೊಂದರು
ಕಡಿದರು ಏನು?"

ಎಂದು ಯುದ್ಧವನ್ನು ವಿಡಂಬಿಸಿದಂತೆ ಈ ಶಿಶುಹತ್ಯಾಕಾಂಡವು ಯಾವ ಪ್ರಾಣಿದಯಾ ಸಂಘಕ್ಕೂ ಅಹಿಂಸಾವ್ರತಿಗಳಿಗೂ ಲಕ್ಷ್ಯಕ್ಕೆ ಬರಲಿಲ್ಲ; ಬಂದರೂ ನಿಲ್ಲಿಸುವುದು ದುಃಸಾಧ್ಯ.

– ಶಿಶುಪಾಲ



'ಚಾಂದ್ ಸಿತಾರೇ' ಚಿತ್ರದಲ್ಲಿ ರಾಜನ್ ಹಸ್ಕರನು ಮನೋರಮೆಗೆ "ಅದೋ ನಮ್ಮ ಸ್ವಪ್ನ ರಾಜ್ಯ" ಎಂದು ತೋರಿಸುತ್ತಿದ್ದಾನೆ.

ಡಾ. ಜಯಕರರೂ ಪುರಾಣಪುರುಷರೂ

ಪೌರಾಣಿಕ ಚಿತ್ರಗಳ ಬಗ್ಗೆ ರೈಟ್ ಆನರಬಲ್ ಡಾ. ಎಂ. ಆರ್. ಜಯಕರರು ಈ ಕೆಳಗಿನಂತೆ ಅಭಿಪ್ರಾಯಪಡುತ್ತಾರೆ:

"ಸೆಲ್ಯೂಲಾಯಿಡಿನ ಮೇಲೆ ನಮ್ಮ ಸಾಧುಸಂತರು ಮಾಡುವ ಪವಾಡಗಳು ನನಗೆ ಭಯಂಕರ ಚಿತ್ರಹಿಂಸೆಗಳಾಗಿವೆ. ನನ್ನನ್ನು ಕೇಳಿದರೆ ಈ ಸಾಧು ಸಂತರನ್ನೂ ಪೌರಾಣಿಕ ಪುರುಷರನ್ನೂ ಅವರ ಪಾಡಿಗೆ ಅವರಿರಲೆಂದು ನಿಷ್ಠುರವಾಗಿ ಒತ್ತಟ್ಟಿಗೆ ದೂರ ಇಟ್ಟಿರಬೇಕೆಂದು ಹೇಳುತ್ತೇನೆ. ಈ ಪ್ರೇಮ ಗೌರವಾಸ್ಪದರಾದ ಪೂಜ್ಯ ಮಹಾಪುರುಷರನ್ನು (ಮಹಾ ಮಹಿಳೆಯರನ್ನು) ಚಿತ್ರದಲ್ಲಿ ಪವಾಡ ಮಾಡುವವರನ್ನಾಗಿ ತೋರಿಸಲಾಗುತ್ತದೆ. ಪವಾಡಗಳು ಅವರು ಮಾನವಕುಲಕ್ಕೆ ಮಾಡಿದ ಸೇವೆಯಲ್ಲಿ ಅತ್ಯಲ್ಪ ಅಂಶಗಳು. ಇಂಥ ಅತ್ಯುಕ್ತಿಬದ್ಧವಾದ ಕಲ್ಪನಾ ಕೌತುಕಗಳನ್ನು ನಾವು ವಾಙ್ಮಯದಲ್ಲಿ ಓದಿದರೆ ಅಷ್ಟೇ ಸಾಕು. ಅವರಿಗಿವೆಯೆಂದು ಹೇಳಲಾದ ಅತಿಮಾನುಷ ಶಕ್ತಿಗಳನ್ನು ಸೆಲ್ಯೂಲಾಯಿಡಿನ ಮೇಲೆ ಅಮರಗೊಳಿಸುವುದು ಬೇಡ. ಜನತಾಶಿಕ್ಷಣಕ್ಕೆ ಇಂದು ಅಗತ್ಯವಾದುದು ವಿಚಾರವಾದ; ತನ್ನ ವ್ಯಕ್ತಿವಿಕಾಸದ ಶಿಖರವನ್ನು ಮುಟ್ಟಲು ಮಾನವಕುಲ ಮಾಡುವ ಪ್ರಯತ್ನದಲ್ಲಿಯ ಒಂದು ವಿಶ್ವಾಸ, ಶ್ರದ್ಧೆ. ಚಿತ್ರದಲ್ಲಿ ಕೇವಲ ಮರ್ತ್ಯರಾದ ನಮ್ಮ ಮುಂದೆ ಸಾಧು ಸಂತರಿಂದಲೂ ಪೌರಾಣಿಕ ವೀರರಿಂದಲೂ ಅಮರ್ತ್ಯ ಪೌರುಷ ಸಾಹಸಗಳನ್ನು ಮಾಡಿಸಿದರೆ ನಮಗೂ ಅವರಿಗೂ ಯೋಜನಾಂತರ ದೂರ ಉಂಟಾಗಿ, ಅವರ ಬಾಳಿಂದ ನಾವು ಏನನ್ನೂ ಕಲಿತು ಅನುಸರಿಸಲಾರದಾಗುವೆವು; ನಮ್ಮ ವಿಚಾರವಂತಿಕೆಗೆ ಅದರಿಂದ ಕುಠಾರಾಘಾತ ಬೀಳುವುದು. ಅವರನ್ನು ಮಾನವರಿಗೆ ಯೋಗ್ಯರಾದ ಆದರ್ಶರಾಗುವಂತೆ ಚಿತ್ರಿಸಿದರೆ ಅವರಿಗೂ ಅವರ ಭಜಕರಿಗೂ ನಡುವೆ ಅಷ್ಟು ಅಂತರ ಉಳಿಯುವುದಿಲ್ಲ. ಅದರಿಂದ ಮಾನವರಿಗೆ ಅಮರ ಆದರ್ಶವನ್ನು ಹಿಡಿದು ಸಾಧಿಸಬೇಕೆಂಬ ಲವಲವಿಕೆಯುಂಟಾಗಿ, ಆ ಮಾರ್ಗದಲ್ಲಿ ಅವರು ನಡೆವಂತೆ ಪ್ರಚೋದನೆ ಸಿಗುವುದು. ಭಾರತೀಯರಂಥ ಭಾವನಾಪ್ರಧಾನ ಜನಗಳ ರಾಷ್ಟ್ರೀಯ ಪೂರ್ವಗ್ರಹಗಳನ್ನು ತಿದ್ದಬೇಕಾದರೆ, ವಾಸ್ತವವೆನಿಸುವ ಚಿತ್ರಗಳು ಇಂದು ಅತ್ಯವಶ್ಯಕ. ಅಂಧಶ್ರದ್ಧೆಯ ಮೂಲೋತ್ಪಾಟನ ಮಾಡಲು, ಪವಾಡಗಳನ್ನು ಸಿಡಿದೊಡೆಯಲು ಮತ್ತು ಜೀವನದ ವ್ಯವಹಾರದಲ್ಲಿ ವಿಚಾರಪರತೆಯನ್ನು ಒಡಮೂಡಿಸಿ ಬೆಳೆಯಿಸಲು ಸಿನೆಮಗಳು ತಮ್ಮ ಪಾಲಿನ ಕರ್ತವ್ಯವನ್ನು ಮಾಡಲು ಮುಂದೆ ಬರಬೇಕು."

ಬ್ಯಾರಿಸ್ಟರರ ಮೇಲಿನ ಮಾತನ್ನು ಶಾಂತಾರಾಮರೂ ಬಾಬುರಾವ್ ಪೈಗಳೂ ವಿರೋಧಿಸಿದ್ದಾರೆಂದು ಸುದ್ದಿ. ಹಾಗಾದರೆ ಅವರಿಗೆ ವಿಚಾರಶಕ್ತಿ ನ್ಯೂನವಾಗಿದೆಯೆನ್ನದಿರಲಾಗದು. ಹಿಂದಿನಿಂದ ನಡೆದು ಬಂದಂತೆ ಅಜ್ಞಾನಿಗಳನ್ನು ಅಜ್ಞಾನಿಗಳನ್ನಾಗಿಯೇ ಇಟ್ಟು ಅವರಿಗೆ ಸುಳ್ಳು ಹೇಳಿ ವಂಚಿಸಿ ಬುದ್ಧಿವಂತರಾದ ಶಾಸ್ತ್ರಜ್ಞರು ಜಗತ್ತನ್ನು ನಡೆಸಿಕೊಂಡು ಹೋಗಬೇಕೆಂಬ ಅವೈಜ್ಞಾನಿಕ ಮತ ಅವರದಾಯಿತು. ತತ್ತ್ವಜ್ಞಾನಿಗಳ ನಾಡೆಂದು ಹೆಸರಾದ ಭಾರತದ ಜನರನ್ನು ಈ ದುಷ್ಪ್ರವೃತ್ತಿಯಿಂದಲೇ ಸ್ತ್ರೈಣರನ್ನಾಗಿಯೂ ನಿರಾಶಾವಾದಿಗಳನ್ನಾಗಿಯೂ ಪೌರುಷಹೀನರನ್ನಾಗಿಯೂ ಮಾಡಿ ಅಧೋಗತಿಗಿಳಿಸಲಾದ ಐತಿಹಾಸಿಕ ಸಂಗತಿಯನ್ನು ಉಕ್ತವಿರೋಧಕರು ನ್ಯಾಯ್ಯವೂ ಅನುಕರಣೀಯವೂ ಎಂದು ಹೇಳುವರೆಂದಾಯಿತು. ಇದನ್ನು ಎಲ್ಲರೂ– ಅವರಲ್ಲೂ ಹಿಂದುಳಿದವರೆನಿಸಿದ ಸ್ತ್ರೀ, ಶೂದ್ರ, ವೈಶ್ಯಾದಿಗಳು– ಪ್ರತಿಭಟಿಸದಿದ್ದರೆ, ಬ್ಯಾರಿಸ್ಟರರ ವಿಚಾರವಿವೇಕವನ್ನು ಗ್ರಹಿಸಿ ತಕ್ಕ ಸುಧಾರಣೆಗೆ ಯತ್ನಿಸದಿದ್ದರೆ ಭಾರತಕ್ಕೆ ಬೆಳಕನ್ನು ಕಾಣುವ ಸುಯೋಗ ಸದ್ಯಕ್ಕಂತೂ ಬರಲಾರದು.

— ವಿಚಾರಚಂದ್ರ



ಭಾರತದಲ್ಲಿ ಹಾರಾಡಲು ಕೊಂಡಿರುವ ಬ್ರಿಟಿಶ ವ್ಯಾಂಪಾಯರ ವಿಮಾನ

ವಜ್ರೇಶ್ವರಿಯ ಬಿಸಿನೀರ ಕುಂಡಗಳು

(೫ನೆಯ ಪುಟದಿಂದ)

ವರೆ ಹಲವರಿಗೆ ರಾಮನಾಮದಂತೆ. ಶ್ರೀಗಳವರಿಗೆ ತಮ್ಮ ಇರವಿನ ಪ್ರಚಾರ ಬೇಕಾಗಿಲ್ಲ. ಇವರಿಂದಾಗಿ ಅಲ್ಲಿನ, ಆ ಊರಿನ ಅಂದರೆ ವಜ್ರೇಶ್ವರಿಯ ಸರ್ವಾಭ್ಯುದಯವಾಯಿತಂತೆ. ಮಕ್ಕಳೆಂದರೆ ಅವರಿಗೆ ಪ್ರಾಣ. ಯಾವಾಗ ಕಂಡರೂ ಭಾವನಾಜೀವಿಯಾಗಿ, ಯೋಚಿಸುತ್ತ ಇರುವ ಅವರು ತಮ್ಮ ಸಮಯವನ್ನು ಮಕ್ಕಳೊಡನೆ ಮಾತುಗಳಿಗಾಗಿ ಕಳೆಯುವರು. ಅಸುಪಾಸಿನ ಮಕ್ಕಳೆಲ್ಲಾ ಅಲ್ಲಿ ಬಂದು ಕಲೆಯುವುವು. ಅವರಿಗಾಗಿ ಸ್ವಾಮಿಯವರೇ ಒಂದು ಶಾಲೆಯ ಏರ್ಪಾಡು ಮಾಡಿರುತ್ತಾರೆ. ದಿನಾಲೂ ಸ್ವಾಮೀಜಿಯವರ ದರ್ಶನಕ್ಕೆ ನೂರಾರು ಜನರು ಬರುತ್ತಾರೆ. ಅವರೆಲ್ಲರನ್ನೂ ತಿಳಿಯಾದ ಮಾತುಗಳಿಂದ ಬುದ್ಧಿಪ್ರಾಮಾಣಿಕತೆಗಳಿಂದ ಕೂಡಿದ ಬೌದ್ಧಿಕ ವಿಚಾರಗಳಿಂದ ಮನ್ನಿಸಿ ಕಳುಹುತ್ತಾರೆ. ಸೋಗುಗಳನ್ನು ಕಟ್ಟಿಕೊಂಡು ತಮ್ಮ ಸ್ವಾರ್ಥಸಾಧನೆಗಳ ಯಶಸ್ಸಿಗೆಂದು ಹೋಗುವ ಜನತೆಯದೆ. ಗದರಿಸಿ, ಅಂತಹ ಜನರನ್ನು ಅಟ್ಟಿದುದೂ ಉಂಟೆಂದು ಕೇಳಿದೆ. ಸ್ವಾಮಿಯವರ ಮಹತ್ಕಾರ್ಯಗಳ ಕುರಿತು ನಾ... ಕತೆಗಳಿವೆ. ಅವರು ... ವನ್ನೆಲ್ಲ ತಿರುಗಿರುವಂತೆ. ಅಂಗ್ಲಭಾಷೆ... ಳಗೊಂಡು ಹಲವಾರು ಭಾಷಾಜ್ಞಾನ ... ಗಿದೆ. ಜಿಡುವು ಮಾಡಿಕೊಂಡು, ... ಅವರು ರಾಜಕೀಯ ವಿಚಾರಗಳಲ್ಲೂ ... ಮಾಡುವರೆಂದು ತಿಳಿದುಬಂತು. ... ಒಂದೇ ಮಾತಿನಲ್ಲಿ ಹೇಳುವುದಾದರೆ ... ದಾಗಿ ವಜ್ರೇಶ್ವರಿಯ ಮಹತ್ವವು ಇಮ್ಮಡಿ... ಯಿತೆನ್ನಬಹುದು.

ಒಂದು ಪ್ರಸಂಗ

ಧರ್ಮಛತ್ರದಲ್ಲಿ ರಾತ್ರಿಯನ್ನು ಕಳೆದೆ. ... ದಿಂಗಳು ಆಕಾಶದಲ್ಲಿನ ನಕ್ಷತ್ರಗಳನ್ನೆಲ್ಲಾ ... ಸುವಂತಿತ್ತು. ಅವನ್ನೆಲ್ಲ ದಿಟ್ಟಿಸಿ ನೋಡು... ನಾನು ಸೃಷ್ಟಿಯ ವಿಚಿತ್ರವನ್ನೆಲ್ಲ ಯೋಚಿ... ತಿದ್ದೆ. ನಿದ್ದೆಯ ಕಣ್ಣುಗಳು ಕಾಡುತಿದ್ದು... ಅದಾಗಲೇ "ಕೊಂಯ್‌ಕೊಂಯ್" ಎಂ... ಕೆಮ್ಮಿದನೊಬ್ಬ. ರೋಗಿಯೊಬ್ಬ ಹತ್ತಿರ... ಮಲಗಿದ್ದ. ಎದ್ದು ಬಿದ್ದು ಎಂಬಂತೆ ಅವ... ಕೆಮ್ಮಿ ಕೆಮ್ಮಿ ಕರಗುತಿದ್ದ. ನನ್ನ ದೃಷ್ಟಿ... ಅತ್ತ ಹೊರಳಿದುದು ಮಾತ್ರವಲ್ಲದೆ ಅ... ದೇಹಾರೋಗ್ಯವನ್ನು ಕುರಿತು ಒಂದೆ... ಮಾತುಗಳನ್ನು ಕೇಳಬೇಕೆಂಬ ... ನನಗಾಯಿತು. "ಔಷಧಿಯನ್ನು ಮಾಡಿ... ಲ್ಲವೇ? ಮುಂಬಯಿಗಾದರೂ ಹೋಗಿ ಎಕ್ಸ್... (X-Ray) ಚಿತ್ರವನ್ನು ತೆಗೆದು ... ಪರೀಕ್ಷೆ ಮಾಡಬಹುದಾಗಿತ್ತು" ಎಂದೆಲ್ಲ ... ಕೇಳಿದಾಗ ಕಣ್ಣೀರಿಳಿಸಿತಾ ವ್ಯಕ್ತಿ.

"ಇಲ್ಲ–ಇಲ್ಲ. ಅದೀಗ ನಾನು ... ವನ್ನೂ ಮಾಡಿಸಿದೆ. ನಾನೊಬ್ಬ ಕ್ಷಯರೋಗಿ... ಯೆಂದು ಸಿದ್ಧಪಡಿಸಿದರು. ... ಯಿಯ ಕ್ಷಯರೋಗಿ ಆಸ್ಪತ್ರೆಗಳಲ್ಲೊಂದ... ದರೂ ಜಾಗ ನನಗಿಲ್ಲವಂತೆ. ಪ್ರಯಾಸದಿಂ... ಇಲ್ಲಿಗೆ ಬಂದೆ. ಸ್ವಾಮಿಯವರನ್ನು ... ದಿನಾಲೂ ಕುಂಡದ ನೀರನ್ನು ಕುಡಿ– ನೀ... ನೆಟ್ಟಗಾಗುವೆ— ದೇವರು ನಿನಗೆ ಒಳ್ಳೆ... ಮಾಡಿಯಾನು ಎಂದು ಆಶೀರ್ವದಿಸಿದರವ... ಸ್ವಾಮೀ, ನಾನು ಬಡ. ಬಂಧು ಬಳಗವೆಂ... ನನಗೆಲ್ಲರೂ ಇದ್ದರು. ಆದರೆ ಇಂದು– ನನ್ನ ... ಕಾಣಲು, ನನ್ನ ಶುಶ್ರೂಷೆಗೆ ಈ ನೀರೇ ... ದೇವರೇ–" ಎಂದಾಗ ಅವನ ಕೊರಳ... ತುಂಬಿ ಬಂತು. ಅವನು ತುಂಬಾ ಅತ್ತ.

"ಗೆಳೆಯಾ— ದೇವರು ದೊಡ್ಡವನಲ್ಲವೆ ... ಅಳಬೇಡ" ಎಂದು ನನ್ನೊಡನಿದ್ದವರೊಬ್ಬ... ತಿಳಿಸಿ ಹೇಳಿದಾಗ ಹಿತವೆನಿಸಿತವನ ಅತ್ತ ಕ್ಕೆ...

ಸೃಷ್ಟಿಯ ನಿಯಮವು ವಿಚಿತ್ರ. ಪ್ರಕೃತಿಯ ಪ್ರಭಾವವು ಅಸಾಧಾರಣ. ಇಲ್ಲಿನ ನಿಸ... ಮಾನವೂ ಚೆಲುವಾಗಿದೆ. ಬಡವನ ಪಾಲಿಗೆ ... ಮತ್ತೇನು ಬೇಕು. ಅವನು ಗುಣಮುಖ... ನಾದಾನು.

ಬಡವರು ಬಲ್ಲಿದರೆಂಬ ಭೇದವೇನೂ ಅಲ್ಲಿಲ್ಲ. ಶ್ರೀಮಂತರಿಗೆ ಬೇಕಾದರೆ ಅಲ್ಲೇ ... ಗಟ್ಟಲೆ ಉಳುಕೊಳ್ಳುವ ಕೆಲವು ಆರೋಗ್ಯ ವಿಹಾರ ಕೇಂದ್ರಗಳೂ (Sanatoriums) ಇವೆ. ಅಂತೂ ಬೆಳಗಿನ ಜಾವದಲ್ಲಿ ಚಂದ್ರನು ಮುಳುಗಿವಂತೆ ಸೂರ್ಯೋದಯವನ್ನು ... ಮೀಯುತಿದ್ದಂತೆ ಕಂಡ ನನಗೆ ಮತ್ತೆ ನಾ... ಬೇಡವೆನಿಸಿತು. ಮತ್ತೆ ಮನೆಗೆ ಹೋದಾಗಲೂ ಅದೇ ಸ್ಮರಣೆ.

ನಿಜಾಮರು ಹಿಂದುಸ್ತಾನ ಸರಕಾರಕ್ಕೆ ಒಪ್ಪಿಸಿ ಕೊಟ್ಟ ಸರಾಫ ಇ. ಖಾಸವನು ಸರಕಾರವು ವಶಪಡಿಸಿಕೊಂಡಿತು. ಇದರಿಂದ ... ಕೋಟಿ ರೂಪಾಯಿ ಉತ್ಪನ್ನ ಬರುತ್ತದೆ.

ವಾರದ ಭವಿಷ್ಯ

[illegible] ಬೆಳಗಾವಿ

ಫೆಬ್ರುವರಿ ತಾ. ೨೮ ರಿಂದ ಮಾರ್ಚ ೬ ರ ವರೆಗೆ

ಮೇಷ

[illegible] ನಿಮಗೆ ಸಾಮಾನ್ಯವಾಗಿ ಹಿತಕರ [illegible] ಹೇಳಲ್ಪಡುತ್ತದೆ. ಮಕ್ಕಳಿಗೆ ಸ್ವಲ್ಪ ಅಸ್ವಸ್ಥತೆ [illegible] ಉದ್ಯೋಗದಲ್ಲಿ [illegible] ಪ್ರತಿಷ್ಠೆ [illegible] ವಾದ, ಸ್ಪರ್ಧೆಗಳಲ್ಲಿ [illegible] ಆದರೆ ಮಿತ್ರರಲ್ಲಿ ವಿರೋಧ. [illegible] ಮತ್ತು ಪತ್ರವ್ಯವಹಾರ ಅನುಕೂಲ. [illegible] ಅಶ್ವಿನಿಯ ೪ ನೇ ಮತ್ತು ಭರಣಿಯ [illegible] ಚರಣಗಳು [illegible] ಕೊಳ್ಳದೆ ಜೌಮುಜಕ್ಕೆ [illegible] ತಾ. [illegible] ಮತ್ತು ೬ ಅನುಕೂಲ.

[illegible] ಸುಖಾಂತಿಗೆ ಗುರು [illegible] ಪ್ರವೇಶಿಸಿ ಅಲ್ಲಿ [illegible] ಕೊನೆಯ ವರೆಗೆ [illegible] ನಿಮಗೆ ಅಧಿಕಾರ [illegible] ಮತ್ತು ಲೌಕಿಕ ಕೀರ್ತಿಯನ್ನೂ ಧನ, [illegible] ಸಮೃದ್ಧಿಯನ್ನೂ ಕೊಡುವನು. ಆದರೆ [illegible] ಕ್ಲೇಶ, ಮಿತ್ರರಲ್ಲಿ ವಿರೋಧ [illegible] ಬಹುದಲ್ಲದೆ ನೀವೆಣಿಸಿದಷ್ಟು ಧನ [illegible] ಮನಸು ಅಸಂತುಷ್ಟವಾದೀತು.

ವೃಷಭ

[illegible] ಪ್ರಕೃತಿ ಅಷ್ಟು ಚೆನ್ನಾಗಿರ [illegible]. ಉಳಿದವರದು ವಾಸಿ. ಮಕ್ಕಳ ಏಳಿಗೆ [illegible] ಆದರೂ ಸಂಸಾರಸುಖ ಅಷ್ಟ [illegible]. ಸ್ಥಾವರದಲ್ಲಿ ಕುಸು ಅಭಿವೃದ್ಧಿ. [illegible] ಅದಕ್ಕಾಗಿ ತುಂಬ ಒಜ್ಜಾಟ. [illegible]ದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮಧ್ಯಮ [illegible] ಲಾಭ ಉತ್ತಮ. ವಾದ ಸ್ಪರ್ಧೆಗಳಲ್ಲಿ [illegible] ಸೊಕ್ಕು ಮುರಿದರೂ ನಿಮಗೆ [illegible]. ಯಶಸ್ಸೂ ಅಷ್ಟೇನೂ ಸಿಕ್ಕದು. [illegible] ಉತ್ಕರ್ಷ. ಆಪ್ತರಲ್ಲಿ [illegible]. ಭೆಟ್ಟಿಗಿಂತ ಪತ್ರವ್ಯವಹಾರ ಲೇಸು. [illegible] ೪ ನೇ ಮತ್ತು ರೋಹಿಣಿಯ [illegible] ಮೂರು ಚರಣಗಳಿಗೆ ತೊಂದರೆ [illegible]. ತಾ ೨೮, ೧, ೨ ಮತ್ತು ೬ ಅನು[illegible].

[illegible] ನೆ ಸ್ಥಾನಕ್ಕೆ ಬಂದ ಗುರು ಭಾಗ್ಯ, ಕೀರ್ತಿ [illegible], ಮಿತ್ರ, ಸಂತತಿ, ದಾಯಾದ್ಯರಿಗೆ [illegible] ಕಾರಣನಾಗುವನು. ಮನಸ್ಸ [illegible] ಪ್ರವ್ಯಲಾಭವೂ ಉತ್ತಮ. ಆದರೆ [illegible] ಗಳಿಗೆ ಮಾತ್ರ ಕ್ಲೇಶ.

ಮಿಥುನ

[illegible] ನಿಮ್ಮ ಪತ್ನಿಯದೂ ಚೆನ್ನಾಗಿ [illegible]. ೬ಂದ ಮೇಲೆ ಸಂಸಾರಸುಖ ಅಷ್ಟ [illegible]. ಮಕ್ಕಳು ಸೌಖ್ಯವಾಗಿರುವರು. [illegible] ಆಸ್ತಿ ಹೆಚ್ಚುವದು, ಉದ್ಯೋಗದಲ್ಲಿ [illegible] ಪ್ರಗತಿ ಪ್ರತಿಷ್ಠೆ ಉತ್ತಮ. ಆದರೂ ಮನಸಿನಲ್ಲಿ ಏನೋ ಒಂದು ಕೊರತೆ. ವಾದ, ಸ್ಪರ್ಧೆಗಳಲ್ಲಿ ಅನುಕೂಲತೆ. ಮಿತ್ರಸುಖವೂ ಒಳಿತು. ಭೆಟ್ಟಿ ಅನುಕೂಲ, ಪ್ರವಾಸ ಪತ್ರ ವ್ಯವಹಾರ ಅಷ್ಟು ಪ್ರಯೋಜನಕಾರಿಯಲ್ಲ. ಮೃಗಶಿರೆಯ ೪ ನೆ ಮತ್ತು ಆರ್ದ್ರೆಯ ಮೊದಲಿನ ೩ ಚರಣಗಳಿಗೆ ತೊಂದರೆ ಕಡಿಮೆ. ತಾ. ೨೮, ೧, ೨ ಮತ್ತು ೫ ಅನುಕೂಲ.

ಅಷ್ಟಮದ ಗುರು ನಿಮ್ಮ ಪ್ರಕೃತಿಗೆ ಸ್ವಲ್ಪ ತೊಂದರೆ ಕೊಡಬಹುದು. ಹೆಂಡತಿ ಮಕ್ಕಳಲ್ಲಿ ವಿರೋಧ. ಆಶ್ರಯದಾತರಿಗೆ ಕಷ್ಟ. ಆದರೆ ಸ್ಥಾವರ ಜಂಗಮ ಆಸ್ತಿಗಳಲ್ಲಿ ಹೆಚ್ಚಳ, ಸಾಂಸಾರಿಕ ಉತ್ಕರ್ಷ, ಸತ್ಕಾರ್ಯಗಳಲ್ಲಿ ಧನ ವ್ಯಯ ಇತ್ಯಾದಿ ಫಲಗಳುಂಟಾದಾವು.

ಕರ್ಕ

ಈ ವಾರ ನಿಮಗೆ ಸಾಮಾನ್ಯವಾಗಿ ದುಷ್ಫಲಗಳೇ ಹೆಚ್ಚಾಗಿವೆಯೆಂದು ವಿಷಾದದಿಂದ ಹೇಳಬೇಕಾಗುವದು. ಪ್ರಕೃತಿ ನೆಟ್ಟಗಿಲ್ಲ. ಹೆಂಡತಿ ಮಕ್ಕಳ ವಿರೋಧ. ಉದ್ಯೋಗದಲ್ಲಿ ಅಪೇಕ್ಷಿತ ಸಿದ್ಧಿಯಾಗುವದಾದರೂ ಪ್ರತಿಯೊಂದು ಸಂಗತಿಯಲ್ಲಿಯೂ ಅತ್ಯಂತ ತ್ರಾಸ. ವಾದ ಸ್ಪರ್ಧೆಗಳಲ್ಲಿ ಮಧ್ಯಮ ಸ್ಥಿತಿ. ಸ್ವಲ್ಪ ಅನಿರೀಕ್ಷಿತ ಲಾಭದ ಯೋಗವುಂಟು. ಪತ್ರ ವ್ಯವಹಾರದಿಂದ ಕಾರ್ಯಸಿದ್ಧಿ. ಪುಷ್ಯದ ೪ ನೆ ಮತ್ತು ಆಶ್ಲೇಷದ ಮೊದಲಿನ ೩ ಚರಣಗಳಿಗಂತೂ ತುಂಬ ಕಾಟ. ತಾ ೧, ೨ ಮತ್ತು ೬ ಅನುಕೂಲ.

ಸಪ್ತಮದ ಗುರುವಿನಿಂದಾಗಿ ಶತ್ರುಗಳೂ ಕಲಹಗಳೂ ಹೆಚ್ಚಿದರೂ ಯಶೋಲಾಭವಾಗುವದು. ಸ್ತ್ರೀಸುಖ ಉತ್ತಮ.

ಸಿಂಹ

ಸರ್ವ ಪ್ರಕಾರದಲ್ಲಿ ಧೈರ್ಯವನ್ನು ಅವಲಂಬಿಸುವದೇ ನಿಮಗೆ ಈ ವಾರ ತರಣೋಪಾಯ. ಏಕೆಂದರೆ ಮನೆಯಲ್ಲಿ ನೀವು ಮೊದಲ್ಗೊಂಡು ಎಲ್ಲರಿಗೂ ಜಡ್ಡುಜಾಪತ್ಯ, ಒಲ್ಲದ ಜನರು ಗಂಟುಬೀಳುವದು, ಉದ್ಯೋಗದಲ್ಲಿ ಒಣ ಪ್ರತಿಷ್ಠೆ ಹೊರತು ಲಾಭಕ್ಕೆ ಸೊನ್ನೆಯೆನಿಸುವದು, ಮಿತ್ರರೊಡನೆ ಜಗಳ, ನಿಮ್ಮ ಮಕ್ಕಳೇ ನಿಮ್ಮನ್ನು ಕಲುಷಿತ ಬುದ್ಧಿಯಿಂದ ನೋಡುವದೇ ಮೊದಲಾದ ಕಾಪತ್ರಯ ಪರಂಪರೆಗಳನ್ನು ನೀವು ಎದುರಿಸುವ ಪ್ರಸಂಗ ಬರಬಹುದು. ವಾದ ಸ್ಪರ್ಧೆಗಳಲ್ಲಿ ಮಧ್ಯಮಸ್ಥಿತಿ, ಸ್ಥಾವರದಲ್ಲಿ ಹಾನಿ, ಪ್ರವಾಸದಲ್ಲಿ ತೊಂದರೆ. ಆದರೆ ಭೆಟ್ಟಿ ಅನುಕೂಲ. ಮಘೆಯ ೪ ನೆ ಮತ್ತು ಪೂರ್ವದ ಮೊದಲ ಮೂರು ಚರಣಗಳು ತುಂಬ ಕಷ್ಟಕ್ಕೊಳಗಾಗಬೇಕಾದೀತು. ತಾ. ೪, ೫, ೬ ಹಿತ.

ಷಷ್ಠ ಗುರುವಿನಿಂದ ಶತ್ರುಗಳ ಮೇಲ್ಗೈ, ಮಕ್ಕಳಿಗೆ ಕಲ್ಯಾಣ, ಆದರೆ ಅವರ ವರ್ತನೆ ಮಾತ್ರ ಅಸಮಂಜಸ, ಸ್ವಜಾತಿ ವಿರೋಧ, ಅನಾರೋಗ್ಯ, ಶುಭಕಾರ್ಯಗಳಲ್ಲಾದರೂ ಅತಿರೇಕ ವೆಚ್ಚ ಇತ್ಯಾದಿ ಫಲಗಳು.

ಕನ್ಯಾ

ಮಿಶ್ರ ಫಲಯುಕ್ತವಾದ ಈ ವಾರದಲ್ಲಿ ಸ್ವಂತದ ಮತ್ತು ಹೆಂಡತಿಯ ಆರೋಗ್ಯ ಒಳಿತಾದರೂ ಮಕ್ಕಳದು ಕೆಡುವದು. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಲಾಭಗಳು ಅಷ್ಟಕ್ಕಷ್ಟೆ. ಸ್ವತಂತ್ರ ವೃತ್ತಿಯನ್ನವಲಂಬಿಸಿದವರಿಗಿಂತ ನೌಕರಿ ಮಾಡುವವರಿಗೆ ಅನುಕೂಲ. ಖರ್ಚು ಹೆಚ್ಚಾದರೂ ಇಷ್ಟಸಿದ್ಧಿ. ಸಿಕ್ಕಾಬಟ್ಟೆ ಕನಸುಗಳು ಮಿತ್ರರು ತಿರುಗಿ ಬೀಳುವರು. ವಾದ ಸ್ಪರ್ಧೆಗಳಲ್ಲಿ ವೆಚ್ಚ ತುಂಬ. ಆದರೂ ಯಶ ಸ್ವಲ್ಪ. ಪ್ರವಾಸ ತೊಂದರೆಯದು, ಭೆಟ್ಟಿಯಿಂದ ಕಾರ್ಯಹಾನಿ, ಪತ್ರವ್ಯವಹಾರದಿಂದ ಕಾರ್ಯಸಾಧನೆಯಾದೀತು. ಉತ್ತರದ ೪ ನೆ ಮತ್ತು ಹಸ್ತದ ಮೊದಲ ೩ ಚರಣಗಳಿಗೆ ತುಂಬ ತೊಂದರೆ. ತಾ. ೧, ೨ ಮತ್ತು ೬ ಅನುಕೂಲ.

ಪಂಚಮದ ಗುರು ಲಾಭ, ಭಾಗ್ಯಗಳನ್ನೂ ವಾದವಿವಾದಗಳಲ್ಲಿ ಯಶಸ್ಸನ್ನೂ ಬೌದ್ಧಿಕ ಪ್ರಗತಿ, ಚಿತ್ತಶುದ್ಧಿಗಳನ್ನೂ ಕೊಡುವನು.

ತುಲಾ

ನಿಮ್ಮ ಮಕ್ಕಳಿಗೆ ಅಪಘಾತಯೋಗವಿದೆ. ಆದರಿಂದ ಅವರು ಎಚ್ಚರಿಕೆ ವಹಿಸಬೇಕು. ಉಳಿದುದೆಲ್ಲ ಇಚ್ಛಾನುಸಾರ. ಉದ್ಯೋಗದಲ್ಲಿ ಲಾಭ, ಉತ್ತಮ, ಪ್ರತಿಷ್ಠೆ ಮಧ್ಯಮ. ಸ್ಥಾವರದಲ್ಲಿ ಅನುಕೂಲ ಮಾತುಕತೆಗಳು. ಆದರೆ ಅವುಗಳಲ್ಲಿ ಒಂದು ಕೈತಪ್ಪಿಹೋಗುವ ಸಂಭವ. ವಾದ ಸ್ಪರ್ಧೆಗಳಲ್ಲಿ ನಿಮ್ಮ ಅಸ್ಥಿರ ಬುದ್ಧಿಯಿಂದಲೇ ಕಾರ್ಯ ಕೆಡುವದು. ಪ್ರವಾಸಕ್ಕಿಂತ ಪತ್ರವ್ಯವಹಾರ ಲೇಸು. ಚಿತ್ರೆಯ ೪ನೆ ಮತ್ತು ಸ್ವಾತಿಯ ಮೊದಲ ೩ ಚರಣಗಳಿಗೆ ಹೆಚ್ಚು ಅನುಕೂಲ. ತಾ. ೨೮, ೪ ಮತ್ತು ೫ ಹಿತಕರ.

ಚತುರ್ಥ ಗುರುವಿನಿಂದ ತಾಯಿ ಮತ್ತು ತತ್ಸಮಾನ ಹಿರಿಯರಿಗೆ ಕ್ಲೇಶ, ಆಪ್ತರಲ್ಲಿ ವಿರೋಧ, ಸ್ವಲ್ಪ ಲಾಭಕ್ಕಾಗಿ ತುಂಬ ಕಷ್ಟಪಡುವದೇ ಮೊದಲಾದ ಫಲಗಳು. ಪ್ರತಿಮಾತಿನಲ್ಲಿಯೂ ಪರಾಧೀನತೆ. ಆದರೆ ಪಾರಮಾರ್ಥಿಕ ವಿಷಯದಲ್ಲಿ ಪ್ರಗತಿ.

ವೃಶ್ಚಿಕ

ನಿಮ್ಮ ಪ್ರಕೃತಿ ಮಧ್ಯಮಸ್ಥಿತಿಯಲ್ಲಿದ್ದರೂ ಹೆಂಡತಿಯದು ಉತ್ತಮ. ಪ್ರಾಪಂಚಿಕ ಸುಖ ಸಾಮಾನ್ಯ. ಆದರೆ ಮಕ್ಕಳ ಉನ್ನತಿ. ಉದ್ಯೋಗದಲ್ಲಿ ಪ್ರಗತಿ ಲಾಭ ಉತ್ತಮವಾದರೂ ಪ್ರತಿಷ್ಠೆ ಕಡಿಮೆ. ವಾದ ಸ್ಪರ್ಧೆಗಳಲ್ಲಿ ತೊಂದರೆ, ವೆಚ್ಚ ತುಂಬಾ ಆದರೂ ಅಭೀಷ್ಟ ಸಿದ್ಧಿ. ಪತ್ರವ್ಯವಹಾರ ಅನುಕೂಲ. ಅನುರಾಧೆಯ ೪ ನೆ ಮತ್ತು ಜ್ಯೇಷ್ಠಾದ ಮೊದಲ ೩ ಚರಣಗಳಿಗೆ ಪ್ರಯತ್ನಪಟ್ಟರೆ ಜಯ. ತಾ. ೧, ೨ ಮತ್ತು ೬ ಸುದಿನಗಳು.

ತೃತೀಯದ ಗುರುವಿನದೆಸೆಯಿಂದ ದಾಯಾದ್ಯರಿಗೆ ಸುಖ, ಮಕ್ಕಳ ಉನ್ನತಿ, ಭಾಗ್ಯ ಮತ್ತು ಧನವೃದ್ಧಿ.

ಧನು

ಹೆಂಡತಿ ಮಕ್ಕಳ ಅಲ್ಪಸ್ವಲ್ಪ ವಿರೋಧವನ್ನು ಬಿಟ್ಟರೆ ಪ್ರಾಪಂಚಿಕ ಸುಖ ಸಾಧಾರಣ ಉತ್ತಮವೆ. ಉದ್ಯೋಗದಲ್ಲಿ ಎಲ್ಲವೂ ಇಷ್ಟದಂತೆ. ದಾಯಾದ್ಯರ ಕಿರುಕುಳ. ವಾದ ಸ್ಪರ್ಧೆಗಳಲ್ಲಿ ಅಲ್ಪ ಯಶ, ಆದರೆ ಶತ್ರುಗಳ ಕಾಟ ಹೆಚ್ಚು. ಪ್ರವಾಸ ತೊಂದರೆಯದು. ಭೆಟ್ಟಿ ಪತ್ರವ್ಯವಹಾರ ಅನುಕೂಲ. ಮೂಲಾದ ೪ ನೆ ಮತ್ತು ಪೂರ್ವಾಷಾಢದ ಮೊದಲ ೩ ಚರಣಗಳಿಗೆ ತೊಂದರೆ ಹೆಚ್ಚು. ತಾ ೨೮, ೪ ಮತ್ತು ೫ ಹಿತ.

ದ್ವಿತೀಯ ಗುರು ಮಂಗಲ ಕಾರ್ಯ, ವಂಶಾಭಿವೃದ್ಧಿ, ಪ್ರಿಯಜನ ಸಹವಾಸ, ಸಂಪದಭಿವೃದ್ಧಿಗಳಿಗೆ ಸಾಧಕನಾದರೂ ಶತ್ರುವೃದ್ಧಿಗೆ ಕಾರಣನಾಗಬಹುದು.

ಮಕರ

ನಿಮ್ಮ ಪ್ರಕೃತಿ ಅಷ್ಟು ಚೆನ್ನಾಗಿ ಉಳಿಯಲಿಕ್ಕಿಲ್ಲ. ಆದರೆ ಹೆಂಡತಿ ಮಕ್ಕಳಿಗೆ ಆರೋಗ್ಯ. ಉದ್ಯೋಗದಲ್ಲಿ ಪ್ರಗತಿ. ಪ್ರತಿಷ್ಠೆ ಲಾಭ ಅತ್ಯುತ್ತಮ. ಆದರೆ ಹಲಬಗೆಯ ತೊಂದರೆಗಳು ಕಾಡುತ್ತಲೆ ಇರುವವು. ವಾದ ಸ್ಪರ್ಧೆಗಳಲ್ಲಿ ಅನಿಶ್ಚಿತಾವಸ್ಥೆ. ಮಿತ್ರರಲ್ಲಿ ಒಬ್ಬನಿಂದ ಕಲ್ಯಾಣಕರ ಕಾರ್ಯವಾಗುವವಾದರೆ ಇನ್ನೊಬ್ಬನಿಂದ ಅಪವಾದಕ್ಕೆಡೆಯಾಗುವದು. ಪ್ರವಾಸಾದಿ ಕಾರ್ಯಗಳಲ್ಲಿ ಮೊದಲು ತೊಂದರೆಯಾದರೂ ಕೊನೆಗೆ ಯಶ. ಉತ್ತರಾಷಾಢದ ೪ ನೆ ಮತ್ತು ಶ್ರವಣದ ಮೊದಲ ೩ ಚರಣಗಳಿಗೆ ತೊಂದರೆ ಹೆಚ್ಚು. ತಾ, ೨೮, ೧, ೨ ಮತ್ತು ೩ ಅನುಕೂಲ.

ಜನ್ಮಸ್ಥ ಗುರುವಿನಿಂದ ಪ್ರಕೃತಿ, ಭಾಗ್ಯ, ಸ್ತ್ರೀ, ಸಂತಾನಗಳಿಗೆ ಸುಖ. ವಾದ ವಿವಾದಗಳಲ್ಲಿ ಯಶ. ಆದರೆ ಪ್ರತಿಷ್ಠೆಗೂ ಧನಸಂಗ್ರಹಕ್ಕೂ ತುಸು ಅಡಚಣೆ.

ಕುಂಭ

ನಿಮಗೂ ನಿಮ್ಮ ಹೆಂಡತಿಗೂ ಮತಭೇದ ಮಕ್ಕಳಿಗೆ ಅನಾರೋಗ್ಯ. ಉದ್ಯೋಗದಲ್ಲಿ ಪ್ರತಿಷ್ಠೆಗೆ ತಕ್ಕ ಲಾಭವಿಲ್ಲ. ವಾದ ಸ್ಪರ್ಧೆಗಳಲ್ಲಿ ಅಷ್ಟಕ್ಕಷ್ಟೆ. ಮಿತ್ರರ ವಿರೋಧ. ಸತ್ಕಾರ್ಯದಲ್ಲಿ ವೆಚ್ಚ. ಪ್ರವಾಸ ಅನುಕೂಲ. ಧನಿಷ್ಠೆಯ ೪ ನೆ ಮತ್ತು ಶತತಾರೆಯ ಮೊದಲ ೩ ಚರಣಗಳಿಗೆ ತೊಂದರೆ ಕಡಮೆ. ತಾ. ೧, ೨, ೩ ಮತ್ತು ೫ ಅನುಕೂಲ.

ದ್ವಾದಶದ ಗುರುವಿನಿಂದಾಗಿ ಬಂಧುಮಿತ್ರರ ವಿರೋಧ, ಶತ್ರುಗಳ ಹೆಚ್ಚಳ, ಶುಭಕಾರ್ಯದಲ್ಲಿ ತುಂಬ ಧನವ್ಯಯ, ಮಕ್ಕಳಿಗೆ ಕ್ಲೇಶ, ಪರಮಾರ್ಥದ ಕಡೆ ಮನಸು ಹರಿಯುವದು.

ಮೀನ

ಮಕ್ಕಳಿಗೆ ಕ್ಲೇಶ. ಪ್ರಾಪಂಚಿಕ ತೊಂದರೆಗಳ ಕಾಟ. ಉದ್ಯೋಗದಲ್ಲಿ ಪ್ರತಿಷ್ಠೆ ಚೆನ್ನಾಗಿದ್ದರೂ ಲಾಭಕ್ಕೆ ಕೊರತೆ. ನಿರರ್ಥಕ ವೆಚ್ಚಗಳ ಹೆಚ್ಚಳ ವಾದ ಸ್ಪರ್ಧೆಗಳಲ್ಲಿ ತೊಂದರೆಯೂ ವೆಚ್ಚವೂ ತುಂಬ. ಆದರೂ ಕೊನೆಗೆ ಇಚ್ಛಿತ ಸಿದ್ಧಿ. ಮಿತ್ರರ ಪಿಡುಗು ಅಸಹನೀಯವಾಗುವದು. ಪ್ರವಾಸ ಹಿತವಲ್ಲ. ಪತ್ರ ವ್ಯವಹಾರ ಹಿತ. ಉತ್ತರಾಭಾದ್ರದ ೪ ನೆ ಮತ್ತು ರೇವತಿಯ ಮೊದಲ ೩ ಚರಣಗಳಿಗೆ ತೊಂದರೆ. ತಾ. ೧, ೨, ೩ ಮತ್ತು ೬ ಅನುಕೂಲ.

ಏಕಾದಶದ ಗುರು ಲಾಭ, ಪ್ರತಿಷ್ಠೆ, ಸ್ತ್ರೀ, ಸಂತತಿ, ದಾಯಾದ್ಯ ಇವೆಲ್ಲಕ್ಕೂ ಹಿತಾವಹನಾಗುವನು.

ಕರ್ನಾಟಕ

ಧಾರವಾಡ

ಮುಳಕೂರುಗ್ರಾಮದ ಒಕ್ಕಲತನ ಸಂಘದ ಕಾರ್ಯದರ್ಶಿ ಶ್ರೀ ಪವಾರ ಇವರು ಆ ಸಂಘದಿಂದ ನಿವೃತ್ತರಾದ್ದರಿಂದ ೪ ನೇ ತಾರೀಕು ಶ್ರೀ ಜಕರಡ್ಡಿಯವರ ಅಧ್ಯಕ್ಷತೆಯಲ್ಲಿ ಸಭೆಸೇರಿ ಅವರನ್ನು ಸತ್ಕರಿಸಲಾಯಿತು.

ತಡಕನಹಳ್ಳಿಯಲ್ಲಿ ಈ ವರ್ಷ ಹೊಸದಾಗಿ ಮಹಾತ್ಮಾಜಿಯವರ ವಾಚನಾಲಯದ ಪ್ರಾರಂಭೋತ್ಸವ ಅ. ಡಿ. ಎ. ಇ. ಡಿ. ಡಿ. ಪಾಟೀಲ ಇವರ ಹಸ್ತದಿಂದ ಜರುಗಿತು. ೧೨ಕ್ಕೆ ಈ ಸಂಬಂಧದ ಸಭೆಸೇರಿತ್ತು. ಶಾಲೆಯ ಶಿಕ್ಷಕರಾದ ಶ್ರೀ ಎಸ್. ಎಸ್. ಪಾಟೀಲ ಇವರು ವಾಚನಾಲಯದ ಮಹತ್ವವನ್ನು ಕುರಿತು ಮಾತಾಡಿದರು. ಹೊಸದಾಗಿ ಸ್ಥಾಪಿತವಾದ ಈ ವಾಚನಾಲಯಕ್ಕೆ ಸರಕಾರದವರು ಧನಸಹಾಯ ಮಾಡಬೇಕೆಂದು ವ್ಯವಸ್ಥಾಪಕರು ಬಿನ್ನವಿಸುತ್ತಾರೆ.

ಲಂಚತೆಗೆದುಕೊಂಡ ಆರೋಪದ ಮೇಲೆ ಶಿಕ್ಷಿಸಲ್ಪಟ್ಟ ಮುಂಡರಗಿಯ ಸಬ್ ಇನಸ್ಪೆಕ್ಟರರಾದ ಶ್ರೀ ಸಂಕೊಳ್ಳಿ ಮತ್ತು ಇನ್ನಿತರ ಇಬ್ಬರು ಹೆಡ್ ಕಾನ್ಸಟೇಬಲರು ಧಾರವಾಡ ಕೋರ್ಟಿನಲ್ಲಿ ಮಾಡಿದ ಅಪೀಲಿನಲ್ಲಿ ೧೯ ಕ್ಕೆ ನಿರ್ದೋಷಿಗಳೆಂದು ಬಿಡುಗಡೆ ಹೊಂದಿದರು.

ಕಮ್ಯುನಿಸ್ಟರನ್ನು ಹಿಡಿಯಬೇಕೆಂಬ ಘೋರಣಕ್ಕನುಸಾರವಾಗಿ ಹುಬ್ಬಳ್ಳಿಯಲ್ಲಿ ಜನಶಕ್ತಿ ಪತ್ರಿಕೆಯ ಸಂಪಾದಕ ಕೆ. ಸದಾಶಿವ, ಮ್ಯಾನೇಜರ ಸಿ ಬಿ ರಾವ ಮತ್ತು ರೇಲ್ವೆ ಕೆಲಸಗಾರ ಕರೀಮಸಾಹೇಬ, ವಿ. ಎ. ಹಿರೇಮಠ, ಉಸ್ಮಾನಶರೀಫ ಸಾಹೇಬ ಮತ್ತು ಸಯ್ಯದ ಹುಸೇನಸಾಹೇಬರನ್ನು ಸೆರೆಹಿಡಿಯಲಾಯಿತು.

ಕರ್ನಾಟಕ ಏಕೀಕರಣ ಸಂಬಂಧದಲ್ಲಿ ಕರ್ನಾಟಕ ಪ್ರಾಂತೀಯ ಸಮಿತಿಯ ಸಂಧಾನ ಸಮಿತಿಯೊಡನೆ ಮತ್ತು ಇತರರೊಡನೆ ವಿಚಾರ ವಿನಿಮಯ ಮಾಡಲು ಮೈಸೂರು ಕಾಂಗ್ರೆಸ್ಸು ನೇಮಿಸಿದ ಸಂಧಾನ ಸಮಿತಿಯು ಹುಬ್ಬಳ್ಳಿಗೆ ಮಾರ್ಚ ೭ ಕ್ಕೆ ಬರುವದೆಂದು ತಿಳಿಯುತ್ತದೆ.

ಒಕ್ಕಿದ ಭತ್ತದಲ್ಲಿ ರೈತನಿಗೆ ಒಂದು ಪಾಲನ್ನು ಬೀಜ ಕೂಲಿ ಕಮತ ಮೊದಲಾದವುಗಳಿಗಾಗಿ ಮತ್ತು ಉಪಜೀವನಕ್ಕಾಗಿ ಒಬ್ಬ ಪ್ರೌಢನಿಗೆ ದಿನಕ್ಕೆ ೨ ಸ್ಟಾಂಡರ್ಡ ಸೇರಿನಂತೆ ಹೀಗೆ ಬಿಟ್ಟು ಉಳಿದುದನ್ನು ತೆಗೆದುಕೊಳ್ಳಲಾಗುವದೆಂದೂ ಸಣ್ಣ ಭತ್ತವನ್ನು ಒಂದನೇ ತರಗತಿಯದೆಂದು ಗಣಿಸಲಾಗುವದೆಂದೂ ಭತ್ತದ ಧಾರಣೆಯನ್ನು ಏರಿಸುವದು ಸಾಧ್ಯವಿಲ್ಲೆಂದೂ ಮುಂಬಯಿ ಸರಕಾರದವರು ಘೋಷಿಸಿ ರೈತರಿಗೆ ತಿಳಿಸಿದ್ದಾರೆ. ಮುಖ್ಯಮಂತ್ರಿಗಳು ಬಂದಾಗ ಅವರಿಗೆ ಮಾಡಿಕೊಂಡ ಬಿನ್ನಹಕ್ಕೆ ಉತ್ತರವೆಂದು ಸರಕಾರದವರು ಹೀಗೆ ತಿಳಿಸಿದ್ದಾರೆ.

ಬೆಳಗಾವಿ

ಅಥಣಿ ತಾಲೂಕ ವತನದಾರ ಕುಲಕರ್ಣಿ ಸಂಘದ ವಾರ್ಷಿಕ ಸಭೆ ಶ್ರೀ. ರಾಘವೇಂದ್ರರಾವ ಕುಲಕರ್ಣಿ ವಕೀಲರ ಅಧ್ಯಕ್ಷತೆಯಲ್ಲಿ ಸೇರಿ ಕಳೆದ ವರುಷದ ವರದಿ ಮತ್ತು ಲೆಕ್ಕಪತ್ರಗಳು ಸ್ವೀಕೃತವಾದ ಬಳಿಕ ಸಂಘದ ಉದ್ದೇಶ ಮತ್ತು ಕಾರ್ಯಕ್ರಮವನ್ನು ವಿವರಿಸಿ ಹೇಳಲಾಯಿತು. ಕುಲಕರ್ಣಿಯರ ಹೋರಾಟವು ಯಶಸ್ವಿಯಾಗುವಂತೆ ಎಲ್ಲರೂ ಪ್ರಯತ್ನಿಸಬೇಕೆಂದು ಕೇಳಿಕೊಳ್ಳಲಾಯಿತು. ರಾಜೀನಾಮೆಯನ್ನು ಕೊಟ್ಟ ಕುಲಕರ್ಣಿಯರನ್ನು ಅಭಿನಂದಿಸುವ ಮತ್ತು ಸರಕಾರವು ತನ್ನ ನಿಲುವೆಯನ್ನು ಬಿಡಲು ಸಿದ್ಧವಿಲ್ಲದ ಬಗ್ಗೆ ವಿಷಾದ ಪ್ರದರ್ಶಿಸುವ ಗೊತ್ತುಗಳು ಸ್ವೀಕೃತವಾದವು.

ಬೆಳಗಾವಿ ಜಿಲ್ಲಾ ಗ್ರಾಮೋದ್ಧಾರ ಮಂಡಳದ ಸಭೆ ಸೇರಿ ಒಕ್ಕಲತನ, ಹಳ್ಳಿಯ ಆರ್ಥಿಕ ಸ್ಥಿತಿಯ ಸುಧಾರಣೆ, ಪಾನನಿರೋಧ, ಕೈಗಾರಿಕೆ ಮೊದಲಾದವುಗಳ ಬಗ್ಗೆ ಜನತೆಗೆ ಶಿಕ್ಷಣ ಕೊಡಲು ಗ್ರಾಮಸೇವಕರ ತರಬೇತಿ ವರ್ಗಗಳನ್ನು ಕಣಬರಗಿ ಮತ್ತು ಬೆಡಕಿನ ಹಳ್ಳಿಗಳಲ್ಲಿ ತೆರೆಯಬೇಕೆಂದು ನಿರ್ಧರಿಸಲಾಯಿತು.

ಬೆಳಗಾವಿಯಲ್ಲಿ ಶ್ರೀ ಮಧ್ವನವಮಿ ಉತ್ಸವವು ಮೂರುದಿನ ಬಳ್ಳಿ ವಿಜೃಂಭಣೆಯಿಂದ ಆಚರಿಸಲಾಯಿತು. ಪಾರಾಯಣ, ಪ್ರವಚನ, ಮಂತ್ರಪುಷ್ಪ ಮೊದಲಾದವುಗಳು ನಡೆದವು. ಕೊನೆಯ ದಿನ ಶ್ರೀ ಸತ್ಯಪ್ರಮೋದ ತೀರ್ಥರ ವರ್ಧಂತಿ ಉತ್ಸವವೂ ಜರುಗಿತು.

ವಿಜಾಪುರ

ಕುಲಕರ್ಣಿಯರ ರಾಜೀನಾಮೆಯ ಸಂಬಂಧದಲ್ಲಿ ದಕ್ಷಿಣ ಭಾಗದ ಕಮೀಶನರರು ಹೊರಡಿಸಿದ ಜಾಹೀರನಾಮೆಯಲ್ಲಿ ಹಕ್ಕುದಾರರಿಗೆ ಮೋಸಕವಾದ ಹಕ್ಕುದಾರರ ಹಕ್ಕು ನಷ್ಟ ಪಡಿಸಿಕೊಳ್ಳಲು ಮುಂದೆ ಮಾಡಿದ ಕರಾರುಗಳಿಗೆ ಕುಲಕರ್ಣಿಯರು ಬಲಿ ಬೀಳದೆ ಕುಲಕರ್ಣಿಯರ ಸಂಘದ ಆದೇಶ ಬರುವ ವರೆಗೆ ರಾಜೀನಾಮೆಯನ್ನು ಹಿಂತೆಗೆದುಕೊಳ್ಳಬಾರದೆಂದೂ ಸಂಧಾನದ ಬಗ್ಗೆ ನಡೆದ ಮಾತುಕತೆ ಮುರಿಯಲಿಕ್ಕೆ ಸರಕಾರದ ಅನುಚಿತ ಧೋರಣವೇ ಕಾರಣವೆಂದೂ ಮುಂತಾಗಿ ಹುಬ್ಬಳ್ಳಿಯಲ್ಲಿ ಕೂಡಿದ ಕುಲಕರ್ಣಿ ಸಂಘದ ಕಾರ್ಯಕಾರೀ ಮಂಡಳದವರು ನಿರ್ಣಯಿಸಿದರು.

ಇಂಡೀ ತಾಲೂಕಿನಲ್ಲಿ ಮತ್ತೆ ೨೦ ಹಳ್ಳಿಗಳ ಕುಲಕರ್ಣಿಯರು ರಾಜೀನಾಮೆ ಕೊಟ್ಟಿದ್ದು ರಾಜೀನಾಮೆ ಹಿಂತೆಗೆದುಕೊಂಡವರಲ್ಲಿ ಮತ್ತೆ ೮ ಜನರು ರಾಜೀನಾಮೆ ಕೊಟ್ಟಿರುವರು.

ಬಳ್ಳಾರಿ

ಬಳ್ಳಾರಿ ಜಿಲ್ಲಾ ಪಾನನಿರೋಧ ಮಂಡಳದ ಸಭೆ ಜಿಲ್ಲಾ ಕಲೆಕ್ಟರರ ಅಧ್ಯಕ್ಷತೆಯಲ್ಲಿ ೧೯ ಕ್ಕೆ ಕೂಡಿ ಪಾನ ನಿರೋಧವನ್ನು ಯಶಸ್ವಿಗೊಳಿಸಲು ಪ್ರಭಾವೀ ಉಪಾಯಗಳನ್ನು ಹೇಗೆ ಕೈಕೊಳ್ಳಬೇಕೆಂಬುದನ್ನು ಚರ್ಚಿಸಿತು. ಮುಂಡರನ್ನು ಸ್ಥಾನಬದ್ಧತೆಯಲ್ಲಿಡಬೇಕೆಂಬ ಸೂಚನೆಯೂ ಪಾಸಾಯಿತು.

ಹರಿಜನೋದ್ಧಾರ ಮಂತ್ರಿಗಳಾದ ಕೂರ್ಮಯ್ಯನವರು ಭೂಮಿಗಳನ್ನು ಹಂಚುವ ವ್ಯವಸ್ಥೆಗಾಗಿ ಎಮ್ಮಿಗನೂರಿಗೆ ಬಂದಾಗ ಪಂಚಾಯತಿ ಬೋರ್ಡಿನ ಅಧ್ಯಕ್ಷರಾದ ಶ್ರೀ ಮಾಚಾನಿ ಸೋಮಪ್ಪಾ ಇವರು ಅವರನ್ನು ಸತ್ಕರಿಸಿದರು. ಮಂತ್ರಿಗಳು ನೇಕಾರ ಸಂಘ ವಾಚನಾಲಯ ಮೊದಲಾದವುಗಳನ್ನು ಸಂದರ್ಶಿಸಿ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡಿದರು.

ದಕ್ಷಿಣ ಕನ್ನಡ

ಕನ್ನಡದ ಪ್ರಸಿದ್ಧ ಸಾಹಿತಿಗಳೂ ಪಂಡಿತರೂ ಆದ ಮುಳಿಯ ತಿಮ್ಮಪ್ಪಯ್ಯನವರು ಮುತ್ತು ಶ್ರೀ ವಿ. ಜೆ. ಜೋಸೆಫ್ ಇವರ ಛಾಯಾಚಿತ್ರ ಅನಾವರಣವು ಸೈಂಟ್ ಎಲೋಸಿಯಸ್ ಕಾಲೇಜಿನಲ್ಲಿ ದಿನಾಂಕ ೧೫ ರಂದು ಅಲ್ಲಿನ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವದ ವೇಳೆಯಲ್ಲಿ ಜರಗಿತು. ಅಂದಿನ ಸಮಾರಂಭಕ್ಕೆ ಜಿ. ಸೋಮಶೇಖರರಾಯರು ಅಧ್ಯಕ್ಷರಾಗಿದ್ದರು. ಎಸ್. ಮುಕುಂದರಾಯರು ಸ್ವಸ್ತಿವಾಚನ ಮಾಡಿದರು.

ದಿನಾಂಕ ೧೬ ರಂದು ಜರಗಿದ ಮಂಗಳೂರು ಸರ್ಕಲ್ ಕಾಂಗ್ರೆಸ್ ಸಮಿತಿಯ ಸಭೆಯು ಕೃಷಿ ಕೈಗಾರಿಕೆ ಪ್ರದರ್ಶನದೊಂದಿಗೆ "ಜೂಜು ರತೆ"ಯ ಆಟಗಳನ್ನು ಸೇರಿಸಬೇಕೆಂಬ ಠರಾವನ್ನು ಖಂಡಿಸಿತು.

ಮಂಗಳೂರಿನ ಡಾ. ಆನಂದರಾಯರ ಕುಟುಂಬವು-ಈರ್ವರು ಮಕ್ಕಳೂ. ಹಿರಿ ಮಗನ ಸೊಸೆಯೂ ಇನ್ನಿತರ ೯ ಮಂದಿಯೊಂದಿಗೆ ದಿನಾಂಕ ೧೩ ರಂದು ದೋಣಿ ಮಗಚಿ ನೀರು ಪಾಲಾಯಿತು.

ಮಂಗಳೂರು ಪೌರ ಸಭಾಸಮಿತಿಯ ಸಭೆಯೊಂದು ದಿನಾಂಕ ೧೫ ರಂದು ಶ್ರೀ ಎಲ್. ಸಿ. ಪಾಯಸರ ಅಧ್ಯಕ್ಷತೆಯಲ್ಲಿ ಜರಗಿದಾಗ, "ಪಾರ್ಕು" ರಚಿಸುವದಕ್ಕಾಗಿ ವ್ಯಾಯಾಮ ಸಂಸ್ಥೆಯೊಂದರ ಪರವಾಗಿ ಬಿ. ವೈಕುಂಠ ಬಾಳಿಗರು ಕಳುಹಿಸಿದ ರೂ ೧೦೦೦ವನ್ನು ಸ್ವೀಕರಿಸಲಾಯಿತು. ರಸ್ತೆ ದುರಸ್ತಿ, ಸಣ್ಣ ಸೇತುವೆಗಳ ರಚನೆಯೊಂದಿಗೆ ಎರಡು ಬಸ್ಸು ನಿಲ್ದಾಣಗಳನ್ನು ರಚಿಸುವುದೆಂದೂ ನಿರ್ಣಯಿಸಲಾಯಿತು.

ಹಳೆಯಂಗಡಿಯ ಸಮೀಪದ ಪಡುಪಣಂಬೂರು ಶಾಲೆಯ ವಠಾರದಲ್ಲಿ ದಿನಾಂಕ ೧೩ ರಂದು ರಜಕ ಕುಲೋದ್ಧಾರಕ ಸಂಘದ ಮಹಾಸಭೆಯು ಎಂ. ಆರ್. ಪೂಂಜರ ಅಧ್ಯಕ್ಷತೆಯಲ್ಲಿ ಜರಗಿತು. ಸ್ವಾಗತ, ವರದಿಗಳಾದ ಮೇಲೆ ಧಾರ್ಮಿಕ ಉಂಬಳಿ ಮಸೂದೆಯನ್ನು ಸ್ವಾಗತಿಸುವ, ವಕ್ಫ್ ಮಸೂದೆ ತರಬೇಕೆನ್ನುವ ಕಾಂಗ್ರೆಸ್ ಸರಕಾರಗಳಿಗೆ ಸಹಾಯ ನೀಡಬೇಕೆನ್ನುವ ಠರಾವುಗಳಾದುವು.

ಮಂಗಳೂರು ಮೋಟರ್ ಕೆಲಸಗಾರರ ಸಂಘದ ಸಭೆಯು ದಿನಾಂಕ ೧೩ ರಂದು ಶ್ರೀ ಜಿ. ಬಿ. ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿದಾಗ ಮುಷ್ಕರ ಹೂಡಲು ಬೇಲೆಟ್ ತೆಗೆಯಬೇಕೆಂದೂ ಮಾಲಕರಿಗೆ ನೋಟೀಸು ಕೊಡಬೇಕೆಂದೂ ನಿರ್ಣಯವಾಗಿ ಒಂದು ಕ್ರಿಯಾ ಸಮಿತಿಯು ರಚಿಸಲ್ಪಟ್ಟಿತು.

ಉಡುಪಿಯ ವ್ಯಾಪಾರಸ್ಥರೂ ನಗರ ಸಭೆಯ ಸದಸ್ಯರೂ ಆಗಿರುವ ಅಮ್ಮುಂಜೆ ನಾರಾಯಣ ನಾಯ್ಕರಿಗೆ ಧಾನ್ಯ ನಿಯಂತ್ರಣ ಕಾನೂನಿಗನುಸಾರವಾಗಿ ೭೦೦ ರೂಪಾಯಿ ದಂಡವನ್ನು ವಿಧಿಸಲಾಯಿತು. ೧೩೨ ಮುಡಿ ಅಕ್ಕಿಯ ಬಗ್ಗೆ ಸರಿಯಾದ ಲೆಕ್ಕವನ್ನಿಡದೆ ಕೃತಕ ಕೊಡಲಿಕ್ಕೆ ಅವರು ತೋರಿಸಿದ್ದುದೇ ಅವರ ಅಪರಾಧ.

೩೨ ನೆಯ ಕನ್ನಡ ಸಾಹಿತ್ಯ ಸಮ್ಮೇಲನ, ಕಲಬುರಗಿ

ಕನ್ನಡ ಸಾಹಿತ್ಯ ಸಮ್ಮೇಲನದ ಉದ್ಘಾಟನಕ್ಕಾಗಿ ಹೈದರಾಬಾದಿನ ರೆವ್ಹಿನ್ಯೂ ಮೆಂಬರ ಆನರೇಬಲ ರಾಜ ಸೇವಾ ಪ್ರಸಕ್ತ ಎಂ ಶೇಷಾದ್ರಿ ಅವರನ್ನು ವಿಜ್ಞಾಪಿಸಿಕೊಳ್ಳಲಾಗಿದೆ. ಸಮ್ಮೇಲನದ ಅಂಗವಾಗಿ ಜರುಗುವ ಸಾಹಿತ್ಯಗೋಷ್ಠಿಯ ಉದ್ಘಾಟನೆಗಾಗಿ ಕನ್ನಡ ನಾಡಿನ ಹಿರಿಯ ಸಾಹಿತಿಗಳೂ ಕವಿಗಳೂ ಶಿವಮೊಗ್ಗೆಯ ಸಮ್ಮೇಲನಾಧ್ಯಕ್ಷರೂ ಆದ ಶ್ರೀ ದ. ರಾ. ಬೇಂದ್ರೆ ಅವರನ್ನು ಕೇಳಿಕೊಳ್ಳಲಾಗಿದೆ.

ಸಮ್ಮೇಲನ ನಡೆಯುವ ಮೂರು ದಿನಗಳ ಊಟ, ವಸತಿ ಸೇರಿ ಶುಲ್ಕ ೧೫ ಹಾಲಿ ಅಥವಾ ೧೩ ಗಾಡಿ ರೂ. ಗಳು ಎಂದು ಸ್ವಾಗತ ಸಮಿತಿಯು ನಿರ್ಣಯಿಸಿದೆ. ಪ್ರತಿನಿಧಿಗಳು ಸ್ವಾಗತ ಸಮಿತಿಯ ಯಾವ ನೆರವನ್ನೂ ಅಪೇಕ್ಷಿಸದೆ ಇದ್ದ ಪಕ್ಷದಲ್ಲಿ ೫ ರೂ. ಹಾಲಿ ಪ್ರತಿನಿಧಿ ಶುಲ್ಕ ಕಳಿಸಬೇಕಾಗಿ ಪ್ರಾರ್ಥನೆ.

ಮನೋರಂಜನ ಕಾರ್ಯಕ್ರಮಕ್ಕಾಗಿ ಮೈಸೂರಿನ ಸುಪ್ರಸಿದ್ಧ ಲಾವಣಿಕಾರರಾದ ಶ್ರೀ ಬಿಷ್ಣುಂಕರಾವ ಅವರು ದಯಮಾಡಲಿದ್ದಾರೆ ಎಂದು ಸ್ವಾಗತ ಸಮಿತಿಯವರು ತಿಳಿಸುತ್ತಾರೆ.

ಅ. ಕ. ಏಕೀಕರಣ ಪರಿಷತ್ತು ಮಾರ್ಚ ೫ ನೇ ದಿನ ಪ್ರಾರಂಭ

ಕರ್ನಾಟಕ ಏಕೀಕರಣ ಸಂಘ, ... ಬಗಾರ ಇವರ ಕಾರ್ಯದರ್ಶಿಗಳು ಪ್ರಕ... ಹೊರಡಿಸಿ " ಮಾರ್ಚ ತಿಂಗಳ ೫-೬ ... ದಿನಾಂಕಗಳಲ್ಲಿ ಅ. ಕ. ಏಕೀಕರಣ ಸಂ... ೧೨ ನೇ ಪರಿಷತ್ತು ಗುಲಬುರ್ಗಾದಲ್ಲಿ ... ಸಿದ ಸರದಾರ ವಲ್ಲಭಭಾಯಿ ನಗರದಲ್ಲಿ ಸೇ... ವದು. ಹೈದರಾಬಾದ ಸಂಸ್ಥಾನದಲ್ಲಿ ಇ... ಪರಿಷತ್ತು ಸೇರುವದು ಇದೇ ಪ್ರಥಮ... ವಾದುದರಿಂದಲೂ ಏಕೀಕರಣ ಪ್ರಕ್ರಿಯ... ಹೊಸ ಘಟನೆ ಸಿದ್ಧವಾಗುವ ... ಬಿಡಿಸಬೇಕಾಗಿರುವದರಿಂದಲೂ ... ಷತ್ತಿಗೆ ವಿಶೇಷ ಮಹತ್ವವಿದೆ. ದಿನಾಂಕ ೫ ... ಬೆಳಿಗ್ಗೆ ಶ್ರೀ ಜನರಾಜ ಹೆಗಡೆಯವ... ರಾಷ್ಟ್ರೀಯ ಧ್ವಜವನ್ನು ಹಾರಿಸುವರು. ಕ... ಪ್ರಾಂತಾಧ್ಯಕ್ಷ ಶ್ರೀ ನಿಜಲಿಂಗಪ್ಪನವರ ... ಏಕೀಕರಣ ಪರಿಷತ್ತಿನ ಉದ್ಘಾಟಕ... ಮೈಸೂರ ಘಟನಾಸಮಿತಿಯ ಅಧ್ಯಕ್ಷರೂ ... ಶ್ರೀ ಟಿ. ಸುಬ್ರಹ್ಮಣ್ಯ, ಜನರಾಜ ಹೆಗಡೆ ... ಮುಖಂಡರ ಪ್ರಚಂಡ ಮೆರವಣಿಗೆ ಹೊರ... ವದು. ೬ ನೇ ದಿನ ಪರಿಷತ್ತಿನ ಕಾರ್ಯಕಲಾ... ಗಳು ನಡೆಯುವವು. ಭಾಷಾವಾರ ಪ್ರಾಂ... ರಚನೆಗೆ ಜನತೆಯ ಬೆಂಬಲ ಕೊಡಲು ಸಂ... ಖ್ಯಾಂಡವಾಗಿ ಕನ್ನಡಿಗರು ಪರಿಷತ್ತಿಗೆ ಆಗಮಿ... ಬೇಕು ಎಂದು ತಿಳಿಸಿದ್ದಾರೆ.

ಕನ್ನಡ ಸಂಸ್ಥಾನ

ಕೊಲ್ಹಾಪುರ ಸಂಸ್ಥಾನವು ವಿಲೀನ ಹೊಂ... ಲಿರುವದರಿಂದ ಇನ್ನು ಮುಂದೆ ಸಂಸ್ಥಾನ ... ಪ್ರಜಾಪರಿಷತ್ತನ್ನು ಊರ್ಜಿತದಲ್ಲಿ ಇಡುವ ... ಅವಶ್ಯಕತೆ ಇಲ್ಲ ಆದುದರಿಂದ ವಿಸ... ರ್ಜಿತವಾದ ಪ್ರಜಾಪರಿಷತ್ತಿನ ಸದಸ್ಯರು ಶೇ... ಕರಿ ಮತ್ತು ಕಾಮಗಾರಿ ಪಕ್ಷವನ್ನು ಸೇ... ಬಹುದು ನಾನು ಮಾತ್ರ ಯಾವದೇ ಪಕ್ಷದಲ್ಲಿ ಸೇರದೆ ಹಾಗೆ ಉಳಿಯುವೆನಾದರೂ ಶೇತಕರಿ ಕಾಮಕರಿ ಪಕ್ಷದತ್ತವೇ ನನ್ನ ಒಲವು ಇದೆ ಎಂದು ಮುಂತಾಗಿ ಮಾಧವರಾವ ಬಾಗಲ ಇವರು ಕೊಲ್ಹಾಪುರದ ಸಾರ್ವಜನಿಕ ಸಭೆಯೊಂದರಲ್ಲಿ ಭಾಷಣ ಮಾಡುತ್ತ ಹೇಳಿದರು.

ಸಂಸ್ಥಾನೀ ನೌಕರರು ಈ ವರೆಗೆ ಅವರು ತಕ್ಕ ವ್ಯಕ್ತಪಡಿಸಿದ ಅಪಾರನಿಷ್ಠೆ ಮತ್ತು ಕರ್ತವ್ಯತತ್ಪರತೆ ಪ್ರಶಂಸನೀಯವಾಗಿವೆ, ಅವರನ್ನೆಲ್ಲ ಸರಕಾರದ ಬೇರೆ ಬೇರೆ ಭಾಗಗಳಲ್ಲಿ ಸಾಧ್ಯವಿದ್ದಮಟ್ಟಿಗೆ ತೆಗೆದುಕೊಳ್ಳಲಾಗುವದು. ಎಂದು ಮುಂತಾಗಿ ಕೊಲ್ಹಾಪುರದ ಆಡಳಿತಗಾರರು ಪತ್ರಿಕಾಪ್ರಕಟನೆಯೊಂದನ್ನು ಹೊರಡಿಸಿದ್ದಾರೆ. ಮಾರ್ಚ ೧ ರಿಂದ ಕೊಲ್ಹಾಪುರಸಂಸ್ಥಾನ ಮುಂಬಯಿ ಪ್ರಾಂತದಲ್ಲಿ ವಿಲೀನ ಹೊಂದುವದು.

ಹಿಂದುಸ್ಥಾನ

ಮುಂಬಯಿ

ಗಾಂಧೀಸ್ಮಾರಕ ಸಂಗ್ರಹದ ಸಂಘಟಕ ರ ಕಾರ್ಯ ... ಕಾರ್ಯ ಪ್ರಕಟನೆಯೊಂದನ್ನು ಹೊರಡಿಸಿ ... ವ್ಯವಹಾರದಲ್ಲಿಯಾಗಲಿ ... ಬಗ್ಗೆ ... ಸಂಸ್ಥೆಗಳ ಎರಡು ... ಗಾಂಧೀಸ್ಮಾರಕ ಸಂಗ್ರಹ ... ಈ ವಿಚಾರಕ್ಕೆ ... ಸ್ವದೇಶ ಮತ್ತು ವಿದೇಶಗಳಲ್ಲಿಯ ಎಲ್ಲ ಪತ್ರಿಕೆಗಳಿಗೆ ... ಕೊಂಡಿದ್ದಾರೆ.

ಮುಂಬಯಿ ಹಾಯಕೋರ್ಟಿನ ... ನ್ಯಾಯಾಧೀಶರಾದ ಸರ್ ... ತಮ್ಮ ೬೦ ನೇ ವಯಸ್ಸಿನಲ್ಲಿ ೨೧ ಕ್ಕೆ ... ನಿಧನ ಹೊಂದಿದರು. ಅವರು ಸ್ನಾನದ ಕೋಣೆಯಿಂದ ಹೊರಗೆ ಬರುವಾಗ ಜಾರಿಬಿದ್ದರೆಂದೂ ಅದರಿಂದ ಅವರ ಪ್ರಾಣೋತ್ಕ್ರಮಣವಾಯಿತೆಂದು ತಿಳಿಯುತ್ತದೆ.

ಹೊಸ ವಿಶ್ವವಿದ್ಯಾಲಯದ ಕಾರ್ಯಕಲಾಪಗಳು ಫೆಬ್ರುವರಿ ೧೦ರಿಂದ ಪ್ರಾರಂಭವಾಗಿವೆ. ಅಂದಿನಿಂದ ಕಾಯಿದೆಯ ಕೆಲವು ಕಲಮುಗಳು ಜಾರಿಯಲ್ಲಿ ಬಂದಿವೆ.

ಅಹಮದಾಬಾದ ನಗರ ಸಭೆಯ ಚುನಾವಣೆಯಾಗಿ ೬೪ ಸ್ಥಳಗಳಲ್ಲಿ ಕಾಂಗ್ರೆಸ್ಸಿಗೆ ೬೩ ಸ್ಥಳಗಳು ದೊರೆತಿವೆ. ೧೯ ಸಮಾಜವಾದಿ ಉಮೇದವಾರರಲ್ಲಿ ಒಬ್ಬರು ೪೪ ಸ್ವತಂತ್ರ ಉಮೇದವಾರರಲ್ಲಿ ಪ್ರಾಥಮಿಕ ಶಿಕ್ಷಕರ ಸಂಘದ ಅಧ್ಯಕ್ಷರೊಬ್ಬರು ಹೀಗೆ ಇಬ್ಬರು ಕಾಂಗ್ರೆಸ್ಸೇತರರು ಮಾತ್ರ ಆರಿಸಿ ಬಂದಿರುವರು. ಕ್ರಿಶ್ಚನ ಮುಸಲ್ಮಾನ ಮತ್ತು ಸ್ತ್ರೀಯರಿಗಾಗಿ ಕಾದಿಟ್ಟ ಸ್ಥಳಗಳೂ ಕಾಂಗ್ರೆಸ್ಸಿಗರೆ ಆರಿಸಿಬಂದಿರುವರು.

ಹಿಂದುಸ್ಥಾನದೊಡನೆ ಯೋಗ್ಯ ಸಂಬಂಧವನ್ನು ಇಟ್ಟುಕೊಳ್ಳುವದೇ ಪಾಕಿಸ್ತಾನದ ವಿದೇಶ ಧೋರಣದ ಮೂಲಭೂತ ಪ್ರಶ್ನೆಯಾಗಿದೆಯೆಂದು ಪಾಕಿಸ್ತಾನದ ಮುಖ್ಯ ಮಂತ್ರಿ ಲಿಯಾಕತ ಅಲ್ಲೀಖಾನರು ಕರಾಚಿಯಲ್ಲಿ ಪುನಃ ಪ್ರಚಿತ ಮುಸ್ಲಿಂಲೀಗಿನ ಕೌನ್ಸಿಲ್ಲಿನಲ್ಲಿ ಭಾಷಣ ಮಾಡುತ್ತ ಹೇಳಿದರು. ಎರಡೂ ಸರಕಾರಗಳು ಮನಸ್ಸು ಮಾಡಿದರೆ ಕಾಶ್ಮೀರ ಪ್ರಶ್ನೆಯೂ ಸಮಾಧಾನಕರವಾಗಿ ಬಗೆಹರಿದು ಇಂದಿನ ವಿರೋಧಭಾವವೂ ಕಡಿಮೆಯಾಗುವದು ಎಂದೂ ಅವರು ಹೇಳಿದರು.

ಹೈದರಾಬಾದ

ಹೈದರಾಬಾದ ಕಾಂಗ್ರೆಸ್ಸಿನ ಎರಡೂ ಪಕ್ಷಗಳ ಅಧ್ಯಕ್ಷರಾದ ಸ್ವಾಮೀ ರಮಾನಂದ ಮತ್ತು ಜನಾರ್ದನರಾವ ದೇಸಾಯಿ ಇವರು ೨೧ ಕ್ಕೆ ಹೈದರಾಬಾದಿನಲ್ಲಿ ಕೂಡಿ ಪರಸ್ಪರರ ಮತಭೇದಗಳನ್ನು ಬಗೆಹರಿಸುವ ಬಗ್ಗೆ ವಿಚಾರ ವಿನಿಮಯ ಮಾಡಿದರು. ಮಾರ್ಕ್ಸವಾದಿ ಸದಸ್ಯರನ್ನು ತೆಗೆದುಹಾಕಲು ಸ್ವಾಮೀಜಿಯವರು ಒಪ್ಪದ್ದರಿಂದ ಬಿಕ್ಕಟ್ಟು ಬಗೆಹರಿಯಲಿಲ್ಲ.

ಸರಕಾರದ ಎಲ್ಲ ಕಾಗದಪತ್ರಗಳಲ್ಲಿ ಮತ್ತು ಪ್ರಕಟನೆ ಪ್ರಸಿದ್ಧಿ ಪತ್ರಿಕೆಗಳಲ್ಲಿ ಈ ವರೆಗೆ ಇದ್ದ ಎಚ್ ಈ ಎಚ್ ನಿಜಾಮರ ಸರಕಾರ ಎಂಬ ಶಬ್ದಗಳ ಬದಲು ಹೈದರಾಬಾದ ಸರಕಾರ ಎಂಬ ಶಬ್ದಗಳನ್ನು ಪ್ರಯೋಗಿಸಲಾಗುವದು. ಈಗಿನ ಹೊಸ ಬದಲಾವಣೆಗಳನ್ನು ಲಕ್ಷಿಸಿ ಈ ಹೊಸ ಹೆಸರು ಸಮಂಜಸವೆಂದು ಭಾವಿಸಲಾಗಿದೆ.

ನಜರಬಂದಿಯಲ್ಲಿ ಇದ್ದ ಲಾಯಕಅಲ್ಲಿ ಮೊದಲಾದ ಹಿಂದಿನ ಮಂತ್ರಿಗಳ ರಕ್ಷಣೆಗಾಗಿ ಈಗಿದ್ದ ನಿಜಾಮ ಪೋಲೀಸರ ಬದಲು ಯುಕ್ತಪ್ರಾಂತದಿಂದ ಪೋಲೀಸರನ್ನು ತರಿಸಲಾಗಿದೆಯೆಂದು ತಿಳಿಯುತ್ತದೆ, ಮೊದಲಿದ್ದ ಪೋಲೀಸರು ಹೆಚ್ಚು ದಕ್ಷತೆಯಿಂದ ಕಾರ್ಯ ಮಾಡುತ್ತಿಲ್ಲ ಎಂದು ಕಂಡುಬಂದದ್ದರಿಂದ ಈ ರೀತಿ ಬದಲಾವಣೆ ಮಾಡಲಾಗಿದೆಯೆಂದು ತಿಳಿಯುತ್ತದೆ.

ಭಾಷಾನ್ವಯ ಪ್ರಾಂತ ರಚನೆಯ ಬಗ್ಗೆ ಜಯಪುರ ಕಾಂಗ್ರೆಸ್ಸಿನಲ್ಲಿ ನೇಮಿಸಲಾದ ತ್ರಿಮೂರ್ತಿಗಳ ವರದಿಯು ಮಾರ್ಚ ಕೊನೆಯ ಒಳಗಾಗಿ ಒಪ್ಪಿಸಲಾಗುವದು ಅಲ್ಲಿಯ ವರೆಗೆ ತಾಳ್ಮೆಯಿಂದ ಇರಬೇಕೆಂದು ಕಾಂಗ್ರೆಸ ಅಧ್ಯಕ್ಷರೂ ಈ ತ್ರಿಮೂರ್ತಿಗಳಲ್ಲಿ ಒಬ್ಬ ಸದಸ್ಯರೂ ಆಗಿರುವ ಡಾ. ಪಟ್ಟಾಭಿ ಸೀತಾರಾಮಯ್ಯನವರು ಅಕೋಲೆಯಲ್ಲಿ ೨೧ನೇ ರಾತ್ರಿ ಕೂಡಿದ ಸಭೆಯಲ್ಲಿ ಭಾಷಣ ಮಾಡುತ್ತ ಹೇಳಿದರು. ಅಕೋಲಾ ನಗರ ಸಭೆಯವರು ರಾಷ್ಟ್ರಪತಿಗಳಿಗೆ ಮಾನಪತ್ರವನ್ನರ್ಪಿಸಿದರು.

ಹೊಸದಿಲ್ಲಿ

ರಾಷ್ಟ್ರದ ಸಾರಿಗೆಯ ವ್ಯವಸ್ಥೆಯನ್ನು ಹದಗೆಡಿಸಿ ಆರ್ಥಿಕ ಪುನರುಜ್ಜೀವನದ ಪ್ರಗತಿಯನ್ನು ಪಡೆಯಬೇಕೆಂದು ಕಮ್ಯುನಿಸ್ಟರು ರೇಲ್ವೆ ಜನರನ್ನು ಸಂಪು ಹೂಡಲು ತಿಳಿಸುತ್ತಿರುವರಾದ್ದರಿಂದ ಅದನ್ನು ಎಲ್ಲ ಬಗೆಯಿಂದ ವಿರೋಧಿಸಬೇಕೆಂದು ರಾಷ್ಟ್ರೀಯ ಮಜದೂರ ಸಂಘವು ರೇಲ್ವೆ ಕೆಲಸಗಾರರನ್ನು ಕೇಳಿಕೊಳ್ಳುತ್ತದೆ.

ದಿಲ್ಲಿ ವಿಶ್ವವಿದ್ಯಾಲಯದ ಕರ್ನಾಟಕ ಸಂಘದ ಆಶ್ರಯದಲ್ಲಿ ಡಾ. ವಿಜಯೀಂದ್ರರಾಯರ ಅಧ್ಯಕ್ಷತೆಯಲ್ಲಿ ಸೇರಿದ ಸಭೆಯಲ್ಲಿ ಮಾನ್ಯ ದಿವಾಕರ ರಂಗರಾಯರು ಹಿಂದುಸ್ಥಾನದಲ್ಲಿ ಕರ್ನಾಟಕ ಎಂಬ ವಿಷಯವನ್ನು ಕುರಿತು ಮಾತಾಡುತ್ತ ಹಿಂದುಸ್ಥಾನದ ಸಂಸ್ಕೃತಿಯು ಬೇರೆ ಬೇರೆ ಪ್ರಾಂತಗಳ ಸಾಂಸ್ಕೃತಿಕಸಹಾಯದಿಂದ ಹೇಗೆ ಬೆಳೆದು ಬಂದಿದೆ ಎಂಬುದನ್ನು ವಿವರಿಸಿ ಭಾಷಾವಾರ ಪ್ರಾಂತೀಕರಣವೇ ಸಾಂಸ್ಕೃತಿಕ ಮಾರ್ಗ ಎಂದು ಅಭಿಪ್ರಾಯಪಟ್ಟರು.

ಹಿರಿಯೋಲಗದಲ್ಲಿ ಆಹಾರ ಸಮಸ್ಯೆಯ ಸಂಬಂಧದಲ್ಲಿ ನಡೆದ ಚರ್ಚೆಯ ಪರಿಣಾಮವಾಗಿ ಕೇಂದ್ರ ಮಂತ್ರಿಮಂಡಳದಲ್ಲಿ ಬದಲಾವಣೆಯಾಗುವದೆಂದೂ ಪ್ರೊ. ರಂಗಾ ಇವರಿಗೆ ಆಹಾರ ಶಾಖೆಯನ್ನು ಕೊಟ್ಟು ಶ್ರೀ ಜಯರಾಮದಾಸ ಇವರ ಕಡೆಗೆ ಕೇವಲ ಒಕ್ಕಲತನ ಶಾಖೆಯನ್ನು ಇಡುವರೆಂದೂ ತಿಳಿಯುತ್ತದೆ.

ಅಂಚೆ ಮತ್ತು ತಂತಿ ಶಾಖೆಯ ಕೆಲಸಗಾರರು ಸಂಪಿನ ವಿಚಾರವನ್ನು ಸದ್ಯಕ್ಕೆ ಬಿಟ್ಟುಗೊಡಬೇಕೆಂದು ಮಹಾಮಂಡಳದ ತೀರ್ಮಾನವಾಗಿದೆ.

ಗಾಂಧೀ ಕೊಲೆಯ ಖಟ್ಲೆಯಲ್ಲಿ ಶಿಕ್ಷಿಸಲ್ಪಟ್ಟ ನಥೂರಾಮ ಗೋಡಸೆ ಮುಂತಾದ ೭ ಜನ ಆರೋಪಿಗಳು ಮಾಡಿದ ಅಪೀಲನ್ನು ಪೂರ್ವ ಪಂಜಾಬ ಹಾಯಕೋರ್ಟು ಸ್ವೀಕರಿಸಿದೆ.

ಈಗ ಭಾರತದಲ್ಲಿ ೧೪೩೩೦೦೦ ಕಿಲೋವ್ಯಾಟ ವಿದ್ಯುತ್ ಉತ್ಪಾದನೆಯಾಗುತಿದ್ದು ೧೯೫೩ ರಲ್ಲಿ ಇದನ್ನು ೨೪೦೪೦೦೦ ಕಿಲೋವ್ಯಾಟಕ್ಕೆ ಹಾಗು ೧೯೫೮ ರಲ್ಲಿ ೪೫೧೭೦೦೦ ಕ್ಕೆ ಏರಿಸಬೇಕೆಂಬ ಯೋಜನೆ ಇದೆ. ಭಾರತದ ಎಲ್ಲ ಪ್ರಾಂತಗಳ ಹಾಗು ಸಂಸ್ಥಾನಗಳ ವಿದ್ಯುಚ್ಛಕ್ತಿ ಅಧಿಕಾರಿಗಳ ಪರಿಷತ್ತು ೨೧ ಕ್ಕೆ ದಿಲ್ಲಿಯಲ್ಲಿ ಸೇರಿ ವಿದ್ಯುಚ್ಛಕ್ತಿ ಯೋಜನೆಗಳ ಬಗ್ಗೆ ವಿಚಾರ ವಿನಿಮಯ ಮಾಡಲಾಯಿತು. ಈ ಯೋಜನೆಯನ್ನು ಹೇಗೆ ಯಶಸ್ವಿ ಮಾಡಬೇಕೆಂಬ ಬಗ್ಗೆ ಸೂಚಿಸಲು ಉಪಸಮಿತಿಯೊಂದು ನೇಮಕವಾಯಿತು.

ಮದ್ರಾಸ

ಗುಂತಕಲ್ಲಿನಲ್ಲಿ ನೀರಿನ ಕೊರತೆ ಇರುವದರಿಂದ ಅಖಿಲಭಾರತ ಕಾಂಗ್ರೆಸ ಸಮಿತಿಯ ಸಭೆಯನ್ನು ಕರ್ನೂಲಿನಲ್ಲಿ ಸೇರಿಸಬೇಕೆಂದು ಆಂಧ್ರಪ್ರಾಂತಿಕ ಕಾಂಗ್ರೆಸ ಸಮಿತಿಯು ನಿರ್ಧರಿಸಿತು. ಬರುವ ಎಪ್ರಿಲದಲ್ಲಿ ಈ ಸಭೆ ಸೇರುವದು.


ದಕ್ಷಿಣ ತ್ರಾವಣಕೋರಿನ ಎಂಟು ತಾಲೂಕುಗಳ ಪ್ರತಿನಿಧಿಗಳು ಸಭೆಸೇರಿ ತ್ರಾವಣಕೋರ ಸಂಸ್ಥಾನವು ಕೂಡಲೆ ಮದರಾಸ ಪ್ರಾಂತದಲ್ಲಿ ಲೀನವಾಗಬೇಕೆಂದು ನಿರ್ಣಯ ಸ್ವೀಕರಿಸಿದರು.

೨೦ ನೇ ತಾರೀಕು ರಾತ್ರಿ ಮದ್ರಾಸಕ್ಕೆ ಗ್ರಾಂಡಟ್ರಂಕ ಎಕ್ಸಪ್ರೆಸ್ ಗಾಡಿಯಲ್ಲಿ ನಾಗಪುರದಿಂದ ಬಂದ ಓರ್ವ ಹೆಣ್ಣುಮಗಳ ಸೂಟಕೇಸಿನಲ್ಲಿ ಕಳವಿನಿಂದ ೧೩ ಶೇರು ೨೬ ತೊಲಿ ಅಫು ತಂದದ್ದನ್ನು ರೇಲ್ವೆ ಪೋಲೀಸರು ಹಿಡಿದರು. ಈ ಅಫುವಿನ ಬೆಲೆ ೧೪೦೦೦ ರೂಪಾಯಿ ಆಗುವದು. ಅಫು ಜಪ್ತಮಾಡಿ ಆ ಹೆಣ್ಣುಮಗಳನ್ನು ಸೆರೆಹಿಡಿಯಲಾಯಿತು.

ಮದರಾಸ ಪ್ರಾಂತವನ್ನು ಉತ್ತರ ಮದರಾಸು ಮತ್ತು ದಕ್ಷಿಣ ಮದರಾಸು ಹೀಗೆ ಎರಡು ಭಾಗಗಳನ್ನಾಗಿ ಮಾಡುವ ಬಗ್ಗೆ ದಿಲ್ಲಿಯ ರಾಜಕೀಯ ವರ್ಗಗಳಲ್ಲಿ ಒಳ್ಳೆ ಜೋರಿನಿಂದ ವಿಚಾರವಿನಿಮಯ ನಡೆದಿದೆಯೆಂದು ತಿಳಿಯುತ್ತದೆ. ಭಾಷಾನ್ವಯ ಪ್ರಾಂತರಚನೆಯ ಪ್ರಶ್ನೆಯನ್ನು ಬಿಡಿಸುವ ಇದೊಂದು ರೀತಿಯೆಂದು ಹೇಳಲಾಗುತ್ತದೆ. ರಾಷ್ಟ್ರೀಯ ದೃಷ್ಟಿಯಿಂದ ಇಂಥ ವಿಭಜನೆ ಮಾಡುವದರಿಂದ ಆಂಧ್ರ ಆಂಧ್ರೇತರರಲ್ಲಿಯ ವೈಮನಸ್ಯವೂ ಕಡಮೆಯಾಗುವದಂತೆ. ಆದರೆ ಇದರಿಂದ ಕೇರಳ ಕರ್ನಾಟಕಗಳ ಪ್ರಶ್ನೆ ಬಿಡಲಾರದು.

ಪಾಕಿಸ್ತಾನ

ಹಿಂದುಸ್ತಾನಕ್ಕೆ ಪಾಕಿಸ್ತಾನದಿಂದ ೫೦ ಲಕ್ಷ ಹಿಂದುಗಳು ಹೋಗಿದ್ದಾರೆ. ಹಿಂದುಸ್ತಾನದಿಂದ ಪಾಕಿಸ್ತಾನಕ್ಕೆ ೭೦ ಲಕ್ಷ ಮುಸಲ್ಮಾನರು ಬಂದಿರುವರು. ಇದರಿಂದ ನಿರಾಶ್ರಿತರ ಸಮಸ್ಯೆಯನ್ನು ಎದುರಿಸಬೇಕಾಗಿದೆಯೆಂದು ಪಾಕಿಸ್ತಾನ ಸರಕಾರವು ಯುಕ್ತರಾಷ್ಟ್ರ ಸಂಘವು ಉದ್ಯೋಗದ ಬಗ್ಗೆ ಕಳಿಸಿದ ಪ್ರಶ್ನಮಾಲಿಕೆಗೆ ಉತ್ತರ ಕೊಡುವಾಗ ಅಭಿಪ್ರಾಯಪಟ್ಟಿದೆಯೆಂದು ತಿಳಿಯುತ್ತದೆ.



ಮನಃಪರಿವರ್ತನ

ಮನುಷ್ಯನು ಮನುಷ್ಯನಾಗುವುದು ಅಂದರೆ ಹುಟ್ಟಿದಂದಿನಿಂದ ಬೆಳೆದು ಒಂದು ದೊಡ್ಡ ರೂಪ ತಾಳುವುದು ಮನಃಪರಿವರ್ತನದಿಂದ. ಒಂದು ಮಗುವು ಹುಟ್ಟಿದಾಕ್ಷಣ ಅದರ ಸುತ್ತುಮುತ್ತಲಿರುವ ತಂದೆ, ತಾಯಿ ಮುಂತಾದ ಮನುಷ್ಯರು ಅದರ ಮನಸ್ಸು ಅಥವಾ ಬುದ್ಧಿ ಭಾವನೆಗಳನ್ನು ರೂಪಿಸಲು ಕಾರಣರಾಗುವರು. ಅನುಕರಣವು ಜೀವಿಯ ಪ್ರಾಕೃತ ಗುಣ. ಮನಸ್ಸೂ ಪಂಚೇಂದ್ರಿಯಗಳೂ ಅನುಕರಣವನ್ನಲ್ಲದೆ ಮೊದಲು ಮತ್ತೇನನ್ನೂ ಮಾಡಲಾರವು. ನಮ್ಮ ಕೆಲಸ ಕಾರ್ಯ, ಮಾತುಕತೆ, ನಡೆನುಡಿಗಳೆಲ್ಲವೂ ಅನ್ಯದೃಷ್ಟಾಂತದ ಅನುಕರಣದ ಫಲವೇ. ಈ ಅನುಕರಣಕ್ಕೆ ಸಾದೃಶ್ಯ ಆಧಾರವಲ್ಲದೆ ತಾದಾತ್ಮ್ಯವಲ್ಲ.

ರೂಢಿ ದುರ್ಗ

ಸಾದೃಶ್ಯವೇ ಮನುಷ್ಯ ಶಿಶುವಿನ ಜ್ಞಾನ ಸಂಗ್ರಹಕ್ಕೆ ಆಧಾರ. ಹುಟ್ಟಿದ ಮಗು ತಾನು ಹೆಣ್ಣು, ಗಂಡು, ಹಿಂದು, ಮುಸಲ್ಮಾನ, ಧನಿಕ, ದರಿದ್ರ, ಶಕ್ತ ಅಶಕ್ತ ಮುಂತಾದ ಜ್ಞಾನವನ್ನು ಹೋಲಿಕೆ ಮತ್ತು ತದವಿನಾಭಾವಿಯಾದ ತಾರತಮ್ಯ ಇವುಗಳಿಂದಲೇ ಗ್ರಹಿಸುತ್ತದೆ. ದೈವಕೃತ ಭೇದ ಅಂಗ, ಲಿಂಗ, ಮನಃಶಕ್ತಿ ಇವುಗಳಿಗೆ ಮಾತ್ರ ಪರಿಮಿತ. ಉಳಿದ ಎಲ್ಲವೂ ಮನುಷ್ಯಕೃತ. ಅಂಗಲಿಂಗಗಳ ಭೇದದ ಉದ್ದೇಶ ಮತ್ತು ಸ್ಥಾನಮಾನಗಳನ್ನು ನಿರ್ಣಯಿಸುವುದು ಮನಃಶಕ್ತಿ. ಈ ಮನಃಶಕ್ತಿ ಕಡಿಮೆಯುಳ್ಳವರು ಬಹುಬೇಗ ಸಮಾಜದ ರೂಢಿ ಅಭಿಪ್ರಾಯಗಳಲ್ಲಿ ತಾದಾತ್ಮ್ಯ ಹೊಂದಿ ತಮ್ಮ ವ್ಯಕ್ತಿತ್ವವನ್ನು ಅಯತ್ನತಃ ರೂಪಿಸಿಕೊಳ್ಳುತ್ತಾರೆ. ಇಂಥವರೇ ಜಗತ್ತಿನಲ್ಲಿ ಬಹಳ. ಈ ಮನಃಶಕ್ತಿಯನ್ನು ಬೆಳೆಸಿಕೊಳ್ಳುವ ಸುಯೋಗವುಳ್ಳವರು ಸ್ವತಂತ್ರ ವಿಚಾರಗಳಿಂದ ತಮ್ಮ ವ್ಯಕ್ತಿತ್ವವನ್ನು ಆದಷ್ಟು ಮಟ್ಟಿಗೆ ಸ್ವತಂತ್ರವಾಗಿ ರೂಪಿಸಿಕೊಳ್ಳುತ್ತಾರೆ. ಹೀಗೆ ರೂಪಿಸಿಕೊಳ್ಳುವುದಕ್ಕೆ ಮಾನವ ಕುಲದ ಆದಿಯಿಂದ ಇಂದಿನ ವರೆಗೆ ಬಂದ ವೇದ, ಪುರಾಣ, ಇತಿಹಾಸ, ರೂಢಿ, ಸಂಪ್ರದಾಯಗಳಲ್ಲಿಯ ಕವಿಕಲ್ಪನೆ ದುರ್ಭೇದ್ಯವಾದ ದುರ್ಗವಾಗಿ ಅಡ್ಡ ಬರುತ್ತದೆ. ದುರ್ಗವು ದುರ್ಗಮ; ಅದಕ್ಕೆ ಬಲಿಯಾಗದವರು ಅತ್ಯಲ್ಪ. ಬುದ್ಧಿಯ ಅಥವಾ ಶಾಸ್ತ್ರಗಳ ಬಲದಿಂದ ಈ ಕೋಟೆಯನ್ನು ಭೇದಿಸಲು ಸಾಧ್ಯವಾದರೆ ಆಗ ಮಾತ್ರ ನಿಜವಾದ ಸ್ವಾತಂತ್ರ್ಯ ಸಿಗುವುದು. ಹರಿತವಾದ ಯುಕ್ತಾಯುಕ್ತ ವಿವೇಕದಿಂದ ಆ ಅಭಿಪ್ರಾಯ ರಾಶಿಗಳಲ್ಲಿ ನ... ಪೂರಕಗಳಾವುವು ಮಾರಕಗಳಾವುವು ಎಂಬುದನ್ನು ವಿವೇಚಿಸಿದಲ್ಲದೆ ನಮ್ಮ ವ್ಯಕ್ತಿತ್ವ ನಮ್ಮ ಸ್ವತಂತ್ರ ಬುದ್ಧಿಗೆ ಮೆಚ್ಚಿಕೆಯಾಗುವಂತೆ ರೂಪಿತವಾಗದು.

ವ್ಯಕ್ತಿತ್ವ ಸಿದ್ಧಿ

ಹುಟ್ಟಿದೊಡನೆಯೇ ನಮ್ಮ ಶಿಶುಗಳಿಗೆ ಲತಾ, ಗಂಗಾ, ಲಕ್ಷ್ಮೀ, ಚಂಪಾ ಮುಂತಾದ ಹೆಸರನ್ನು ಇಡಲಾಗುತ್ತದೆ. ಅವು ಸುಂದರವೆಂದು ಇಡುವವರೂ ಇಡಿಸಿಕೊಂ... ವರೂ ತಿಳಿದು ತೃಪ್ತರಾಗುತ್ತಾರೆ. ...ರ್ಯದ ಭ್ರಮೆಯೇ ದಾಸ್ಯದ ಮೂಲ. ಅಂಥ ಹೆಸರಿನಿಂದ ಕರೆವ ಭಿನ್ನಲಿಂಗಿಗಳ ಮತ್ತು ಕರೆಸಿಕೊಳ್ಳುವ ನಮ್ಮ ಅಭಿಪ್ರಾಯ ಒಂದೇ ಆಗಿರುತ್ತದೆ. ಜಡಪದಾರ್ಥಗಳಿಗೆ ಹೇಗೆ ಒಬ್ಬ ಒಡೆಯ ಅವಶ್ಯಕವೋ ಹಾಗೇ ಅಂಥ ಹೆಸರಿನ ನಮಗೂ ಒಬ್ಬ ಒಡೆಯನ ಅಗತ್ಯ ಮನಸಾ ಉತ್ಪನ್ನವಾಗುತ್ತದೆ. ಅಂಥ ಹೆಸರಿನಿಂದ ಕರೆಯಿಸಿಕೊಳ್ಳದ ಭಿನ್ನಲಿಂಗಿಗಳು ಎಷ್ಟೇ ಸಾಮ್ಯವಾದಿಗಳಾದರೂ ಅವರ ಮನದಲ್ಲಿ ಅಂಥವರ ಬಗ್ಗೆ ಸ್ವಾಮ್ಯದ ಭಾವನೆ ಮೂಡುತ್ತದೆ. ಅಂಥ ಹೆಸರಿನವರಾದರೂ ತಾವು ಸ್ವಾಮ್ಯಕ್ಕೊಳಪಡುವ ಒಂದು ಆಸ್ತಿ ಎಂಬ ಭಾವನೆಯಿಂದ ತೃಪ್ತಿ ಹೊಂದುತ್ತಾರೆ. ಆ ಆಸ್ತಿಯ ಸೌಂದರ್ಯಪ್ರಶಂಸೆಯಲ್ಲಿ ತಾದಾತ್ಮ್ಯ ಹೊಂದಿ ತೃಪ್ತಿಪಡೆದರೂ ವ್ಯವಹಾರದಲ್ಲಿ ತಮ್ಮ ಸ್ಥಾನ ಗೌಣವೆಂಬುದು ತಮಗೇ ಅನಿಸಿದಾಗ ವ್ಯಥೆಯಾಗುತ್ತದೆ. ವ್ಯವಹಾರದ ಭೌತಿಕ ವಿಷಯಗಳಲ್ಲಿ ತಾವೇ ಸ್ವಾಮಿ (ಒಡೆಯ) ಗಳಾಗಿದ್ದರೂ ಆ ಸ್ವಾಮಿತ್ವಕ್ಕೆ Public Recognition ಸಾರ್ವಜನಿಕ ಅಭಿಜ್ಞಾನ ಸಿಕ್ಕದೆ ಒದ್ದಾಡುವಂತಾಗುತ್ತದೆ. ಜೀವನದ ಎಲ್ಲ ಬೆಲೆಗಳೂ ಸಾರ್ವಜನಿಕ ಇಲ್ಲವೆ ಸಾಮಾಜಿಕ ಮನ್ನಣೆಯಿಂದಲೇ ಅಸ್ತಿತ್ವದಲ್ಲಿರುವುವು. ಆ ಮನ್ನಣೆ ದೊರಕಿಸುವುದು ಅರ್ಧ ವ್ಯಕ್ತಿಗತ, ಅರ್ಧ ಸಮಾಜಗತ. ತಮ್ಮ ಪಾಲಿನ ಪ್ರಯತ್ನವನ್ನಾದರೂ ಅದಕ್ಕಾಗಿ ಮಾಡುವ ವ್ಯಕ್ತಿಗಳು ಅತ್ಯಂತ ದುರ್ಲಭ. ತಾನು ಏನಾಗಬೇಕು, ಯಾರ ಹಾಗೆ ಆಗಬೇಕು ಎಂಬ ಕಲ್ಪನೆ ಯಾವಳಿಗೂ ಸ್ಪಷ್ಟವಾಗಿ ಇರದು. ಸದ್ಯದ ಸಮಾಜದಲ್ಲಿ ಮನ್ನಿಸಲ್ಪಟ್ಟ ಬೆಲೆಗಳಿಗಿಂತ ಹೆಚ್ಚಿನ ಬೆಲೆಯನ್ನು ಪಡೆಯಬಯಸುವವಳು ಈ ವ್ಯಕ್ತಿತ್ವರೂಪಣದ ಮರ್ಮವನ್ನು ತಿಳಿದು ಹೆಸರು, ವೇಷ, ಶರೀರ ಮುಂತಾದ ಆತ್ಮಾವರಣಗಳೊಡನೆ ತಾನು ಎಷ್ಟರ ಮಟ್ಟಿಗೆ ಎಲ್ಲೆಲ್ಲಿ ತಾದಾತ್ಮ್ಯ ಭಾವತಾಳಬೇಕು, ಎಲ್ಲೆಲ್ಲಿ ಉಲ್ಲಂಘಿಸಬೇಕು ಎಂಬುದನ್ನು ನಿರ್ಧರಿಸಿ ಆಚರಿಸಬೇಕು.

ಭೋಗ್ಯತಾ ಭಾವ

ಉದಾಹರಣೆಗಾಗಿ ಲಕ್ಷ್ಮಿಯನ್ನು ತೆಗೆದುಕೊಳ್ಳೋಣ. ಲಕ್ಷ್ಮಿಯೆಂದಾಕ್ಷಣ "ನಾನು ಹೆಂಗಸು, ಸುಂದರಿ, ಮೃದುವಾದವ್ಯವಯವಗಳುಳ್ಳ ಒಂದು ರತ್ನ-ರತ್ನದಂತೆ ನಿಷ್ಕ್ರಿಯ ಸೌಂದರ್ಯವಷ್ಟೇ ಇಟ್ಟುಕೊಂಡರೆ ನನ್ನ ವ್ಯಕ್ತಿತ್ವ ಪೂರ್ಣವಾದಂತಾಯಿತು. ಇಂಥ ನನ್ನನ್ನು ಯಾವನಾದರೂ ಶಕ್ತನು ಒಯ್ದು ಲಾಲನೆ ಪಾಲನೆ ಮಾಡತಕ್ಕದ್ದೇ ಪರಮಸುಖ. ನಾನು ಅವನಿಂದ ಭೋಗ್ಯಳು; ಅವನು ನನ್ನನ್ನು ಭೋಗಿಸುವವನು. ನಾನು ಹಾರಾದಿ ಅಲಂಕರಣ ಸಾಮಗ್ರಿಗಳಂತೆ ಅವನಿಗೆ ಶೋಭೆ ಕೊಡತಕ್ಕವಳು. ಈ ಜ್ಞಾನದಿಂದ ಇದ್ದರೆ ತನ್ನ ಇತಿಕರ್ತವ್ಯ ಮುಗಿಯಿತು. ಅಷ್ಟಕ್ಕೇ ಅವನು ತೃಪ್ತನಾಗಿ ನನ್ನನ್ನು ತೃಪ್ತಿಪಡಿಸಬೇಕು" ಎಂಬ ಭಾವನೆ ಬೆಳೆದ ಲಕ್ಷ್ಮಿ ಸಾತ್ವಿಕಳಾದರೆ ಇಷ್ಟು ಅವನಿಂದ ಸಿಕ್ಕಿದರೆ ಪರಮಾನಂದ ಹೊಂದುತ್ತಾಳೆ; ರಾಜಸಳಾದರೆ ಸ್ಥಾನಗೌಣತ್ವದ ಜ್ಞಾನದಿಂದ ಎಂಥ ಸೌಂದರ್ಯ ಪ್ರಶಂಸೆ, ಧನಕನಕಗಳ ಕಾಣಿಕೆ, ಇತರ ಭೌತಿಕ ಮತ್ತು ಇಂದ್ರಿಯ ಭೋಗಗಳು ದೊರೆತರೂ ಭೋಗ ಕರ್ತೃತ್ವದ ಸ್ವತಂತ್ರ ಸ್ಥಿತಿ ಬುದ್ಧಿಗೆ ಅಳವಡದೆ, ನೀಚೋಹಂಬುದ್ಧಿಯಿಂದ ಮತ್ಸರ, ಅತೃಪ್ತಿ, ನಿರಾಶೆಗಳಿಗೆ ಗುರಿಯಾಗಿ ನರಳುತ್ತಾಳೆ. ಅದುದರಿಂದ ಸ್ತ್ರೀಯರ ಸ್ವಾತಂತ್ರ್ಯ... ಪುರುಷರಿಂದ ಭೌತಿಕ ಸಾಧನಗಳ ಮೂಲಕ ಕಸಿದುಕೊಳ್ಳುವ ವಸ್ತುವಲ್ಲ. ಪುರುಷರು ಹಾಗೆ ಸ್ತ್ರೀಯರಿಂದ ಅಂಥ ಅಪಹರಿಸಿಯೂ ಇಲ್ಲ. ಕಾಯದೆ ಹೇಗೇ ಇದ್ದರೂ ಗಾರ್ಹಸ್ಥ ಜೀವನದ ನಿತ್ಯ ವ್ಯವಹಾರದಲ್ಲಿ ಸ್ತ್ರೀಗೇ ಬಳಕೆಯ ಆಸ್ತಿಗಳ ಮೇಲೆ ಯಾವಾಗಲೂ ಹೆಚ್ಚಿನ ಒಡೆಯತನವಿದೆ. ಹೊರಗೆ ಹೋಗಿ ನೌಕರಿ ಮಾಡಿದ ಮಾತ್ರಕ್ಕೆ ಹೆಚ್ಚು ಸ್ವಾತಂತ್ರ್ಯ ಬರುತ್ತದೆ ಎಂಬುದು ಅಜ್ಞಾನ. ಆಗ ನಮ್ಮ ಸ್ವಾತಂತ್ರ್ಯ ಗಂಡಸರಷ್ಟೇ ಕೆಳಮಟ್ಟಕ್ಕೆ ಇಳಿಯುವುದು; ಅವರಂತೆಯೇ ಹತ್ತು ಜನ ವ್ಯಾವಹಾರಿಕರ ಆಳಾಗಬೇಕಾಗುವುದು. ಹಾಗಲ್ಲದೆ ನಮಗೆ ನಮ್ಮ ವಕ್ತಿತ್ವದ ಜ್ಞಾನ ಉಂಟಾದರೆ, ಕರ್ತೃತ್ವ ಭೋಕ್ತೃತ್ವಗಳ ಭಾವನೆ ಅಳವಟ್ಟರೆ ನಿಮಿಷಾರ್ಧದಲ್ಲಿ ನಾವು ಗಂಡಸರಿಗಿಂತ ಹೆಚ್ಚು ಸ್ವತಂತ್ರರಾಗಬಲ್ಲೆವು; ಅಥವಾ ಅವರ ಸಮಾನಸ್ಕಂಧರೆಂದು ಅವರಿಗೂ ನಮಗೂ ಒಟ್ಟಿಗೆ ಅನಿಸುವಂತಾಗಿ, ಆದರ್ಶ ನಾಗರಿಕ ದಾಂಪತ್ಯಸುಖ ನಮ್ಮ ಸ್ತ್ರೀ ಪುರುಷರಿಗೆ ಕರಗತವಾಗುವುದು. ದಾಂಪತ್ಯದಲ್ಲಿರುವುದು ಪರಸ್ಪರ ಭೋಗವಲ್ಲದೆ ಏಕಪಕ್ಷೀಯ ಭೋಗವಲ್ಲ. ಇದಕ್ಕೆ ಬೇಕಾದುದು ಬುದ್ಧಿಪರಿವರ್ತನ, ಪುರುಷಧರ್ಮಗ್ರಹಣ, ಮಿತ್ರತ್ವದ ಸಾಮ್ಯನೀತಿಯನ್ನು ಹೃದ್ಗತ ಮಾಡಿಕೊಳ್ಳುವುದು.

ಯೋಗ್ಯ ವಾತಾವರಣದ ಅಗತ್ಯ

ಇಂಥ ವಾತಾವರಣವನ್ನು ನಾವು ಹುಟ್ಟುವ ಶಿಶುವಿಗೆ ಕಲ್ಪಿಸಿಕೊಡಬೇಕು. ಅದಕ್ಕೆ ಹೆಸರಿಡುವುದರಿಂದ ಆರಂಭಿಸಿ, ಉಡಿಗೆ, ತೊಡಿಗೆ, ಮಾತುಕತೆ, ನಡೆನುಡಿಗಳೆಲ್ಲದರಲ್ಲೂ ಪುರುಷೇತರತ್ವ ಭಾವನೆ ಬರದಂತೆ ವ್ಯವಹರಿಸಬೇಕು. ಸ್ತ್ರೀತ್ವ ಪುರುಷತ್ವಗಳ ಭೇದ ಕೇವಲ ಸಂತತಿಗಾಗಿ ನಿರ್ಮಿತವಾದುದು. ಆ ಉದ್ದೇಶದಲ್ಲಲ್ಲದೆ ಮಿಕ್ಕ ಎಲ್ಲ ವ್ಯವಹಾರದಲ್ಲೂ ಭೇದಗ್ರಹಣ ವ್ಯವಹಾರವನ್ನು ಬಿಡಬೇಕು. ಆ ದಿನ ಬಂದ ಹೊರತು ನಮ್ಮ ಆಂದೋಲನಕ್ಕೆ ಯೋಗ್ಯ ಫಲ ದೊರೆಯದು ಎಂಬುದು ಬುದ್ಧಿವಂತೆಯಾದವಳಿಗೆ ವಿಶೇಷ ವಿಸ್ತರಿಸಿ ಹೇಳಬೇಕಿಲ್ಲ. ಇದರ ಸಾಧ್ಯಾಸಾಧ್ಯತೆ ಸಮಾಜದ ಸ್ತ್ರೀಯರ ಧೈರ್ಯ, ಸಾಹಸ, ವಿಚಾರ ನಿಶಿತತೆಗಳನ್ನು ಅವಲಂಬಿಸಿದೆ. ಕೇವಲ ಗರ್ವ, ನಿಂದೆ, ಮತ್ಸರಾದಿ ಭಾವನೆಗಳಿಂದ ಅಧಃಪಾತವಲ್ಲದೆ ನಮ್ಮ ಉದ್ಧಾರವಾಗದು. ಅಲಂಕರಣದ ಭ್ರಮೆ, ಧನಕನಕಗಳ ಆಶೆ, ಔದಾಸೀನ್ಯ, ನೀಚೋಹಂಬುದ್ಧಿ, ಅಜ್ಞಾನ, ಅಂಧ ಶ್ರದ್ಧೆ, ಮುಂತಾದ ದೌರ್ಬಲ್ಯಗಳನ್ನು ಬಿಟ್ಟು ಪಾಂಡಿತ್ಯವನ್ನೂ ಪೌರುಷವನ್ನೂ ಸ್ನೇಹ ಮಯತೆಯನ್ನೂ ಸಂಪಾದಿಸಿದಲ್ಲದೆ ನಮಗೆ ಪುರುಷಸಾಮ್ಯ ದೊರಕದು. ಹೀಗೆ ಬುದ್ಧಿಪರಿವರ್ತನಯೋಗವನ್ನು ತಾಯಂದಿರು ತಂತಮ್ಮ ಮನೆಗಳಲ್ಲಿ ಸಾಧಿಸ ಹೊರಟರೆ ಮುಂದಿನ ಪೀಳಿಗೆಯಲ್ಲೇ ಹೊರಗಿನ ಪರಿಸ್ಥಿತಿ ಇದ್ದಂತೆಯೇ ಇದ್ದರೂ ಲಿಂಗಭೇದಬುದ್ಧಿಯ ದುರ್ಜಯ್ಯವಾದ ಮಾನಸಿಕ ದಾಸ್ಯದ ಪರಿಹಾರವನ್ನು ನಾವು ಕಾಣಬಹುದು.

— ಹಿರಿಯಕ್ಕ

ಹೃದಯ ಪರೀಕ್ಷೆ

(ನೆಯ ಪುಟದಿಂದ ಮುಂದರಿದುದು)

ಬಿಡಲಿಲ್ಲ. ಪತ್ರದ ಮೂಲಕ ತಿಳಿಸಲು ಧೈರ್ಯ ಸಾಲಲಿಲ್ಲ. ಅಲ್ಲದೆ ಅದಕ್ಕೆ ಯೋಗ್ಯವಾದ ಸಂದರ್ಭವೂ ದೊರಕಲಿಲ್ಲ. ಇವತ್ತಾದರೋ ನಿನ್ನ ಹೆಂಡತಿಯು ಸದ್ಯದಲ್ಲಿಯೇ ತನ್ನ ತವರು ಮನೆಗೆ ಹೋಗುವಳೆಂದು ಕೇಳಿದೆ. ಆದ್ದರಿಂದ ಮನಸ್ಸನ್ನು ಗಟ್ಟಿಮಾಡಿ ಧೈರ್ಯದಿಂದ ನಿನಗೀ ಪತ್ರವನ್ನು ಬರೆಯುತಿದ್ದೇನೆ.

ಮನೋಹರಾ, ಆಹಾ! ಹೆಸರಿಗೆ ತಕ್ಕಂತಿವೆ ನಿನ್ನ ರೂಪ ಗುಣಗಳು. ಮನೆಗೆ ಹೋದರೂ ನಿನ್ನ ರೂಪವೇ ನನ್ನ ಕಣ್ಣಿಗೆ ಕಟ್ಟಿದಂತಾಗುತ್ತದೆ. ಈಗೀಗಲಂತೂ ಅದು ಬಹಳ ವಿಪರೀತವಾಗಿದೆ. ನಿನಗೂ ಹೆಂಡತಿಯು ಮನೆಯಲ್ಲಿಲ್ಲದ ಸಮಯದಲ್ಲಿ ನನ್ನಿಂದ ಸುಖ ದೊರೆಯಬಹುದು. ಮನೋಹರಾ! ನನ್ನನ್ನು ನೀನು ಯಾವಾಗ ತೃಪ್ತಿಗೊಳಿಸುವೆ? ನಿನ್ನ ಚರಣದಾಸಿಯಾದ ಈ ರೂಪಳ ಆಕಾಂಕ್ಷೆಯನ್ನು ನೀನು ಎಂದೆಂದಿಗೂ ಮಣ್ಣುಪಾಲು ಮಾಡಲಿಕ್ಕಿಲ್ಲವೆಂದು ನನಗೆ ಭರವಸೆಯಿದೆ. ನೀನು ನನ್ನನ್ನು ನಿಜವಾಗಿಯೂ ಪ್ರೀತಿಸುವಿಯೋ ಇಲ್ಲವೋ ಎಂದು ಪತ್ರ ಮೂಲಕ ಇಂದೇ ನನಗೆ ತಿಳಿಸಬೇಕಾಗಿ ಕೋರುತ್ತೇನೆ.

ಇತಿ ನಿನ್ನ ಪ್ರೇಮಾಕಾಂಕ್ಷಿಣಿ
ರೂಪಾ

ಕಾಗದವನ್ನು ಪೂರ್ಣ ಓದಿ ತನ್ನ ಕೋಟಿನ ಕಿಸೆಯೊಳಗಿಟ್ಟು ಮನೋಹರನು ಊಟಕ್ಕೆ ಕುಳಿತ. ವಿಮಲೆಯು ಆ ಪತ್ರದ ಕುರಿತು ಗಂಡನನ್ನು ವಿಚಾರಿಸಲೂ ಇಲ್ಲ; ಅದನ್ನು ಅವನು ತಾನಾಗಿ ಹೇಳಲೂ ಇಲ್ಲ. ಊಟಕ್ಕೆ ಕುಳಿತಾಗಲೂ ಅವನ ಮನಸ್ಸಿನಲ್ಲಿ ಏನೋ ಒಂದು ಬಗೆಯ ಕಳವಳವಿರುವಂತೆ ಕಾಣುತಿತ್ತು. ಅಂದು ರವಿವಾರವಾಗಿತ್ತು. ಸಂಜೆ, ಮುಂಚಿನ ದಿನ ನಿರ್ಣಯವಾದಂತೆ ಅವರಿಬ್ಬರೂ "ಜೀನತ್" ಚಿತ್ರಕ್ಕೆ ಹೋಗಿ ಬಂದರು. ಆದರೂ ಮನೋಹರನ ವರ್ತನೆ ಎಂದಿನಂತಿರಲಿಲ್ಲ.

ಆ ದಿನ ರಾತ್ರಿ, ವಿಮು ಮಲಗಿದರೂ ... ಲೆಗೆ ನಿದ್ರೆ ಹತ್ತದು. ಗಂಡನಿಗೆ ನಿದ್ರೆ ಹತ್ತಿ ... ನಿಚಿತವಾದ ಕೂಡಲೇ ಅವಳು ಸದ್ದುಮಾ... ಮೆಲ್ಲನೆ ಎದ್ದು ಪಿಟ್ಯದ್ದೀಪವನ್ನು ಬೆಳ... ಮೇಜಿನ ಮೇಲೆಲ್ಲ ಏನೋ ಹುಡುಕತೊ... ಗಿದಳು. ಅದರ ಒಳ್ಳೆ ... ಮೇಜಿನ ಡ್ರಾವರುಗಳನ್ನು ಎಳೆದು ಅವುಗ... ಹುಡುಕಿದಳು. ಅದರಲ್ಲಿಯೂ ಅವ... ಬೇಕಾದ ವಸ್ತುವು ಸಿಗಲಿಲ್ಲ. ಕೊನೆಗೆ ಕೋ... ಜೇಬಿನೊಳಗೆ ಕೈಹಾಕಿದಳು. ಕೂಡಲೇ ದೊ... ಕಿತು ಅವಳಿಗೆ ಬೇಕಾದ ವಸ್ತುವು. ಅ... ಅವಳ ಗಂಡನು ಮಧ್ಯಾಹ್ನ ಬಂದ ಪತ್ರ... ಬರೆದ ಪ್ರತ್ಯುತ್ತರ. ಅತ್ಯಾತುರದಿಂದ ಅದ... ಅವಳು ಓದತೊಡಗಿದಳು.

ಅದರಲ್ಲಿ ಹೀಗಿತ್ತು:-

೨೮—೭—೧೯...

ಪ್ರಿಯ ಭಗಿನಿ ರೂಪಳಿಗೆ,

ಮನೋಹರನು ಮಾಡುವ ಪ್ರಣಾಮಗಳ... ನಿನ್ನ ಕಾಗದವು ತಲುಪಿ ಅಭಿಪ್ರಾಯವು ... ಯಿತು. ರೂಪಾ! ನೀನೂ ಇಂತಹ ನೀಚ ಕೃ... ಗಳಿಗೆ ಕೈಹಾಕುವವಳೆಂದು ನಾನು ಕನ... ಮನಸುಗಳಲ್ಲಿಯೂ ಎಣಿಸಿರಲಿಲ್ಲ. ಆಲೋ... ನೋಡಿದರೆ, ಸಾಮಾನ್ಯವಾಗಿ ಎಲ್ಲಾ ನಸುರ... ಹಣೆಬರಹವೇ ಇದು ಎಂತ ತೋರುತ್ತ... ಆದರೆ ನಾನೇನು ಅಂಥ ವಿಷಯಲಂಪಟನ... ನಿಮ್ಮಂತವರ ಜಾಲದಲ್ಲಿ ನಾನು ಸುಲಭವಾ... ಬೀಳತಕ್ಕವನಲ್ಲವೆಂಬುದನ್ನು ಸರಿಯಾಗಿ ತಿ... ಈ ಲೋಕದಲ್ಲಿ ವಿಮಲೆಯನ್ನು ಬಿಟ್ಟು ಉಳಿ... ಎಲ್ಲಾ ಸ್ತ್ರೀಯರೂ ನನಗೆ ನನ್ನ ತಾ... ಮತ್ತು ಅಕ್ಕ ತಂಗಿಯರ ಸಮಾನರು. ವಿಮ... ಲೆಯು ತನ್ನ ತವರುಮನೆಗೆ ಹೋದರೇನ... ಯಿತು? ನನ್ನ ಸುಖಕ್ಕಾಗಿ ಇಲ್ಲಿ ನನಗೆ ಯಾ... ಅವಶ್ಯಕತೆಯೂ ಇಲ್ಲ.

ತಂಗೀ, ನಿನಗೆ ಇನ್ನೇನನ್ನು ಬರೆಯಲಿ... ನಿನ್ನನ್ನು ನಾನು ಮೊದಲೂ ಪ್ರೀತಿಸುತಿದ್ದೆ... ಈಗಲೂ ಪ್ರೀತಿಸುತ್ತೇನೆ. ಆದರೆ ಅ... ಮಾತ್ರ ಭಗಿನೀವಾತ್ಸಲ್ಯವಷ್ಟೆ. ವಿಶೇಷವೇನ... ಇಲ್ಲ.

ಇತಿ ನಿನ್ನ ಸಹೋದರ
ಮನೋಹರ

ಇದನ್ನು ಓದಿದ ವಿಮಲೆಯು ಆನಂದ ಪ... ವಶಳಾದಳು. ಅವಳು ಹುಚ್ಚಿಯಂತೆ ... ಹೋಗಿ, ಮಲಗಿದ್ದ ಗಂಡನ ಮುಖದ ಮೇ... ಮುತ್ತುಗಳ ಸುರಿಮಳೆಯನ್ನೇ ಕರೆಯತೊಡ... ದಳು. ಮನೋಹರನು ದಿಗಿಲುಗೊಂಡ... ಎಚ್ಚತ್ತು, 'ಏನು ವಿಮಲೆ, ಇದೆಂತಹ ವಿ... ರೀತ ವರ್ತನೆ ನಿನ್ನದು?'

'ಇವತ್ತು ನಿಮಗೆ ಪತ್ರ ಬರೆದ ರೂಪ... ನಾನೇ. ಈಗ ಅದರ ಪ್ರತ್ಯುತ್ತರವನ್ನು ಕದ... ಓದಿಕೊಂಡ ಸಂತೋಷದ ಪ್ರಭಾವವಿದು ... ಗೊತ್ತಾಯಿತೇ?'

'ಅಹಾ! ಇದೊಂದೂ ನನಗೆ ಅರ್ಥವಾಗು... ದಿಲ್ಲವಲ್ಲ!'

'ಪ್ರಿಯಾ, ನಿಮ್ಮ ಮೇಲಿನ ಸಂಶಯದಿಂ... ಇವತ್ತು ಮುಂಜಾನೆ ನೀವು ಪಾಕಿಂಗಿಗೆ ಹೊರ... ಸಮಯದಲ್ಲಿ ನಾನೇ ರೂಪಳ ಹೆಸರಿನಲ್ಲಿ ... ಪತ್ರವನ್ನು ಬರೆದಿದ್ದೆ. ಅದರ ಉ... ಕೈಗೆ ದೊರಕಿತು. ಅದನ್ನು ಓದಿ ... ಆನಂದವಾಯಿತು. ನಿಮ್ಮ ಮನ... ಗೊತ್ತಾಯಿತು. ಇನ್ನು ಮುಂದೆ ... ಎಂದೆಂದಿಗೂ ನಿಮ್ಮ ಮೇಲೆ ಸಂಶಯವ... ತಾಳುವುದಿಲ್ಲ. ಈಗ ಒಮ್ಮೆ ತಿಳಿಯದೆ ಹಾ... ಮಾಡಿದುದಕ್ಕಾಗಿ ನನ್ನನ್ನು ಕ್ಷಮಿಸಬೇಕ... ಪ್ರಭೂ....'

ಇದನ್ನು ಕೇಳಿ ಮನೋಹರನಿಗೆ ಆಶ್ಚರ್ಯ... ಸಂತೋಷವೂ ಒಂದೇ ಸಮನೆ ಉಂಟಾದವು... ಅವನು ವಿಮಲೆಯನ್ನು ಪ್ರೀತಿಯಿಂದ ಬ... ಯಾಗಿ ಅಪ್ಪಿಕೊಂಡ.

Reg. No. B. 3148 | LICENCE No. 3 Licensed to Post without Prepayment | KARMAVEER 28-2-49

ಪುಸ್ತಕ ಪರಿಚಯ

೧ ಕೆಲವು ಸಣ್ಣ ಕಾವ್ಯಗಳು

ಬರೆದವರು ಮತ್ತು ಪ್ರಕಾಶಕರು ಶ್ರೀ ಸೇಡಿಯಾಪು ಕೃಷ್ಣಭಟ್ಟರು ಸೈಂಟ್ ಎಲೊಸಿಯಸ್ ಕಾಲೇಜು, ಮಂಗಳೂರು ಪುಟ ೬೫, ಬೆಲೆ ೧॥ ರೂಪಾಯಿ.

೨ ಐಕ್ಯಗಾನ

ಬರೆದವರು ಶ್ರೀ ಕಯ್ಯಾರ ಕಿಞ್ಞಣ್ಣ ರೈ. ಪ್ರಕಾಶಕರು ಎಂ. ಟಿ. ಎ. ಲಿಮಿಟೆಡ್ ಮಂಗಳೂರು. ಪುಟ ೭೩ ಬೆಲೆ ೧॥ ರೂ.

೩ ಗಾನಕೇಳಿ

ಬರೆದವರು ರಸಿಕ, ಕನಸಿಗ, ಕೀರ್ತಿ ಎಂಬ ತ್ರಿಮೂರ್ತಿಗಳು. ಪ್ರಕಾಶಕರು ವಿದ್ಯಾವರ್ಧಕ ಸಂಘ, ಧಾರವಾಡ. ಪುಟ ೬೪ ಬೆಲೆ ೧ ರೂ.

೪ ಕಲ್ಯಾಣ

ಬರೆದವರು ಶ್ರೀಮತಿ ಬೆಳಗೆರೆ ಜಾನಕಮ್ಮ. ಪ್ರಕಾಶಕರು ಶರತ್ ಪಬ್ಲಿಕೇಶನ್, ಬಸವನಗುಡಿ, ಬೆಂಗಳೂರು ನಗರ. ಪುಟ ೮೫ ಬೆಲೆ ೧ ರೂ.

ಕೃಷ್ಣಭಟ್ಟರ ಸಂಗ್ರಹದಲ್ಲಿ ನಾಲ್ಕು ಸಣ್ಣ ಕಾವ್ಯಗಳಿವೆ. ಮೊದಲನೆಯದು ಪುಣ್ಯಲಹರಿ. ಅದರಲ್ಲಿ ಶಬರಿಯ ಕಥೆಯಿದೆ. ಪಂಡಿತರಿಗೆ ಸಹಜವಾದ ಬುದ್ಧಿಯಿಂದ ಅಪೂರ್ವವಾದ "ಪಿರಿಯಕ್ಕರ"ದಲ್ಲಿ ಇದನ್ನು ಬರೆದಿದ್ದಾರೆ. ಎರಡನೆಯದು ಕ್ರಮೇಧ. ಇದೊಂದು ಕರುಣರಸದ ಕಾರಂಜಿ; ಬಹಳ ಸೊಗಸಾಗಿದೆ. ಮೂರನೆಯದು ಕೃಷ್ಣಾಕುಮಾರಿ. ಸಾಮಾನ್ಯ ಸಾಹಿತ್ಯ ಕೃತಿಗಳಲ್ಲಿಯ ಪಾತ್ರಗಳಂತೆ ಕೃಷ್ಣಾಕುಮಾರಿಯುವಾದರೂ ಪರಂಪರಾಗತ ಸ್ತ್ರೀಪಾತ್ರ, ವಿಪತ್ತಿನಲ್ಲಿ ಆತ್ಮಹತ್ಯೆ ಮಾಡಿಕೊಳ್ಳುವ ದಳ್ಳೆ ಧೀರೆಯೆಂಬ ನಮ್ಮ ಸಾಂಪ್ರದಾಯಿಕ ಬುದ್ಧಿಯ ವೀರನಾರಿಯವಳು. ಈ ಕಥೆಯನ್ನು ಈ ರೀತಿಯಲ್ಲಿ ಕೊಟ್ಟಿದ್ದರ ಸಾರ್ಥಕತೆ ಅಸಂಪೂರ್ಣ. "ಸುಕುಮಾರದಮುತಿ"ಯಾದ ರಸಿಕರಿಗೆ ಇಲ್ಲಿ ಅವಳಪ್ಪನ ಹೇಡಿತನದ ಜುಗುಪ್ಸೆಯುಂಟಾಗಿ ಬೀಭತ್ಸ ರಸಪ್ರಸವಾಗಬಹುದು. ಇದು ನಮ್ಮ ಹಿಂದಿನ ರಜಪೂತರ ನಡೆನುಡಿಗಳ ಅನಾಗರಿಕತೆಯನ್ನು ತೋರಿಸುತ್ತದೆ; ಸ್ತ್ರೀಯನ್ನು ರತ್ನದಂತೆ ಜಡಪದಾರ್ಥವೆಂದು ಗ್ರಹಿಸಿ ಅದರ ಲಾಭಕ್ಕಾಗಿ ಬಿಟ್ಟು ಕೊಡುವ ತಾಮಸೀ ವೃತ್ತಿಯನ್ನು ಬಯಲಿಗೆಳೆಯುತ್ತದೆ; ಸ್ತ್ರೀಯರು ತಾವು "ಪತ್ನಾರ್ದ್ರ ರತ್ನದಂತೆ ಪರರಿಂದ ಪಾಲಿಸಲ್ಪಡುವವು" ಎಂದು ತಿಳಿದುಕೊಂಡಿರುವುದನ್ನು ಸೂಚಿಸುತ್ತದೆ. ನಾಲ್ಕನೆಯದಾದ ತರುಣ ಧರ್ಮದಲ್ಲಿ ಭಟ್ಟರು ಸದುಪದೇಶ ಮಾಡಿದ್ದಾರೆ. ಅದರಲ್ಲಿ ಬರುವ ಮುದಿರೆಯಾದರೂ ಹೊರಗೆ "ಬಹುಧಾ ಕೃಷ್ಣ್ಯಮಾನಾಪಿ ಮಂದ ಮಂದಮುಪೋಮುಖೀ ಅಂಗುಷ್ಠಾಗ್ರೇಣ ಲಿಖಿತಿ" ಎಂಬಂತಿರುವ ಪುರಾಣ ಕವಿಪ್ರಿಯಳಾದ ಮುಗ್ಧೆ. ಆದರೆ ಅವಳ ಮುಗ್ಧತೆ ತೋರಿಕೆಯದು, ಒಳಗೆ ನೋಡಿದರೆ ಜ್ವಾಲಾಮುಖಿ! ತರುಣನು ಸ್ವಾಭಾವಿಕವಾಗಿ ಮಧ್ಯಯುಗದ ರಜಪೂತ ವೀರರ ತಲೆಯವನಾಗಿರಲೇಬೇಕಲ್ಲವೆ? "ಪ್ರೀತಿ ನಾಮಾಪಿ ಮಧುರಂ" ಎಂದು ಎತ್ತಿಕೊಂಬ ಸೌಂದರ್ಯೋಪಾಸಕತೆ, "ಧರ್ಮಯುದ್ಧದ ಪರಾಕ್ರಮಪ್ರದರ್ಶನ ಬುದ್ಧಿ ಇವು ಅವರಿಗೆ ಭೂಷಣಗಳಲ್ಲವೆ? ಇಲ್ಲಿ ಪಂಡಿತ ಸಹಜ ಧಂಮೋಲ್ಲಾಂಘೀನ್ಯವಿಲ್ಲ.

ಭಟ್ಟರ ಶೈಲಿ ಸೊಗಸಾಗಿದೆ. ನಿಸರ್ಗಸರಳ ಸೌಂದರ್ಯವೇ ಅವರ ರಚನಾಕಲೆಯ ವೈಶಿಷ್ಟ್ಯ. ಈ ಬರಹದ ಭಾಷೆ, ಛಂದಸ್ಸು, ವ್ಯಾಕರಣ, ಬಂಧ, ರಸಸ್ಫೂರ್ತಿ ಒಳ್ಳೆಯ ಮಾದರಿಯವಾಗಿವೆ; ತರುಣ ಕವಿಗಳಿಗೆ ಮಾರ್ಗದರ್ಶಕಗಳಾಗಿವೆ.

"ಐಕ್ಯಗಾನ"ವೊಂದು "ಪ್ರಗತಿಶೀಲ" ಕವನ ಸಂಗ್ರಹ. ಅದನ್ನು "ರಕ್ತಮಸಿ"ಯಿಂದ ಬರೆಯಲಾಗಿದೆ. ಈ ಅರ್ಥದ ಶೈಲಿಯ ಅಸಂಬದ್ಧ ಪ್ರಲಾಪಗಳಲ್ಲಿ ಭಾವಸ್ಪಂದನ ಅವೇಶವೇ ಜಾಸ್ತಿ, ಬೆಂಕಿಗಿಂತ ಹೊಗೆಯದೇ ಹಾವಳಿ. ಬೆಳ್ಳಗೆ ಹೇಳುವುದು ಅನವಶ್ಯಕವೆಂಬುವದನ್ನು ಓದುಗರು ಅರಿತುಕೊಳ್ಳದಿರರು.

"ಗಾನಕೇಳಿ"ಯಲ್ಲಿ ೪೦ ಪದ್ಯಗಳಿವೆ. "ಪ್ರಥಮ ಚುಂಬನೇ ದಂತಭಂಗಃ" ಎಂಬಂತೆ ಇಲ್ಲಿ "ಮೈಸೂರು ಮಲ್ಲಿಗೆ"ಯಲ್ಲಿಯ ಒಂದು ಪದ್ಯದ ಅನುಕರಣ ಮತ್ತು ಸಾಮಾನ್ಯವಾದ ಅಳಿಕುಸುಮ ರೂಪಕದ ಮೂಲಕ "Oats charing the horses ಹುಡುಗರು ಹುಡುಗಿಯರ ಬೇಟೆಗೆ ಹೊರಡುವ" "ಮತ್ತು ಹುಡುಗಿಯರು ಭ್ರೂವಲ್ಲಿಕಾಂಡದ ಕಳೆಯಿಂದ ಹುಡುಗರನ್ನು ಕರೆವ ಭಾವದ ವಿವರಣ ಇವು ಮೊದಲ ಪದ್ಯದಲ್ಲೇ ಕಂಡುಬರುವವು. ಹುಲು ಮಾತುಗಳಲ್ಲಿ ವಿಶ್ವತತ್ವಗಳ ಬಗ್ಗೆ ಬರೆಯಹೋದ ಕೆಲವು ನುಡಿಗಳು ಎಳೆಯ ಮಗು ಬಯಲು ಸೀಮೆಯ ನೀರುತುಂಬಿದ ಹೆಗ್ಗೊಡವನ್ನೆತ್ತಲು ಹೋದ ಹಾಗಾಗಿದೆ. ಮುನ್ನುಡಿಕಾರರೆಂದಂತೆ ಈ ಕವಿತೆಗಳು" ನಿರ್ದುಷ್ಟವಲ್ಲ, ಪರಿಪಕ್ವವಿಲ್ಲ." "ಕಲ್ಯಾಣ" ಸ್ತ್ರೀಕೃತಿಯೆಂದ ಮೇಲೆ ಪ್ರೋತ್ಸಾಹ ಕೊಡಲೇಬೇಕು. ಆದರೆ ಇಂದಿನ ತಾಮಸ ಯುಗದಲ್ಲಿ ಪ್ರೋತ್ಸಾಹವನ್ನೇ ಯಥಾರ್ಥವೆಂದು ತಿಳಿದುಕೊಳ್ಳುವ "ಅಲ್ಪಸಂತುಷ್ಟತಾಬುದ್ಧಿ" ಯ ಮತ್ತು "ಸೀಜೋಹಂಭಾವ"ದ ಪ್ರಸರಣ ಕಂಡುಬರುತ್ತಿರುವುದರಿಂದ ಈ ಸಂಗ್ರಹವನ್ನು ನಗ್ನವಾಗಿ ವಿಮರ್ಶಿಸಬೇಕಾಗಿದೆ. ಸಾಮಾನ್ಯವಾಗಿ ಸ್ತ್ರೀಸಹಜವೆನಿಸಿದ್ದ ಅತಿರೇಕವೇ ಈ ಕವಿತೆಗಳಲ್ಲಿ ಕಂಡುಬರುತ್ತವೆ ಒಂದೇ ಸನ್ಯಾಸಿ ಇಲ್ಲವೆ ಸೂಳೆ! ಮಧ್ಯ ಮಾರ್ಗದ ರಸಿಕತೆ ಇಲ್ಲವೇ ಇಲ್ಲ. ಇಲ್ಲಿ ಸನ್ಯಸ್ತ ಭಾವನೆಗಳ ಉಲ್ಲೇಖ, ಭಕ್ತಿಭರ ನಮ್ರತೆ, ಪುರುಷಭಯ ಮತ್ತು ಇತರ ಸಾಮಾನ್ಯ ಭಾವನೆಗಳನ್ನು ಅತಿಸಾಮಾನ್ಯವಾದ ಗದ್ಯಗತಿಯಲ್ಲಿ ಮೂಡಿಸಲಾಗಿದೆ. ಒಳ್ಳೆಯ ಸೀತೆಯಂಥ ಜೀವ ಜಾನಕಮ್ಮನದು ಎಂದು ಪದ್ಯ ಓದಿದವರಿಗೆನಿಸದಿರದು. ಈ ಒಳ್ಳೆಯತನವು "ಅಶಕ್ತೋಽದುರ್ಬಲ: ಸಾಧುಃ" ಎಂಬ ಪಂಕ್ತಿಗೆ ಸೇರಿದ್ದಾಗಿ ತೋರುವುದಲ್ಲದೆ ಇಲ್ಲಿ ಹೃಬ್ಬುದ್ಧಿಗಳನ್ನು ತಣಿಸುವ ರಸಸ್ಯಂದಿತ್ವದ ತೀವ್ರತೆ ಎಲ್ಲಿಯೂ ಕಾಣಸಿಗದು. ಚಿಚ್ಛಕ್ತಿಯ ಬಗ್ಗೆ ಬರೆವ ಈಕೆಯಾದರೂ ಮೇಲಿನ ತ್ರಿಮೂರ್ತಿಗಳಂತೆ ಸಣ್ಣ ಬಾಯಿಂದ ದೊಡ್ಡ ತುತ್ತನ್ನು ನುಂಗಹೋದಾಕೆಯೇ ಎನ್ನದಿರಲಾಗದು.

ಬಾಳಿನ ಚಿತ್ರಗಳು

ಲೇಖಕರು – ಶ್ರೀ ಬಿ. ಎಂ. ಇದಿನಬ್ಬ. ಪ್ರಕಾಶಕರು– ಬಿ. ಎಂ. ಇದಿನಬ್ಬ, ಬಂದರ್, ಮಂಗಳೂರು, ೬೮ ಪುಟ. ಹನ್ನೆರಡಾಣೆ.

ಸವಿಗನಸು

ಲೇಖಕರು - ಶ್ರೀ ವಿ. ಬಿ. ಈಶ್ವರರಾವ್, ಪ್ರಕಾಶಕರು - ಮೇಲಿನವರೆ. ೮೦ ಪುಟ. ರೂ. ೧/–

ವೃಷ್ಟಿಧಾರೆ

ಲೇಖಕರು – ಶ್ರೀ 'ಧನ್ವಂತ"; ಪ್ರಕಾಶಕರು. ಎಚ್. ಎನ್. ರಾವ್ ಬ್ರದರ್ಸ, ಚಿಕ್ಕಪೇಟೆ ಬೆಂಗಳೂರು. ೬೪ ಪುಟ. ಹನ್ನೆರಡಾಣೆ.

ಶ್ರೀ ಇದಿನಬ್ಬರು ಕನ್ನಡದ ಕೈಬೆರಳಲ್ಲೆಣಿಸಬಹುದಾದಷ್ಟು ಮುಸ್ಲಿಂ ಲೇಖಕರಲ್ಲಿ ಒಬ್ಬರು. ಅವರು ತೋರಿಸಹೊರಟಿರುವ ೧೪ ಬಾಳಿನ ಚಿತ್ರಗಳಲ್ಲಿ ಅಧಿಕ ಸಂಖ್ಯೆಯವು ದಕ್ಷಿಣ ಕನ್ನಡದ "ಮಾಪಿಳ್ಳೆ" ಮುಸ್ಲಿಮರ ಜೀವನವನ್ನು ಕುರಿತವು. ಜಾತಿ ಬೇರಾದ್ದಿದ್ದರೂ ಬಡತನದ ಬೇಗುದಿ ಒಂದೆ, ಶ್ರೀಮಂತಿಕೆಯ ದರ್ಪವೂ ಒಂದೇ ಎಂದು ಶ್ರೀ ಇದಿನಬ್ಬರು ತೋರಿಸಿದ್ದಾರೆ. ಇಲ್ಲಿರುವುವೆಲ್ಲ ಕತೆಗಳ ಲಕ್ಷಣಕ್ಕೆ ಒಳಪಟ್ಟಿವೆಯೆಂದು ಹೇಳಲಾಗದು. ಪರಿಪಕ್ವ ಸಾಹಿತ್ಯ ಕೃತಿಗಳೆಂದೂ ಸ್ವಯಂ ಲೇಖಕರೂ ಸಾಧಿಸುವದಿಲ್ಲ. ಆದರೆ ಸಾಹಿತ್ಯ ನಿರ್ಮಿತಿಯ ಸಾಮರ್ಥ್ಯದ ಅಂಕುರವನ್ನು ಲೇಖಕರಲ್ಲಿ ಕಾಣಬಹುದು. ಮುಸ್ಲಿಂ ಸಮಾಜದೊಳಗಿನವರಾಳನ್ನು ಇನ್ನೂ ಪರ್ಯಾಪ್ತವಾಗಿ ಚಿತ್ರಿಸುವವರು ನಮ್ಮ ಸಾಹಿತ್ಯಕ್ಕೆ ಬೇಕಾಗಿದ್ದಾರೆ. ಶ್ರೀ ಇದಿನಬ್ಬರಿಗೆ ಕನ್ನಡಿಗರು ಅವಶ್ಯ ಪ್ರೋತ್ಸಾಹ ಕೊಡಬೇಕು. ಅವರಾದರೂ ತಮ್ಮ ಶೈಲಿಯಲ್ಲಿರುವ ಕೆಲ ಬಾಲಿಶತೆಗಳನ್ನು ಬಿಡಬೇಕು. ಉದಾಹರಣೆಗಾಗಿ, 'ಬಡವನಾದರೂ ಮರ್ಯಾದೆಗೆ ಶರಣು ಹೋಗಲೇಬೇಕೆಂಬದು ಅವನ ಹೃದಯದಿಂದ ಬಂದ ಬಿಚ್ಚು ನುಡಿ' ಇತ್ಯಾದಿ.

ಶ್ರೀ ವಿ. ಬಿ. ಈಶ್ವರ ರಾಯರ 'ಸವಿಗನಸು' ತೆಲುಗಿನಿಂದ ಅನುವಾದ ಹೊಂದಿದ್ದು ಮೂಲ ಲೇಖಕರು ಶ್ರೀ ಎಂ. ಎನ್. ಮೂರ್ತಿಯವರು. ಈಗ ಕಾಲದ ಮಡುವಿನಲ್ಲಿ ಮುಳುಗುತಿರುವ ಭಾರತದ ತುಂಡರಸರನ್ನು ಕುರಿತು ಮನೋರಂಜಕವಾದ ವಿಡಂಬನಗಳು ಇದರಲ್ಲಿವೆ. ಕೆಲವೆಡೆ ಅತಿರೇಕದ ಅತಿಶಯೋಕ್ತಿ ದೋಷವೂ ಅನೇಕ ಶಬ್ದ ದೋಷಗಳೂ ಇದ್ದರೂ ಪುಸ್ತಕ ತುಂಬ ಸ್ವಾರಸ್ಯವಾಗಿದೆ.

"ವೃಷ್ಟಿಧಾರೆ"ಯ ಶ್ರೀ 'ಧನ್ವಂತ'ರೊಡನೆ ವಾದ ಮಾಡಿ ಫಲವಿಲ್ಲ. ಏಕೆಂದರೆ ವಾಕ್ಯಗಳಿಗೆ ಒಂದು ಅನ್ವಯ, ವ್ಯಾಕರಣ ಇರಬೇಕೆಂದೇ ಇವರಿಗೆ ಧ್ಯಾಸವಿಲ್ಲ. ಅವರಿಗೆ ನಾವು ಸೂಚಿಸಬಹುದಾದ ಮೊಟ್ಟಮೊದಲ ಸಲಹೆಯೆಂದರೆ ಅವರು ಮೂಲ ಪಾಠಶಾಲೆಯ ಮೂರನೆ ವರ್ಗದಲ್ಲಿ ಭಾಷಾಪಾಠವನ್ನು ಇನ್ನೊಮ್ಮೆ ಕಲಿಯಬೇಕೆಂದು. ಶಬ್ದಗಳಿಗೆ ಅವರು ಕೊಟ್ಟದ್ದೇ ಅರ್ಥ. ಕೆಲ ಮುಕ್ತಾಫಲಗಳು: "ಕಲ್ಪನಾಶಕ್ತಿ ಒಂದು ಅಪೂರ್ವ ಲಕ್ಷಣ ಮಾತುಗಾರನಿಗೆ ಹಸ್ತಗತವಾಗಿತ್ತು." "ಬೇಗಂ ಹೊತ್ತಾದ ಮೇಲೆ, ಇರುಳು ಮಂಚವನ್ನೇರಿ ನಿದ್ರಿಸುತಿದ್ದಾಗಲೂ ಆಟಗಾರರು ಆಟ ಮುಗಿಸುತಿರಲಿಲ್ಲ" "ಕೊನೆಗೆ ನಮ್ಮ ಬೀದಿಯಲ್ಲಿ ನಿಂತ ಸುಂದರ ಗೃಹವಾಗಿತ್ತು" "ಪತ್ರಿಕೆಗಳೇನೋ ಬಹಳ ಒಡೆಯನಿಂದ ಮಾಯವಾಗಿತ್ತು" ಇತ್ಯಾದಿ. ಇನ್ನು ಇಲ್ಲಿ ನಾನಾ ಭಾಷೆಗಳಿಂದ ಅನುವಾದಿಸಲ್ಪಟ್ಟ ಕತೆಗಳಲ್ಲಿಯೂ ಅಧಿಕಾಂಶ ಅನುವಾದಕ್ಕೆ ಅನರ್ಹವೇ ಆಗಿವೆ.

ಭಾವಪಾತ್ರಗಳು

ಬರೆದವರು ಶ್ರೀ ಜ. ಪ. ಚನ್ನಬಸವರಾಜ ದೇಶಿಕೇಂದ್ರ ಸ್ವಾಮಿಗಳು, ಜಗದ್ಗುರು, ನಿಡುಮಾಮಿಡಿ ಶ್ರೀಶೈಲ ಸಂಸ್ಥಾನ, ಗೂಳೂರು. ಪ್ರಕಾಶಕರು ಜ. ನಿ. ಪ್ರಬೋಧ ಪುಸ್ತಕ ಮಾಲೆ, ಜಿ. ವಿ. ಛತ್ರ, ಚಿಕ್ಕಪೇಟೆ, ಬೆಂಗಳೂರು ಸಿಟಿ. ಪುಟ ೫೩, ಬೆಲೆ ಹತ್ತಾಣೆ

ಇದರಲ್ಲಿ ಮುಪ್ಪಿನ ಷಡಕ್ಷರಿಯ ಭಕ್ತಿಗೀತಗಳನ್ನು ಸಂಕಲಿಸಿ ಭಾವ ಪಾತ್ರಗಳೆಂದು ಕರೆಯಲಾಗಿದೆ. ಸಂಸಾರವನ್ನು ನಿಸ್ಸಾರವೆಂಬ ಲೋಕಾತೀತ ಜೀವನದ ಸೊಬಗು ಇಲ್ಲಿ ಲೌಕಿಕ ಧ್ವನಿಯಲ್ಲಿ ಹೊರಸೂಸಿದೆ. ಹಿಂದುಸ್ಥಾನದಲ್ಲಿ ಎಲ್ಲರನ್ನು ವೃದ್ಧರನ್ನಾಗಿ ಮಾಡುವ ಈ ನಿವೃತ್ತಿಮಾರ್ಗ ಸಮಾಜ ಹಿತಕ್ಕೆ ಭಂಗ ತರುವಂಥದೆಂಬುದು ತರ್ಕಶುದ್ಧವಾದರೂ ಕಾವ್ಯವೆಂಬ ಬುದ್ಧಿಯಿಂದ ಭಾವನಾವಶರಾದರೆ ಈ ಭಾವ ಲಹರಿಯಲ್ಲಿ ಸುಖವಾಗಿ ರಸಿಕರು ತಲ್ಲೀನರಾಗಿ ಜಗದ ಜಂಜಡದಿಂದ ಉಂಟಾದ ಬೇಸರವನ್ನು ಅರೆನಿಮಿಷವಾದರೂ ಮರೆಯಬಹುದಾಗಿದೆ. ಈ ಪರಮ ಪ್ರೀತಿ ಅಥವಾ ಭಕ್ತಿ ನಾಗರಿಕತೆಯ ಹೂವೆ ಸೈ. ಅದು ನಿವೃತ್ತರಲ್ಲೂ ಹೊಸ ವಿಧದ ಪ್ರವೃತ್ತಿಯ ಸೌಂದರ್ಯವನ್ನು ಬಿಂಬಿಸುವಂಥದು.

ಆರ್ಯಸಮಾಜವೆಂದರೇನು?

ಬರೆದವರು: ಶ್ರೀ ಲಕ್ಷ್ಮಣದೇವ ವಿದ್ಯಾರ್ಥಿ, ಪ್ರಕಾಶಕರು: ಸದ್ಧರ್ಮ ಪ್ರಚಾರಕ ಗ್ರಂಥಮಾಲೆ, ಮಂಗಳೂರು. ಪುಟ ೨೨, ಬೆಲೆ ನಾಲ್ಕಾಣೆ ಒಂಬತ್ತು ಪೈ.

ಭ್ರಾಂತ ಜೀವನ (ಮರಾಠಿ ನಾಟಕ ಸಂಗ್ರಹ)

ಬರೆದವರು: ಮತ್ತು ಪ್ರಕಾಶಕರು ಶ್ರೀ ಪ್ರೇಮಾ ಕಂಟಕ, ಪ್ರಮುಖ, ಮಹಾರಾಷ್ಟ್ರ ಸ್ತ್ರೀ ಸಂಘಟನಾ ಸಮಿತಿ, ಮು. ಪೋ. ಸಾಸವಾಡ, ಜಿ. ಪುಣೆ.

United Asia

ಸಂಪಾದಕರು: ಶ್ರೀಗಳಾದ ಜಿ. ಎಸ್. ಪೋಹೇಕರ್ ಮತ್ತು ಯು. ಆರ್. ರಾವ್. ಪ್ರಕಾಶಕರು ಯುನೈಟೆಡ್ ಏಶಿಯ ಆಫೀಸಿಸ್, ೨೧, ನೋಬಲ್ ಚೇಂಬರ್ಸ್, ಪಾರ್ಸಿ ಬಜಾರ್ ಸ್ಟ್ರೀಟ್, ಫೋರ್ಟ್, ಬಾಂಬೆ. ಪುಟ ೬೪, ಬೆಲೆ ೧ರೂ. ೨ ವಾರ್ಷಿಕ ಚಂದಾ ರೂ. ೨೦

ಈ ಮಾಸಿಕವು ಮುದ್ರಣದಲ್ಲಿಯೂ ವಿಷಯ ಗಾಂಭೀರ್ಯದಲ್ಲಿಯೂ ಯಾವ ವಿದೇಶೀ ಪತ್ರಿಕೆಗೂ ಸರಿಗಟ್ಟುವಂತಿದೆ. ಇದರಲ್ಲಿ ಭಾರತೀಯ ಮತ್ತು ಅನ್ಯದೇಶೀಯ ಶ್ರೇಷ್ಠ ವಿದ್ವಾಂಸರ ವಿಚಾರ ಪರಿಪ್ಲುತ ಲೇಖನಗಳಿವೆ. ಏಶಿಯದ ಅಂತಾರಾಷ್ಟ್ರೀಯ ವಿಷಯಗಳಿಗೇ ಈ ಪತ್ರಿಕೆ ಮೀಸಲಾಗಿದೆ. ಇಂಥ ಅಭೂತಪೂರ್ವ ಕಾರ್ಯವನ್ನು ಕೈಕೊಂಡ ಸಂಪಾದಕರು ಅಭಿನಂದನೀಯರೇ ಸರಿ. ಇವರಿಗೆ ನಾವು ಹೃತ್ಪೂರ್ವಕವಾಗಿ ಯಶಸ್ಸನ್ನು ಕೋರುತ್ತೇವೆ.

Gateway to Astrology

ಬರೆದವರು: ಶ್ರೀ ವಿ. ಸೀತಾರಾಮ ಶರ್ಮ ಪ್ರಕಾಶಕರು: ಕಲ್ಪತರು ಪಬ್ಲಿಕೇಶನ್ಸ್, ಬಳೇಪೇಟೆ, ಬೆಂಗಳೂರು. ಪುಟ ೧೪೨ ಬೆಲೆ ರೂ. ೨

ಇದರಲ್ಲಿ ಫಲಜ್ಯೋತಿಷದ ಮೂಲ ತತ್ವಗಳನ್ನು ಕೊಡಲಾಗಿದೆ. ಇದರಲ್ಲಿಯ ಇಂಗ್ಲೀಷು ತೀರ ಅಬದ್ಧವಿದೆ.

ಗೋವೆಯಲ್ಲಿ ಭಿಕ್ಷೆ ಬೇಡುವದನ್ನು ಅಪರಾಧವೆಂದು ಸಾರಲಾಗಿದೆ. ಶಾರೀರಿಕ ವ್ಯಂಗ ಮೊದಲಾದವುಗಳ ಮೂಲಕ ಭಿಕ್ಷೆಗೆಳೆಸುವರಿಗೆ ತಿಂಗಳಿಗೆ ೬ ರೂ. ಪೋಟಗಿ ಕೊಡಲಾಗುವದು.

ಈ ಪತ್ರಿಕೆಯನ್ನು ಹುಬ್ಬಳ್ಳಿ ಸಂಯುಕ್ತ ಕರ್ನಾಟಕ ಮುದ್ರಣಾಲಯದಲ್ಲಿ "ಲೋಕಶಿಕ್ಷಣ ಟ್ರಸ್ಟಿನ" ಪರವಾಗಿ ಹ. ರಾ. ಮೊಹರೆಯವರು ಮುದ್ರಿಸಿ ಪ್ರಕಟಿಸಿದರು.